ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ


ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಫೆಬ್ರವರಿ 04, 2021

ಸಂಪುಟ : 47 ಸಂಚಿಕೆ : 276 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com

## ಅಂತರರಾಷ್ಟ್ರೀಯ ತಾರೆಯರಿಂದ ರೈತರಿಗೆ ಬಲ

**ಮಾಜಿ ಲೈಂಗಿಕ ತಾರೆಯಿಂದ ಪರಿಸರ ಕಾರ್ಯಕರ್ತೆಯರವರೆಗೆ ರೈತರ ಹೋರಾಟಕ್ಕೆ ಹರಿದು ಬಂದ ಬೆಂಬಲ**



ರೈತ ಪ್ರತಿಭಟನೆಗೆ ಮಿಯಾ ಖಲೀಫಾ ಬೆಂಬಲ

ನವದೆಹಲಿ, ಫೆ. 3 – ಲೈಂಗಿಕ ಚಿತ್ರಗಳ ಮಾಜಿ ನಟಿ ಮಿಯಾ ಖಲೀಫಾರಿಂದ ಹಿಡಿದು, ಪರಿಸರ ಕಾರ್ಯಕರ್ತೆ ಗ್ರೆಟಾ ಥುನ್‌ಬರ್ಗ್, ಅಮೆರಿಕದ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಸಂಬಂಧಿಯವರೆಗೆ ಹಲವಾರು ಅಂತರ ರಾಷ್ಟ್ರೀಯ ವ್ಯಕ್ತಿಗಳು ಕೇಂದ್ರ ಸರ್ಕಾರದ ಕೃಷಿ ಕಾಯ್ದೆಯ ವಿರುದ್ಧ ಪ್ರತಿಭಟಿಸುತ್ತಿರುವ ರೈತರಿಗೆ ಬೆಂಬಲಿಸಿದ್ದಾರೆ.

ರೈತರ ಪ್ರತಿಭಟನೆ ಸ್ಥಳದಲ್ಲಿ ಅಂತರ್ಜಾಲ ಕಡಿತಗೊಳಿಸಲಾಗಿತ್ತು. ಇದನ್ನು ಪ್ರಶ್ನಿಸಿ ಪಾಪ್ ತಾರೆ ರಿಹಾನ್ನಾ ಟ್ವೀಟ್ ಮಾಡಿದ್ದರು. ನಂತರದಲ್ಲಿ ಅಂತರರಾಷ್ಟ್ರೀಯ ಖ್ಯಾತನಾಮರು ಪ್ರತಿಭಟನಾ ನಿರತ ರೈತರಿಗೆ ಬೆಂಬಲ ವ್ಯಕ್ತಪಡಿಸಿದ್ದಾರೆ.

ಲೈಂಗಿಕ ಚಿತ್ರಗಳ ಮಾಜಿ ನಟಿ ಮಿಯಾ ಖಲೀಫಾ ಅವರು ರೈತರಿಗೆ ಬೆಂಬಲಿಸಿದ್ದು,



ಅಂತರ್ಜಾಲ ಕಡಿತಗೊಳಿಸಿರುವುದು ಮಾನವ ಹಕ್ಕುಗಳ ಉಲ್ಲಂಘನೆ ಎಂದಿದ್ದಾರೆ.

ರೈತರ ಪ್ರತಿಭಟನೆ ನಟನೆ ಎಂದು ಕೆಲವರು ಟೀಕಿಸುತ್ತಿರುವುದನ್ನೂ ಅವರು ಲೇವಡಿ ಮಾಡಿದ್ದು, ನಾನು ರೈತರನ್ನು ಬೆಂಬಲಿಸುತ್ತೇನೆ ಎಂದಿದ್ದಾರೆ.

ನಾವು ಭಾರತದಲ್ಲಿ ರೈತರು ನಡೆಸುತ್ತಿರುವ ಪ್ರತಿಭಟನೆಗೆ ಜೊತೆಯಾಗಿ ನಿಲ್ಲಲಿದ್ದೇವೆ ಎಂದು ಥುನ್‌ಬರ್ಗ್ ಟ್ವೀಟ್ ಮಾಡಿದ್ದಾರೆ. ರೈತರ ಪ್ರತಿಭಟನೆಗೆ ನೆರವಾಗುವ ವಿಧಾನಗಳ ಬಗ್ಗೆಯೂ ಅವರು ಕೆಲ ದಾಖಲೆ ಹಂಚಿಕೊಂಡಿದ್ದಾರೆ. ಸರ್ಕಾರದ ವಿರುದ್ಧ ಟ್ವೀಟ್ ಹಂಚಿಕೊಳ್ಳಬೇಕು, ಭಾರತದ ರಾಯಭಾರಿ ಕಚೇರಿಗಳ ಹೊರಗೆ ಪ್ರತಿಭಟಿಸಬೇಕು ಎಂದೂ ಅವರು ಕರೆ ನೀಡಿದ್ದಾರೆ.

ಅಮೆರಿಕದ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಸಂಬಂಧಿ ಮೀನಾ ಹ್ಯಾರಿಸ್ ಅವರು ಟ್ವೀಟ್ ಮಾಡಿದ್ದು, ಅಮೆರಿಕದ ಆಡಳಿತ ಸಂಕೀರ್ಣವಾದ ಕ್ಯಾಪಿಟಲ್ ಹಾಲ್ ಮೇಲೆ ನಡೆದ ದಾಳಿ ಹಾಗೂ ರೈತರ ಪ್ರತಿಭಟನೆಗಳನ್ನು ಹೋಲಿಕೆ ಮಾಡಿದ್ದಾರೆ.

ರೈತರ ಪ್ರತಿಭಟನೆಗಳ ಬಗ್ಗೆ ನಾವು ಏಕೆ ಮಾತನಾಡುತ್ತಿಲ್ಲ? ಎಂದು ರಿಹಾನ್ನಾ ಪ್ರಶ್ನಿಸಿದ್ದಾರೆ.

ಒಂಭತ್ತು ವರ್ಷದ ಪರಿಸರವಾದಿ ಲಿಕಿಪ್ರಿಯ ಕಂಗುಜಮ್ ಅವರು ರೈತರ (2ನೇ ಪುಟಕ್ಕೆ)

## ರೈತರ ನರಮೇಧದ ಅಪಪ್ರಚಾರ ತಡೆಯಲು ಟ್ವಿಟ್ಟರ್‌ಗೆ ಸೂಚನೆ

ನವದೆಹಲಿ ಫೆ. 3 – ರೈತರ ನರಮೇಧ ಎಂದು ಪ್ರಚಾರ ಮಾಡುವ ಅಂಶಗಳನ್ನು ತೆಗೆದು ಹಾಕುವಂತೆ ಟ್ವಿಟ್ಟರ್‌ಗೆ ತಿಳಿಸಿರುವ ಕೇಂದ್ರ ಸರ್ಕಾರ, ಈ ಬಗ್ಗೆ ಕ್ರಮ ತೆಗೆದುಕೊಳ್ಳದೇ ಇದ್ದರೆ ಕಾನೂನು ಕ್ರಮ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿರುವುದಾಗಿ ಮೂಲಗಳು ತಿಳಿಸಿವೆ.

ಖಾತೆಗಳನ್ನು ತಡೆಯಲು ನಿರ್ದಿಷ್ಟ ಆದೇಶ ನೀಡಿದ್ದರೂ ಸಹ ಏಕಪಕ್ಷೀಯವಾಗಿ ಖಾತೆಗಳ ಮೇಲಿನ ತಡೆಯನ್ನು ತೆರವುಗೊಳಿಸಲಾಗಿದೆ. ಸರ್ಕಾರದ ಆದೇಶವನ್ನು ಟ್ವಿಟ್ಟರ್ ಪಾಲಿಸಬೇಕು. ಇಲ್ಲವಾದರೆ ಕಾನೂನು ಕ್ರಮ ಎದುರಿಸಬೇಕಾಗುತ್ತದೆ ಎಂದು ತಿಳಿಸಲಾಗಿದೆ ಎಂದು ಮೂಲಗಳು ಹೇಳಿವೆ. ಸಾರ್ವಜನಿಕ (3ನೇ ಪುಟಕ್ಕೆ)

## ಪಾಲಿಕೆ ಅಧಿಕಾರಕ್ಕಾಗಿ ಬಿಜೆಪಿ ಮತ್ತೆ ವಾಮಮಾರ್ಗ

**ಸಚಿವ ಆರ್.ಶಂಕರ್, ಎಂಎಲ್‌ಸಿ ಚಿದಾನಂದ ಗೌಡ ಹೆಸರು ಮತದಾರರ ಪಟ್ಟಿಗೆ ಸೇರ್ಪಡೆ ಆರೋಪ, ಪಾಲಿಕೆ ಆಯುಕ್ತರ ಕೊಠಡಿ ಬಳಿ ಕಾಂಗ್ರೆಸ್ ಸದಸ್ಯರ ಪ್ರತಿಭಟನೆ**

ದಾವಣಗೆರೆ, ಫೆ.3- ನಕಲಿ ದಾಖಲೆ ಸೃಷ್ಟಿಸಿ ಮತದಾರರ ಪಟ್ಟಿಯಲ್ಲಿ ಸಚಿವ ಆರ್.ಶಂಕರ್ ಮತ್ತು ವಿಧಾನ ಪರಿಷತ್ ಸದಸ್ಯ ಚಿದಾನಂದಗೌಡರ ಹೆಸರು ಸೇರಿಸಲು ಮುಂದಾಗಿರುವ ಬಿಜೆಪಿ ಮತ್ತೊಮ್ಮೆ ವಾಮ ಮಾರ್ಗದ ಮೂಲಕ ಮಹಾನಗರ ಪಾಲಿಕೆ ಅಧಿಕಾರ ಹಿಡಿಯಲು ಯತ್ನಿಸುತ್ತಿದೆ ಎಂದು ಮಹಾನಗರ ಪಾಲಿಕೆ ಕಾಂಗ್ರೆಸ್ ಸದಸ್ಯರು ಬುಧವಾರ ಆಯುಕ್ತರ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಗೂ ಮುನ್ನ ಪತ್ರಿಕಾಗೋಷ್ಠಿ ನಡೆಸಿ, ಕಾಂಗ್ರೆಸ್ ಮುಖಂಡರು ಬಿಜೆಪಿ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಪಾಲಿಕೆ ವಿಪಕ್ಷ ನಾಯಕ ಎ.ನಾಗರಾಜ್ ಮಾತನಾಡುತ್ತಾ, ಬರಲಿರುವ ಮೇಯರ್ ಹಾಗೂ ಉಪ ಮೇಯರ್ ಚುನಾವಣೆಯಲ್ಲಿ ಬಿಜೆಪಿ ವಾಮ ಮಾರ್ಗದ ಮೂಲಕ ಅಧಿಕಾರ ಹಿಡಿಯಲು ಹೊರಟಿದೆ ಎಂದು ಆರೋಪಿಸಿದರು.

ಸಚಿವ ಆರ್.ಶಂಕರ್ ಹಾಗೂ ವಿಧಾನ ಪರಿಷತ್ ಸದಸ್ಯ ಎಂ.ಚಿದಾನಂದಗೌಡ ಅವರು ದಾವಣಗೆರೆಯಲ್ಲಿ ವಾಸವಾಗಿರದೇ ಇದ್ದರೂ, ಇಲ್ಲಿನ ನಿವಾಸಿಗಳು ಎಂದು ಚುನಾವಣಾ ಅಧಿಕಾರಿಗಳು ಮತದಾರರ ಪಟ್ಟಿಯಲ್ಲಿ ಅವರ ಹೆಸರು ಸೇರ್ಪಡೆಗೊಳಿಸಲು ಸಿದ್ಧತೆ ನಡೆಸಿದ್ದಾರೆ. ಆ ಮೂಲಕ ಅಧಿಕಾರಿಗಳು ಬಿಜೆಪಿ ಏಜೆಂಟರಂತೆ ವರ್ತಿಸುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಅಕ್ರಮವಾಗಿ ಸೇರ್ಪಡೆಗೊಂಡಿದ್ದ ಮುಖಂಡರ ಹೆಸರುಗಳನ್ನು ತೆಗೆದುಹಾಕುವಂತೆ ಡಿಸೆಂಬರ್ 17 ರಂದು ಮತದಾರರ ನೋಂದಣಿ ಅಧಿಕಾರಿಗಳಿಗೆ ಮನವಿ ಮಾಡಿದ್ದೆವು. ಆದಾಗ್ಯೂ ಹೆಸರುಗಳು ಡಿಲೀಟ್ ಆಗಿಲ್ಲ ಎಂದರು.



### ಪ್ರತಿಭಟನೆ ಕೈ ಬಿಡುವಂತೆ ಮಾಡಿದ ಮನವಿಗೆ ತಿರುಗೇಟು

**ಆಯುಕ್ತರ ಕಚೇರಿ ಮುಂದೆ ಪ್ರತಿಭಟನೆ ನಡೆಸುತ್ತಿದ್ದ ವಿಷಯ ತಿಳಿದು ಆಗಮಿಸಿದ ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷ ಕೆ.ಪ್ರಸನ್ನ ಕುಮಾರ್ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಹಿನ್ನೆಲೆಯಲ್ಲಿ ಪ್ರತಿಭಟನೆ ಕೈ ಬಿಡುವಂತೆ ಮನವಿ ಮಾಡಿದರು. ಇನ್ನೂ ಮೇಯರ್ ಚುನಾವಣೆ ನಿಗದಿಯಾಗಿಲ್ಲ. ಮತದಾರರ ಪಟ್ಟಿ ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ತಯಾರಾಗುತ್ತದೆಯೇ ಹೊರತು, ಇಲ್ಲಿ ಅಲ್ಲ ಎಂದು ಹೇಳಿದರು.**

**ಪ್ರಸನ್ನ ಅವರ ಮಾತಿಗೆ ಮತ್ತಷ್ಟು ಅಸಮಾಧಾನಗೊಂಡ ಕಾಂಗ್ರೆಸ್ ನಾಯಕರು, ಈ ಬಾರಿ ಬಿಜೆಪಿ ವಾಮಮಾರ್ಗದಲ್ಲಿ ಅಧಿಕಾರ ಪಡೆಯಲು ಆಸ್ಪದ ನೀಡುವುದಿಲ್ಲ. ಸಂವಿಧಾನದ ಆಶಯದಂತೆ ಮೊದಲು ಕಾರ್ಯ ನಿರ್ವಹಿಸಿ, ಆ ನಂತರ ನಮಗೆ ಬುದ್ದಿವಾದ ಹೇಳಿ ಎಂದು ತಿರುಗೇಟು ನೀಡಿದರು.**

ಈಗ ಅಧಿಕಾರಿಗಳು ಪ್ರಾದೇಶಿಕ ಆಯುಕ್ತರ ಕಚೇರಿಗೆ ಮತದಾರರ ಪಟ್ಟಿ ಕಳುಹಿಸಿದ್ದಾರೆ. ನಾವು ಮತದಾರರ ಪಟ್ಟಿಯನ್ನು ಕೇಳಿದರೆ ಕಳೆದ ಮೂರು ದಿನಗಳಿಂದಲೂ ಅನಗತ್ಯವಾಗಿ ಸಬೂಬು ಹೇಳುತ್ತಾ ಅಲೆದಾಡಿಸುತ್ತಿದ್ದಾರೆ. ಅಕ್ರಮವಾಗಿದ್ದರೆ ಕಾಂಗ್ರೆಸ್ ಮುಖಂಡರ ಹೆಸರನ್ನು ಮತದಾರರ ಪಟ್ಟಿಯಿಂದ ತೆಗೆದು (3ನೇ ಪುಟಕ್ಕೆ)

## ಪ್ರೊ॥ ಅನ್ನಪೂರ್ಣಮ್ಮ ವರದಿಯ ಶಿಫಾರಸ್ಸಿಗೆ ಮಡಿವಾಳ ಶ್ರೀಗಳ ಆಗ್ರಹ

ಹರಪನಹಳ್ಳಿ, ಫೆ.3. - ಮಡಿವಾಳ ಸಮಾಜದವರ ಸೇವೆ ಪ್ರತಿಯೊಂದು ಸಮಾಜದವರಿಗೂ ಅಗತ್ಯವಾಗಿವಾಗಿದ್ದು ಶೈಕ್ಷಣಿಕ. ಆರ್ಥಿಕ, ಸಾಮಾಜಿಕ, ರಾಜಕೀಯ ವಾಗಿ ಮುಂದೆ ಬರಬೇಕಿದೆ ಎಂದು ಚಿತ್ರದುರ್ಗದ ಶ್ರೀ ಬಸವ ಮಡಿವಾಳ ಮಾಚಿದೇವ ಸ್ವಾಮೀಜಿ ಕರೆ ನೀಡಿದರು.

ತಾಲ್ಲೂಕಿನ ಮೈದೂರು, ಬಾಡಾ ಹಾಗೂ ಬೆಣ್ಣೆಹಳ್ಳಿ ಗ್ರಾಮದಲ್ಲಿ ಮಡಿವಾಳ ಮಾಚಿದೇವರ ಜಯಂತ್ಯೋತ್ಸವ ಹಾಗೂ ನಾಮ ಫಲಕ ಅನಾವರಣಗೊಳಿಸಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಹಿಂದಿನ ಪೂರ್ವಜರು ನಮಗೆ ಯಾವುದೇ ರೀತಿಯಿಂದ ಶಿಕ್ಷಣದ ಜ್ಞಾನವನ್ನು ಕೊಡಿಸದೇ ಇರುವುದೇ ನಮ್ಮ ಸಮುದಾಯ ಹಿಂದುಳಿಯಲಿಕ್ಕೆ ಕಾರಣ. ಪ್ರೊ॥ ಅನ್ನಪೂರ್ಣಮ್ಮನವರು ಕುಲಶಾಸ್ತ್ರ ಅಧ್ಯಯನ ಮಾಡಿದ್ದಾರೆ. (2ನೇ ಪುಟಕ್ಕೆ)



**ನಮ್ಮ ರಾಜ್ಯದಲ್ಲಿ ಮಲ ಹೋರುವವರಿಗೆ ಮೀಸಲಾತಿ ಇದೆ, ಆದರೆ, ಮಲ ತೊಳೆಯುವವರಿಗೆ ಮೀಸಲಾತಿ ಸಿಗದೇ ಇರುವುದು ಶೋಚನಿಯ ಸಂಗತಿ. ನಮ್ಮ ಹಕ್ಕನ್ನು ನಮಗೆ ಕೊಡಿ, ಅನ್ನಪೂರ್ಣಮ್ಮ ವರದಿ ಶೀಘ್ರವೇ ಜಾರಿಗೊಳಿಸಿ, ಇಲ್ಲವಾದರೆ ಮುಂದಿನ ದಿನಗಳಲ್ಲಿ ಮಡಿವಾಳ ಸಮುದಾಯದವರು ಶಾಸಕ, ಸಂಸದ ಹಾಗೂ ಸಚಿವರ ಮನೆಗಳ ಮುಂದೆ ಬಟ್ಟೆ ತೊಳೆಯುವ ಮೂಲಕ ವಿನೂತನ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು.**

**- ಎಂಜೇರಪ್ಪ, ಅಧ್ಯಕ್ಷರು, ಅಖಿಲ ಭಾರತ ಮಡಿವಾಳ ಮಹಾಸಭಾ, ರಾಷ್ಟ್ರೀಯ ಘಟಕ.**

## ಚಿತ್ರಮಂದಿರಗಳ ಆಸನ ಭರ್ತಿಗೆ 4 ವಾರ ಅವಕಾಶ



ಬೆಂಗಳೂರು, ಫೆ.3- ಚಿತ್ರ ರಂಗದ ನಿರ್ಮಾಪಕರು, ಕಲಾವಿದರು, ಕಾರ್ಮಿಕರ ಹಿತದೃಷ್ಟಿಯಿಂದ ನಾಲ್ಕು ವಾರಗಳವರೆಗೆ ರಾಜ್ಯದ ಎಲ್ಲ ಚಿತ್ರಮಂದಿರಗಳಲ್ಲಿ ಶೇ. 100ರಷ್ಟು ಆಸನ ಭರ್ತಿಗೆ ಅವಕಾಶ ಮಾಡಿ ಕೊಡಲು ತೀರ್ಮಾನಿಸಲಾಗಿದೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ವಿಧಾನಸೌಧದಲ್ಲಿ ಹಿರಿಯ ನಟರು, ಫಿಲಂ ಛೇಂಬರ್ ಅಧ್ಯಕ್ಷರು, ಪದಾಧಿಕಾರಿ ಗಳೊಂದಿಗೆ ಸಭೆ ನಡೆಸಿದ ಬಳಿಕ ಸುದ್ದಿಗಾರ ರೊಂದಿಗೆ ಮಾತನಾಡಿದ ಸಚಿವರು, ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಸೂಚನೆ ಮೇರೆಗೆ ಸಭೆ ನಡೆದಿದೆ.

ತಾಂತ್ರಿಕ ಸಲಹಾ ಸಮಿತಿಯ ಸಲಹೆ ಮೇರೆಗೆ ರಾಜ್ಯದ ಜನರ ಆರೋಗ್ಯದ ಹಿತದೃಷ್ಟಿಯಿಂದ ಆರೋಗ್ಯ ಇಲಾಖೆಯು ಕೋವಿಡ್ (3ನೇ ಪುಟಕ್ಕೆ)

## ರೈತರ ಹೋರಾಟದಲ್ಲಿ ವಿದೇಶಿ ಮಧ್ಯ ಪ್ರವೇಶ ಬೇಡ

**ಸಚಿನ್, ಅಕ್ಷಯ್ ಸೇರಿ ಹಲವರ ಹೇಳಿಕೆ**

ನವದೆಹಲಿ, ಫೆ. 3 – ರೈತರ ಹೋರಾಟಕ್ಕೆ ಸಂಬಂಧಿಸಿದಂತೆ ಅರ್ಧ ಸತ್ಯಗಳು ಹಾಗೂ ಭಿನ್ನಾಭಿಪ್ರಾಯಗಳನ್ನು ಸೃಷ್ಟಿಸುವವರ ಕಡೆ ಗಮನ ಹರಿಸದೇ ಬಿಕ್ಕಟ್ಟನ್ನು ಬಗೆಹರಿಸಲು ಸರ್ಕಾರ ಪ್ರಯತ್ನ ನಡೆಸುತ್ತಿರುವುದರ ಕಡೆ ಗಮನ ಹರಿಸಬೇಕೆಂದು ಬಾಲಿವುಡ್ ತಾರೆಯರಾದ ಅಕ್ಷಯ್ ಕುಮಾರ್, ಅಜಯ್ ದೇವಗನ್, ಸುನೀಲ್ ಶೆಟ್ಟಿ ಹಾಗೂ ಚಿತ್ರ ನಿರ್ಮಾಪಕ ಕರಣ್ ಜೋಹರ್ ಹೇಳಿದ್ದಾರೆ.

ಮತ್ತೊಂದೆಡೆ ಹೇಳಿಕೆ ನೀಡಿರುವ ಭಾರತೀಯ ಕ್ರಿಕೆಟ್ ತಂಡದ ಮಾಜಿ ನಾಯಕ ಸಚಿನ್ ತೆಂಡೂಲ್ಕರ್, ಭಾರತದ ಸಾರ್ವಭೌಮತ್ವದ ಜೊತೆ ಹೊಂದಾಣಿಕೆ ಮಾಡಿಕೊಳ್ಳಲಾಗದು. ವಿದೇಶಿ ಶಕ್ತಿಗಳು ಭಾರತದ ಆಂತರಿಕ ವಿಷಯದಲ್ಲಿ ಭಾಗಿಯಾಗಬಾರದು ಎಂದಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ಸಚಿನ್, ಭಾರತಕ್ಕೆ ಏನು ಬೇಕು ಎಂಬುದು ಭಾರತೀಯರಿಗೆ ಗೊತ್ತಿದೆ. ದೇಶವಾಗಿ ಒಗ್ಗಟ್ಟಾಗಿರೋಣ (2ನೇ ಪುಟಕ್ಕೆ)

## ಮಲೇಬೆನ್ನೂರಿನ ನೀರಾವರಿ ಕಛೇರಿ ಸ್ಥಳಾಂತರಕ್ಕೆ ಕೈ ಹಾಕಿದರೆ ಹೋರಾಟ

**ಭದ್ರಾ ಮಹಾಮಂಡಳದ ಅಧ್ಯಕ್ಷ ವೈ. ದ್ಯಾವಪ್ಪ ರೆಡ್ಡಿ**

ಮಲೇಬೆನ್ನೂರು, ಫೆ.3- ಪಟ್ಟಣದಲ್ಲಿರುವ ಕರ್ನಾಟಕ ನೀರಾವರಿ ನಿಗಮದ ಭದ್ರಾ ನಾಲಾ ನಂ-3 ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಕಛೇರಿಯನ್ನು ಯಾವುದೇ ಕಾರಣಕ್ಕೂ ಹೊನ್ನಾಳಿಗೆ ಸ್ಥಳಾಂತರ ಮಾಡಲು ಬಿಡುವುದಿಲ್ಲ ಎಂದು ಭದ್ರಾ ಜಲಾಶಯ ಯೋಜನಾ ಮಟ್ಟದ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾಮಂಡಳದ ಅಧ್ಯಕ್ಷ ವೈ. ದ್ಯಾವಪ್ಪ ರೆಡ್ಡಿ ಹೇಳಿದರು.

ಇಲ್ಲಿನ ನೀರಾವರಿ ಕಛೇರಿ ಆವರಣದಲ್ಲಿ ಬುಧವಾರ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಭದ್ರಾ ಅಚ್ಚುಕಟ್ಟಿನ ಕೊನೆ ಭಾಗದ ರೈತರಿಗೆ ಕೇಂದ್ರೀಕೃತವಾಗಿರುವ ಈ ಕಛೇರಿಯನ್ನು ಇಲ್ಲಿಯೇ ಉಳಿಸಬೇಕೆಂದು ಹೋರಾಟ ಮಾಡಲಾಗುವುದೆಂದರು.

ಬಸವಾಪಟ್ಟಣ ಉಪವಿಭಾಗದ ಕಛೇರಿಯನ್ನು ಸಾಸ್ವೆಹಳ್ಳಿ ಉಪವಿಭಾಗಕ್ಕೆ ಸೇರಿಸುವ ಪ್ರಯತ್ನವನ್ನು ತೀವ್ರವಾಗಿ ಖಂಡಿಸಿದ ಅವರು, ಇಂತಹ ಪ್ರಯತ್ನಗಳಿಂದ ಕೊನೆಯ ಭಾಗದ ರೈತರ ಜೊತೆ ಆಟವಾಡಿದಂತಾಗುತ್ತದೆ ಎಂದು ದೂರಿದರು. ಕಳೆದ ಸುಮಾರು 60 ವರ್ಷಗಳಿಂದ ಕಾರ್ಯನಿರ್ವ (2ನೇ ಪುಟಕ್ಕೆ)

## ಅಯೋಧ್ಯೆ ತೀರ್ಪು : ವಕ್ಫ್ ಮಂಡಳಿಗೆ ನೀಡಿದ ಜಮೀನು ತಮ್ಮದೆಂದು ಸಹೋದರಿಯರ ಅರ್ಜಿ

ಲಖ್ನೊ, ಫೆ. 3 – ರಾಮ ಜನ್ಮಭೂಮಿ - ಬಾಬ್ರಿ ಮಸೀದಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಆದೇಶದಂತೆ ಸುನ್ನಿ ಕೇಂದ್ರೀಯ ವಕ್ಫ್ ಮಂಡಳಿಗೆ ನೀಡಲಾಗಿರುವ ಐದು ಎಕರೆ ಜಮೀನು ತಮಗೆ ಸೇರಿದ್ದು ಎಂದು ದೆಹಲಿಯ ಇಬ್ಬರು ಸಹೋದರಿಯರು ಅಲಹಾಬಾದ್ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದಾರೆ.

ಉತ್ತರ ಪ್ರದೇಶ ಸರ್ಕಾರ ಜಮೀನು ನೀಡಿರುವುದನ್ನು ಪ್ರಶ್ನಿಸಿ ದಾಖಲಾಗಿರುವ ಅರ್ಜಿಯ ವಿಚಾರಣೆ ಫೆಬ್ರವರಿ 8ರಂದು ನಡೆಯಲಿದೆ.

ರಾಣಿ ಕಪೂರ್ ಅಲಿಯಾಸ್ ರಾಣಿ ಬಲುಜಾ ಹಾಗೂ ರಮಾ ರಾಣಿ ಪಂಜಾಬಿ ಎಂಬುವವರು ಅರ್ಜಿ ದಾಖಲಿಸಿದ್ದಾರೆ. 1947ರಲ್ಲಿ ದೇಶ ವಿಭಜನೆಯಾದ ಸಂದರ್ಭದಲ್ಲಿ ತಮ್ಮ ತಂದೆ ಗ್ಯಾನ್ ಚಂದ್ರ ಪಂಜಾಬಿ ಅವರು ಭಾರತಕ್ಕೆ ಬಂದಿದ್ದರು. ಆಗ ಅವರಿಗೆ ಅಯೋಧ್ಯೆಯ ಜಿಲ್ಲೆಯಲ್ಲಿ 28 ಎಕರೆ ಜಮೀನು ನೀಡಲಾಗಿತ್ತು ಎಂದು ಅರ್ಜಿದಾರರು ಹೇಳಿದ್ದಾರೆ.

ಆದರೆ, ನಂತರದಲ್ಲಿ ಜಮೀನು ದಾಖಲೆಗಳಿಂದ ತಮ್ಮ ತಂದೆಯ ಹೆಸರನ್ನು ತೆಗೆದು ಹಾಕಲಾಗಿತ್ತು. ಇದರ ವಿರುದ್ಧ ಅಯೋಧ್ಯೆಯ ಹೆಚ್ಚುವರಿ ಆಯುಕ್ತರ ಎದುರು ಅರ್ಜಿ ದಾಖಲಿಸಲಾಗಿತ್ತು ಎಂದು ಸಹೋದರಿಯರು ಹೇಳಿದ್ದಾರೆ.

ಅಧಿಕಾರಿ ವಿಚಾರಣೆ ವೇಳೆಗೆ ತಮ್ಮ ತಂದೆಯ ಹೆಸರನ್ನು ದಾಖಲೆಗಳಿಂದ ತೆಗೆದು ಹಾಕಿದ್ದರು. ಇದರ ವಿರುದ್ಧ ಮೇಲ್ಮನವಿ ಸಲ್ಲಿಸಲಾಗಿತ್ತು. ಅಧಿಕಾರಿಗಳು ಈ ನಡುವೆಯೇ ಜಮೀನು ವಕ್ಫ್ ಮಂಡಳಿಗೆ ನೀಡಿದ್ದಾರೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

## 38ನೇ ವಾರ್ಡಿನ ಉದ್ಯಾನವನಗಳಲ್ಲಿ ಜಿಮ್, ಮಕ್ಕಳ ಆಟೋಪಕರಣಗಳು ಸಾರ್ವಜನಿಕರ ಸೇವೆಗೆ



**ವ್ಯಾಯಾಮದಿಂದ ಆರೋಗ್ಯ ವೃದ್ಧಿಸಿಕೊಳ್ಳಲು ಪಾಲಿಕೆ ಸದಸ್ಯ ಮಂಜುನಾಥ್ ಗಡಿಗುಡಾಳು ಕರೆ**

ದಾವಣಗೆರೆ, ಫೆ.3- ಮಹಾನಗರ ಪಾಲಿಕೆಯ 38ನೇ ವಾರ್ಡ್ ವ್ಯಾಪ್ತಿಯ ಎಂಸಿಸಿ 'ಬಿ' ಬ್ಲಾಕ್‌ನ ಹಿರಿಯ ನಾಗರಿಕರ ಉದ್ಯಾನವನದಲ್ಲಿ ನೂತನವಾಗಿ ಅಳವಡಿಸಿರುವ ವ್ಯಾಯಾಮ ಸಲಕರಣೆಗಳ ಮತ್ತು ಮಕ್ಕಳ ಆಟೋಪಕರಣಗಳ ಪೂಜಾ ಕಾರ್ಯಕ್ರಮವನ್ನು ಇಂದು ನೆರವೇರಿಸುವುದರ ಮೂಲಕ ಸಾರ್ವಜನಿಕ ಸೇವೆಗೆ ಸಮರ್ಪಿಸಲಾಯಿತು.

ಹಿರಿಯ ವರ್ತಕ ಎಸ್.ಟಿ. ಕುಸುಮಶ್ರೇಷ್ಠಿ ಅವರ ಅಧ್ಯಕ್ಷತೆಯಲ್ಲಿ ಮಹಾನಗರ ಪಾಲಿಕೆ ಸದಸ್ಯ ಜಿ.ಎಸ್. ಮಂಜುನಾಥ್ ಗಡಿಗುಡಾಳು ಅವರು ಕಾರ್ಯಕ್ರಮ ಉದ್ಘಾಟಿಸಿದರು.

ಹಿರಿಯ ನಾಗರಿಕರ ಸಂಘದ ಗೌರವ ಕಾರ್ಯದರ್ಶಿ ಎಸ್. ಗುರುಮೂರ್ತಿ, ಸಹಕಾರ್ಯದರ್ಶಿ ಎಂ.ಡಿ. ದೇವಾಚಾರ್, ನಿರ್ದೇಶಕರುಗಳಾದ ವೈ. ವೆಂಕಟರೆಡ್ಡಿ, ಎಸ್. ಹಾಲಪ್ಪ, ಎ. ಜಯಪ್ಪ, ಎಸ್.ಎಂ. ಮಹೇಶ್ವರಯ್ಯ, ಉದ್ಯಾನವನದ ಕಾರಂಜಿ ದಾನಿಗಳಾದ ಬಿ. ಯೋಗಿರೆಡ್ಡಿ, ಕೆ. ಹಾಲಪ್ಪ ಭಾಗವಹಿಸಿದ್ದರು.

ಹೆಚ್. ಬಸವರಾಜಪ್ಪ, ಕೆ.ಎಲ್. ಆಚಾರ್ಯ, ಎಸ್. ಭೀಮಣ್ಣ, ಯುವರಾಜ್, (2ನೇ ಪುಟಕ್ಕೆ)

## ದೆಹಲಿ ರೈತರ ಹೋರಾಟಕ್ಕೆ ಜನಾಂದೋಲನ

**ದಾವಣಗೆರೆ ಜಿಲ್ಲೆಯ ರೈತರೂ ದೆಹಲಿಯತ್ತ ಸಾಗಲು ಸಿದ್ದರಾಗಲು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯಾಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ್ ಕರೆ**

ದಾವಣಗೆರೆ, ಫೆ.3- ದೆಹಲಿಯಲ್ಲಿ ನಡೆಯುತ್ತಿರುವ ರೈತರ ಹೋರಾಟವನ್ನು ಹತ್ತಿಕ್ಕುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಮುಂದಾಗಿದ್ದು, ಈ ರೈತ ಚಳುವಳಿಯಲ್ಲಿ ದಾವಣಗೆರೆ ಜಿಲ್ಲೆ ಸೇರಿದಂತೆ, ಕರ್ನಾಟಕದಿಂದ ರೈತರು ಭಾಗವಹಿಸಲು ದೆಹಲಿಯತ್ತ ಸಾಗಲು ಸಿದ್ದರಾಗುವಂತೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯಾಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ್ ಕರೆ ನೀಡಿದರು.

ಅವರು, ಇಂದು ನಗರದ ಎಪಿಎಂಸಿ ಪ್ರಾಂಗಣದಲ್ಲಿನ ರೈತರ ಭವನದಲ್ಲಿ ನಡೆದ ಸೇನೆಯ ಜಿಲ್ಲಾಮಟ್ಟದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ರೈತ ವಿರೋಧಿ ಕಾನೂನುಗಳನ್ನು ಬಲವಂತವಾಗಿ ಹೇರಲು ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಮೂರು ಕಾಯ್ದೆಗಳ ವಿರುದ್ಧ ಹಾಗೂ ಕನಿಷ್ಟ ಬೆಂಬಲ ಬೆಲೆಗೆ ಬಲಿಷ್ಟ ಕಾಯಿದೆ ರೂಪಿಸಬೇಕು ಮತ್ತು ತನ್ನ ಬೆಳೆಗೆ ತಾನೇ ದರ ನಿಗದಿಪಡಿಸುವ ಅಂಶಗಳನ್ನು ಒಳಗೊಂಡ ಬೇಡಿಕೆಗಳನ್ನು ಮುಂದಿಟ್ಟುಕೊಂಡು ದೆಹಲಿಯಲ್ಲಿ ನಡೆಯುತ್ತಿರುವ ಹೋರಾಟ ಬೆಂಬಲಿಸಿ, ಪಾಲ್ಗೊಳ್ಳಲು ಕರ್ನಾಟಕದಿಂದ ಸಾವಿರಾರು ಸಂಖ್ಯೆಯಲ್ಲಿ ರೈತರು ಸಿದ್ಧರಾಗಬೇಕು ಎಂದು ತಿಳಿಸಿದರು.

ಕೇಂದ್ರ ಸರ್ಕಾರ ಹೋರಾಟವನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿದ್ದರೂ ಇದಕ್ಕೆ ಜಗ್ಗದೇ ಕಳೆದ ಎರಡು ತಿಂಗಳಿನಿಂದ ಚಳಿ, ಮಳೆ, ಬಿಸಿಲನ್ನು ಲೆಕ್ಕಿಸದೆ ನವ ದೆಹಲಿಯಲ್ಲಿ ನಡೆಯುತ್ತಿರುವ ರೈತರ ಹೋರಾಟವನ್ನು ಬೆಂಬಲಿಸಿ ಜಿಲ್ಲೆಯಲ್ಲೂ ತೀವ್ರವಾದ ಚಳವಳಿಗೆ ಚಾಲನೆ ನೀಡುವ ಮೂಲಕ ಜನಾಂದೋಲನವನ್ನಾಗಿ ರೂಪಿಸಬೇಕು. ಕಾಯಿದೆಗಳ ಜಾರಿ ವಿರೋಧಿಸಿ ಮುಂದಿನ ದಿನಗಳಲ್ಲಿ ಶೀಘ್ರವೇ ಇಡೀ ದಿನ ರಾಜ್ಯದ ಹೆದ್ದಾರಿ, ರಾಷ್ಟ್ರೀಯ ಹೆದ್ದಾರಿಗಳನ್ನು ಬಂದ್ ಮಾಡುವ ಹೋರಾಟ ರೂಪಿಸಲಾಗುವುದು. ಇದು ಜಿಲ್ಲೆಯ ಪ್ರತಿಯೊಂದು ಗ್ರಾಮ, ತಾಲ್ಲೂಕು, ಜಿಲ್ಲಾ ಕೇಂದ್ರಗಳಲ್ಲಿ ನಡೆಸಬೇಕು ಎಂದು ಹೇಳಿದರು.

ಕೇಂದ್ರ ಸರ್ಕಾರದ ಮೂರು ಕಾಯ್ದೆಗಳಿಂದ ಆಗುವ ಅನಾಹುತಗಳನ್ನು ತಿಳಿಸುವ ಉದ್ದೇಶದಿಂದ ಫೆ.18ರಂದು ಎಪಿಎಂಸಿ ಪ್ರಾಂಗಣದಲ್ಲಿ ಕಾರ್ಯಾಗಾರ ಆಯೋಜನೆ ಮಾಡಲಾಗಿದೆ. ಇದರಲ್ಲಿ ಸಂಘಟನೆಯ ಪ್ರತಿಯೊಬ್ಬ ಕಾರ್ಯಕರ್ತರು ಭಾಗವಹಿಸಬೇಕು. ಕಾರ್ಯಾಗಾರದಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳನ್ನು ಸರಿಯಾಗಿ ಅರ್ಥಮಾಡಿಕೊಂಡು ಯುವ ಜನಾಂಗಕ್ಕೆ ಮುಟ್ಟಿಸುವ ಕೆಲಸ ಮಾಡಬೇಕೆಂದರು.

ಕನಿಷ್ಟ ಬೆಂಬಲ ಬೆಲೆಗೆ ಯಾವುದೇ ಕಾಯಿದೆ ಇಲ್ಲದಿರುವುದೇ ರೈತರ ಶೋಷಣೆಗೆ ಕಾರಣ. ಈ ಹಿನ್ನೆಲೆಯಲ್ಲಿ ಎಂಎಸ್‌ಪಿಗೆ ಕಾಯಿದೆ ರೂಪಿಸಿ ಕನಿಷ್ಟ ಬೆಂಬಲ ಬೆಲೆಗಿಂತ ಕಡಿಮೆ ದರಕ್ಕೆ ರೈತರ ಉತ್ಪನ್ನ ಖರೀದಿಸುವವರಿಗೆ 6 ತಿಂಗಳು ಜೈಲು ಶಿಕ್ಷೆ ಮತ್ತು ವ್ಯತ್ಯಾಸದ ಹಣವನ್ನು ಮರಳಿ ರೈತರಿಗೆ ಕೊಡಿಸುವ ಅಂಶಗಳನ್ನು (2ನೇ ಪುಟಕ್ಕೆ)

# ಎಸ್ಸಿ, ಎಸ್ಟಿ, ಒಬಿಸಿ ವಿರೋಧಿ ನೀತಿ ಸರಿಪಡಿಸುವಂತೆ ಆಗ್ರಹ

ದಾವಣಗೆರೆ, ಫೆ.3- ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಎಸ್.ಸಿ, ಎಸ್.ಟಿ, ಒಬಿಸಿ ಮತ್ತು ಧಾರ್ಮಿಕ ಅಲ್ಪಸಂಖ್ಯಾತರ ವಿರೋಧಿ ನೀತಿಯನ್ನು ಸರಿಪಡಿಸಲು ಮಧ್ಯಪ್ರವೇಶಿಸುವಂತೆ ರಾಷ್ಟ್ರಪತಿ ಅವರನ್ನು ಆಗ್ರಹಿಸಿ ನಗರದಲ್ಲಿ ಇಂದು ಜಿಲ್ಲಾ ಬಹುಜನ ಸಮಾಜ ಪಾರ್ಟಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಿಂದ ಪ್ರತಿಭಟನಾ ಮೆರವಣಿಗೆ ಮುಖಾಂತರ ಉಪವಿಭಾಗಾಧಿಕಾರಿ ಕಚೇರಿಗೆ ತೆರಳಿ ಉಪವಿಭಾಗಾಧಿಕಾರಿ ಮುಖೇನ ರಾಷ್ಟ್ರಪತಿ ಅವರಿಗೆ ಹಕ್ಕೊತ್ತಾಯದ ಬೇಡಿಕೆಗಳ ಈಡೇರಿಕೆಗೆ ಮನವಿ ಪತ್ರ ಸಲ್ಲಿಸಲಾಯಿತು.

ದೇಶದಲ್ಲಿ 2018-19 ಹಾಗೂ 2019-20ನೇ ಸಾಲಿನ 60 ಲಕ್ಷ ಪರಿಶಿಷ್ಟ




ಜಾತಿಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನಿಲ್ಲಿಸಿದ್ದು, ಅದನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೂಡಲೇ ಬಿಡುಗಡೆ ಮಾಡಬೇಕು ಎಂದು ಸಂಘಟನೆಯ ವಲಯ ಉಸ್ತುವಾರಿ ಹೆಚ್. ಮಲ್ಲೇಶ್ ಆಗ್ರಹಿಸಿದರು.

ನ್ಯಾ. ನಾಗಮೋಹನದಾಸ್ ವರದಿಯಂತೆ ಜನಸಂಖ್ಯೆಗೆ ಅನುಗುಣವಾಗಿ ಪರಿಶಿಷ್ಟ ಜಾತಿಯ ಮೀಸಲು ಪ್ರಮಾಣವನ್ನು ಶೇ.20 ಮತ್ತು ಪರಿಶಿಷ್ಟ ವರ್ಗಕ್ಕೆ ಶೇ.10ಕ್ಕೆ ಹೆಚ್ಚಿಸಬೇಕು. ಪಿಟಿಸಿಎಲ್ ಕಾಯ್ದೆಯನ್ನು

**ಜಿಲ್ಲಾ ಬಹುಜನ ಸಮಾಜ ಪಾರ್ಟಿ ಪ್ರತಿಭಟನೆ**

ಕೋರ್ಟ್‌ಗಳು ನಿಷ್ಕ್ರಿಯಗೊಳಿಸಿರುವುದರಿಂದ ಈ ಕಾಯ್ದೆಗೆ ಕರ್ನಾಟಕ ಸರ್ಕಾರವು ತಿದ್ದುಪಡಿ ತಂದು ಪರಿಶಿಷ್ಟ ಜಾತಿ, ವರ್ಗದವರಿಗೆ ಜಮೀನುಗಳನ್ನು ಉಳಿಸಲು ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಇತ್ತೀಚಿಗೆ ಗೋಹತ್ಯೆ ನಿಷೇಧ ಕಾಯ್ದೆಗೆ ತಿದ್ದುಪಡಿ ತಂದು ಇದರ ಉಲ್ಲಂಘನೆಗೆ ಶಿಕ್ಷೆಯ ಪ್ರಮಾಣವನ್ನು ಹೆಚ್ಚಿಸಿದೆ. ಅಂದರೆ ಗೋವುಗಳನ್ನು ರಕ್ಷಣೆ ಮಾಡಬೇಕೆಂಬ ನಿಜವಾದ ಕಳಕಳಿಯಿಂದ ಈ ಗೋಹತ್ಯೆ ನಿಷೇಧ ಕಾಯ್ದೆಯನ್ನು ಜಾರಿಗೆ ತಂದಿಲ್ಲ. ಹಾಗಿದ್ದರೆ ಭಾರತ ಗೋಮಾಂಸ ರಫ್ತಿನಲ್ಲಿ ವಿಶ್ವದಲ್ಲಿ ಎರಡನೇ ಸ್ಥಾನದಲ್ಲಿ ಏಕೆ ಇರುತ್ತಿತ್ತು. ಅಲ್ಲದೆ ಮೇಲ್ಜಾತಿಯವರೇ ಬಿಜೆಪಿ ಶಾಸಕರು ಸೇರಿದಂತೆ ಇಂತಹ ದೊಡ್ಡ ಕಂಪನಿ ಮಾಲೀಕರಾಗಿದ್ದಾರೆ. ಆದರೆ ನಿರುಪಯೋಗಿ ರಾಸುಗಳ ನಿರ್ವಹಣೆ ರಾಜ್ಯದಲ್ಲಿ ರೈತರಿಗೆ ಬಹುದೊಡ್ಡ ಸಮಸ್ಯೆಯಾಗಿದೆ. ಅಲ್ಲದೆ ಚರ್ಮಗಾರಿಕೆ ಉದ್ಯಮದಲ್ಲಿ ತೊಡಗಿರುವ ಲಕ್ಷಾಂತರ ಜನ ನಿರುದ್ಯೋಗಿಗಳಾಗುತ್ತಾರೆ. ಹೀಗೆ ಸಮಾಜದ ಎಲ್ಲಾ ವರ್ಗಗಳು ಎಂದು ಒಂದಾಗದಂತೆ ಬಿಜೆಪಿಯ ಒಡೆದಾಳುವುದು ಷಡ್ಯಂತ್ರವಾಗಿದೆ ಎಂದು ದೂರಿದರು.

ಜಿಲ್ಲಾಧ್ಯಕ್ಷ ಡಿ. ಹನುಮಂತಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಸ್.ಜಿ. ವೆಂಕಟೇಶ್ ಬಾಬು, ಯಶೋಧಮ್ಮ, ಕೆ.ಡಿ. ಮಂಜಪ್ಪ ಮತ್ತಿತರರು ಪ್ರತಿಭಟನೆಯಲ್ಲಿದ್ದರು.

# ರೈತ ಹೋರಾಟಕ್ಕೆ ಜನಾಂದೋಲನ



**(1ನೇ ಪುಟದಿಂದ)** ಕಾಯಿದೆ ಹೊಂದಿರಬೇಕು. ರೈತ ಬೆಳೆದ ಬೆಲೆಗೆ ಇದುವರೆಗೂ ದರ ನಿಗದಿ ಮಾಡಿಲ್ಲ. ಎಪಿಎಂಸಿ ಕಾಯಿದೆ ತಿದ್ದುಪಡಿ ಮಾಡುವುದಾದರೆ ರೈತ ಬೆಳೆದ ಬೆಲೆಗೆ ರೈತನೇ ಬೆಲೆ ನಿಗದಿಪಡಿಸುವ ಅಂಶಗಳನ್ನು ಹೊಸ ಕಾಯಿದೆಯಲ್ಲಿ ತರಬೇಕು. ಕನಿಷ್ಟ ಬೆಂಬಲ ಬೆಲೆಗೆ ಬಲಿಷ್ಟ ಕಾಯಿದೆ ರೂಪಿಸಬೇಕು ಎಂದು ಆಗ್ರಹಿಸಿದರು.

ವಿದ್ಯುತ್ ಖಾಸಗೀಕರಣದಿಂದ ರೈತರು ಹಣ ಕೊಟ್ಟು ವಿದ್ಯುತ್ ಖರೀದಿ ಮಾಡಬೇಕಾದ ಸಂಕಷ್ಟ ಎದುರಾಗಲಿದ್ದು, ಇದನ್ನು ಬಿಜೆಪಿ ನಾಯಕರು ಅಲ್ಲಗಳೆಯುತ್ತಾರೆ. ಈ ಕಾಯ್ದೆ ಬೆಂಬಲಿಸುವ ಬಿಜೆಪಿ ಸಂಸದರು, ಶಾಸಕರು ಅದನ್ನು ಅಳವಡಿಸಿಕೊಳ್ಳಲಿ. ಸರಿ ಇಲ್ಲದಿದ್ದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಹೇಳಿ ಕಾಯ್ದೆಯನ್ನು ತೆಗೆಸಲಿ ಎಂದು ಸವಾಲು ಹಾಕಿದರು.

ರೈತ ಮುಖಂಡ ಮಲ್ಲಿಗೆರೆ ಪ್ರಕಾಶ್ ಮಾತನಾಡಿ, ಕೇಂದ್ರ ಸರ್ಕಾರ ರೈತ ವಿರೋಧಿ ಕಾಯ್ದೆಗಳನ್ನು ಜಾರಿಗೆ ತಂದರೂ ರೈತರು ಇನ್ನೂ ಆಕ್ರೋಶಗೊಂಡಿಲ್ಲ. ಕಾಯ್ದೆಗಳ ಪರ ಇರುವವರಿಗೆ ನಾವುಗಳು ಸಹ ತಕ್ಕ ಉತ್ತರ ನೀಡಬೇಕು. ಈ ದಿಸೆಯಲ್ಲಿ ನಾವುಗಳು ಜಾಲತಾಣಗಳಲ್ಲಿ ಸಕ್ರಿಯರಾಗಬೇಕು. ಇದಕ್ಕೆ ಯುವಕರನ್ನು ಸಿದ್ದಪಡಿಸಬೇಕು ಎಂದರು.

ಈ ಸಂದರ್ಭದಲ್ಲಿ ಗುಮ್ಮನೂರು ಬಸವರಾಜ್ ಇತರರು ಅಭಿಪ್ರಾಯ ವ್ಯಕ್ತಪಡಿಸಿದರು. ಸಭೆಯಲ್ಲಿ ರೈತ ಮುಖಂಡರಾದ ಚಿರಂಜೀವಿ, ಹೊನ್ನಾಳಿ ಸತೀಶ್, ಶಿವಕುಮಾರ್ ಸೇರಿದಂತೆ ಇತರರು ಇದ್ದರು.

# ವಿದೇಶಿ ಮಧ್ಯ ಪ್ರವೇಶ ಬೇಡ

**(1ನೇ ಪುಟದಿಂದ)** ಎಂದಿದ್ದಾರೆ.

ರೈತರ ಹೋರಾಟ ಆಂತರಿಕ ವಿಷಯ ಎಂದಿರುವ ಕ್ರಿಕೆಟ್ ತಂಡದ ತರಬೇತುದಾರ ರವಿ ಶಾಸ್ತ್ರಿ, ಮಾತುಕತೆಯ ಮೂಲಕ ವಿಷಯ ಬಗೆಹರಿಯುವ ವಿಶ್ವಾಸವಿದೆ ಎಂದಿದ್ದಾರೆ.

ಟ್ವಿಟ್ಟರ್ ಮೂಲಕ ಹೇಳಿಕೆ ನೀಡಿರುವ ನಟ ಅಕ್ಷಯ್ ಕುಮಾರ್, ರೈತರು ದೇಶದ ಅತಿ ಮುಖ್ಯ ಭಾಗವಾಗಿದ್ದಾರೆ. ವಿಷಯವನ್ನು ಬಗೆಹರಿಸಲು ಪ್ರಯತ್ನಗಳು ನಡೆಯುತ್ತಿವೆ. ಭಿನ್ನಾಭಿಪ್ರಾಯ ಸೃಷ್ಟಿಸುವ ಸಲುವಾಗಿ ಗಮನ ಸೆಳೆಯುವ ಬದಲು ಸೌಹಾರ್ದಯುತ ಪರಿಹಾರಕ್ಕೆ ಬೆಂಬಲಿಸೋಣ ಎಂದಿದ್ದಾರೆ.

ಭಾರತದ ಇಲ್ಲವೇ ಭಾರತದ ನೀತಿಗಳ ವಿರುದ್ಧ ಸುಳ್ಳು ಅಪಪ್ರಚಾರದ ಬಗ್ಗೆ ಜನ ಎಚ್ಚರವಾಗಿರಬೇಕು. ಇಂತಹ ಅಪಪ್ರಚಾರಗಳಿಗೆ ಬಲಿಯಾಗಬಾರದು. ಈ ಸಂದರ್ಭದಲ್ಲಿ ಒಗ್ಗಟ್ಟಾಗಿರಬೇಕು. ಯಾವುದೇ ಒಳಜಗಳ ಬೇಡ ಎಂದು ತಿಳಿಸಿದ್ದಾರೆ.

ಅಂತರರಾಷ್ಟ್ರೀಯ ತಾರೆಯರ ಹೇಳಿಕೆಗಳನ್ನು ಖಂಡಿಸಿ ವಿದೇಶಾಂಗ ಇಲಾಖೆ ಬಿಡುಗಡೆ ಮಾಡಿರುವ ಹೇಳಿಕೆಯನ್ನು ಪ್ರಸ್ತಾಪಿಸಿರುವ ನಟ ಸುನೀಲ್ ಶೆಟ್ಟಿ, ಅರ್ಧ ಸತ್ಯಕ್ಕಿಂತ ಅಪಾಯಕಾರಿಯಾದುದು ಬೇರೊಂದಿಲ್ಲ. ಈ ವಿಷಯಗಳ ಬಗ್ಗೆ ನಾವು ಸಮಗ್ರ ನಿಲುವು ತಳೆಯಬೇಕು ಎಂದಿದ್ದಾರೆ.

ಗಾಯಕ ಕೈಲಾಶ್ ಖೇರ್ ಹೇಳಿಕೆ ನೀಡಿದ್ದು, ದೇಶದ ವಿರೋಧಿಗಳು ಭಾರತದ ತೇಜೋವಧೆಗೆ ಯಾವ ಹಂತಕ್ಕೆ ಬೇಕಾದರೂ ಇಳಿಯಬಹುದು. ಭಾರತ ಒಂದಾಗಿದೆ. ದೇಶದ ವಿರುದ್ಧ ನೀಡುವ ಹೇಳಿಕೆಗಳನ್ನು ಸಹಿಸುವುದಿಲ್ಲ ಎಂದಿದ್ದಾರೆ.

# ಕೂಡ್ಲಿಗಿಯಲ್ಲಿ ಜೋಡಿ ಕೊಲೆ ಪ್ರಕರಣ : ಶರಣಾದ ಆರೋಪಿ

ಕೂಡ್ಲಿಗಿ, ಫೆ.3- ಜೋಡಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೊಲೆ ಆರೋಪಿ ಕೂಡ್ಲಿಗಿ ಪೊಲೀಸ್ ಠಾಣೆಗೆ ಶರಣಾಗಿದ್ದಾನೆ.

ಕಳೆದ ಜನವರಿ 6 ರಂದು ಟಿ.ಹಿರಾಳ್ ಗ್ರಾಮದಿಂದ ತನ್ನ ಮೂವರು ಮಕ್ಕಳೊಂದಿಗೆ ಆರೋಪಿ ಜಹಾಂಗೀರ್ ಪತ್ನಿ ತಬಸಮ್ ಕಾಣೆಯಾಗಿದ್ದಳು. 15 ರಂದು ಪ್ರಕರಣ ಸಹ ದಾಖಲಾಗಿತ್ತು.

ಗ್ರಾಮಕ್ಕೆ ಬರುವುದಾಗಿ ಪ್ರಿಯಕರ ಫಯಾಜ್ ಜಹಾಂಗೀರ್‌ಗೆ ಫೋನ್ ಮಾಡಿದಾಗ ಊರಿಗೆ ಬೇಡ ಹೊಲದಲ್ಲಿ ಇರುವಂತೆ ಹೇಳಿ ಹೊಲಕ್ಕೆ ಹೋದಾಗ ಮಾತಿನ ವಾಗ್ವಾದ ನಡೆದು ಪತ್ನಿ ತಬಸಮ್ ಮತ್ತು ಫಯಾಜ್ ಕತ್ತು ಹಿಸುಕಿ ಕೊಲೆ ಮಾಡಿದ್ದಾನೆ. ಕೊಲೆ ಆರೋಪಿಯನ್ನು ನ್ಯಾಯಾಲಯದ ಆದೇಶದಂತೆ ಬಳ್ಳಾರಿ ಜೈಲಿಗೆ ಕಳುಹಿಸಲಾಗಿದೆ.

# ಶಿಫಾರಸ್ಸಿಗೆ ಮಡಿವಾಳ ಶ್ರೀಗಳ ಆಗ್ರಹ

**(1ನೇ ಪುಟದಿಂದ)** ಆದರೆ, ರಾಜ್ಯ ಸರ್ಕಾರ ಕೇಂದ್ರಕ್ಕೆ ಕಳಿಸಿಕೊಡಲು ವಿಳಂಬ ಮಾಡುತ್ತಿರುವುದು ಸರಿಯಾದ ಕ್ರಮವಲ್ಲ. ಈಗಾಗಲೇ ದೇಶದ 18 ರಾಜ್ಯಗಳು ಹಾಗೂ 4 ಕೇಂದ್ರಾಡಳಿತ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿ ಪಟ್ಟಿಯಲ್ಲಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ಮಾತ್ರ 2ಎ ವರ್ಗಕ್ಕೆ ಸೇರಿಸಿರುವುದು ವಿಪರ್ಯಾಸ, ಈ ಕುರಿತು ಮುಖ್ಯಮಂತ್ರಿಗಳ ಬಳಿ ಫೆಬ್ರವರಿ 10ರಂದು ಸಮುದಾಯದಿಂದ ನಿಯೋಗ ಹೋಗಲಾಗುವುದು ಎಂದು ಶ್ರೀಗಳು ತಿಳಿಸಿದರು.

ಮಡಿವಾಳ ಸಮೂದಾಯದ ಸೇವೆಯನ್ನು ಯಾರೂ ಪರಿಗಣಿಸದೇ ಇರುವುದು ಬೇಸರದ ಸಂಗತಿ ಆಗಿದೆ. ಇನ್ನಾದರೂ ಮಡಿವಾಳ ಸಮಾಜದವರು ತಮ್ಮ ತಮ್ಮ ವೈಯಕ್ತಿಕ ಪ್ರತಿಷ್ಠೆಯನ್ನು ಬದಿಗೊತ್ತಿ, ಒಗ್ಗಟ್ಟಿನಿಂದ ಸಾಮಾಜಿಕ ನ್ಯಾಯಕ್ಕೋಸ್ಕರ ಹೋರಾಟ ಅನಿವಾರ್ಯವಾಗಿದೆ ಎಂದು ತಿಳಿಸಿದರು.

ಕೆಪಿಸಿಸಿ ಒಬಿಸಿ ಘಟಕದ ರಾಜ್ಯ ಉಪಾಧ್ಯಕ್ಷ ಡಾ. ಉಮೇಶ್ ಬಾಬು ಶಂಕರನಹಳ್ಳಿ ಮಾತನಾಡಿ, ಹರಪನಹಳ್ಳಿ ತಾಲ್ಲೂಕಿನಲ್ಲಿ 37 ಗ್ರಾಮ ಪಂಚಾಯ್ತಿಗಳಿದ್ದು, ಯಾವ ಗ್ರಾಮ ಪಂಚಾಯ್ತಿಯಲ್ಲೂ ಹಿಂದುಳಿದ ವರ್ಗಕ್ಕೆ ಮೀಸಲು ಇಲ್ಲ, ಶಾಸಕರು ಮತ್ತು ಸರ್ಕಾರ ಕಣ್ಣು ಮುಚ್ಚಿ ಕುಳಿತಿದೆ, ಹಾಗಾಗಿ ಈ ಬಿಜೆಪಿ ಸರ್ಕಾರ ಹಿಂದುಳಿದವರ ವಿರೋಧಿ ಸರ್ಕಾರವಾಗಿದೆ ಎಂದು ಲೇವಡಿ ಮಾಡಿದರು.

ಅಖಿಲ ಭಾರತ ಮಡಿವಾಳ ಮಹಾಸಭಾದ ರಾಷ್ಟ್ರಾಧ್ಯಕ್ಷ ಎಂಜೇರಪ್ಪ ಮಾತನಾಡಿದರು. ಈ ಸಂದರ್ಭದಲ್ಲಿ ಜೆಡಿಎಸ್ ಮುಖಂಡ ಬಳಗನೂರು ರಾಮನಗೌಡ ಮಾತನಾಡಿದರು, ಪೊಲೀಸ್ ಇಲಾಖೆಯ ಎ.ಎಸ್.ಐ ಕಲಾರಿ, ಅಹಿಂದ ಕಛೇರಿಯ ವ್ಯವಸ್ಥಾಪಕ ರವಿ, ಮೈದೂರ್ ಮಡಿವಾಳ ಸಮಾಜದ ಮುಂಡರಾದ ಬಸವರಾಜ್, ಎನ್.ರಾಮಪ್ಪ, ಜಕ್ಕಪ್ಪ, ಕೊಟ್ರೇಶ್, ಹೇಮಣ್ಣ, ಕರಿಯಪ್ಪ, ಪ್ರತಾಪ್, ಬಾಡಾ ಗ್ರಾಮದ ಮುಖಂಡರಾದ ಭರಮಪ್ಪ, ರವಿ ಬೆಣ್ಣೆಹಳ್ಳಿ ಮತ್ತಿತರರು ಉಪಸ್ಥಿತರಿದ್ದರು.

# ವಾಲ್ಮೀಕಿ ಜಾತ್ರೆ: ರಾಜನಹಳ್ಳಿ ಪೀಠದಲ್ಲಿ ಹಂದರ ಕಂಬ ಪೂಜೆ



ಮಲೇಬೆನ್ನೂರು, ಫೆ.3- ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಇದೇ ದಿನಾಂಕ 8 ಮತ್ತು 9 ರಂದು ಜರುಗಲಿರುವ 3ನೇ ವರ್ಷದ ವಾಲ್ಮೀಕಿ ಜಾತ್ರಾ ಮಹೋತ್ಸವದ ಮಹಾಮಂಟಪ ನಿರ್ಮಾಣಕ್ಕೆ ಸೋಮವಾರ ಹಂದರ ಕಂಬ ಪೂಜೆಯನ್ನು ಸಲ್ಲಿಸಲಾಯಿತು.

ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಹಂದರ ಕಂಬ ಪೂಜೆ ಸಲ್ಲಿಸಿ, ಕಂಬ ನೆಟ್ಟು, ಜಾತ್ರೆಯ ಯಶಸ್ಸಿಗಾಗಿ ದೇವರಲ್ಲಿ ಪ್ರಾರ್ಥಿಸಿದರು. ನಂತರ ಮಾತನಾಡಿದ ಶ್ರೀಗಳು ಈ ಬಾರಿ ಅರ್ಥಪೂರ್ಣ ಜಾತ್ರೆಯ ಮೂಲಕ ನಾಡಿಗೆ ಉತ್ತಮ ಸಂದೇಶ ನೀಡಲಾಗುವುದೆಂದರು.

ಮಠದ ಆಡಳಿತಾಧಿಕಾರಿ ಡಿ. ಓಬಳಪ್ಪ, ಕಾರ್ಮಿಕ ಮುಖಂಡ ಹೆಚ್.ಕೆ. ರಾಮಚಂದ್ರಪ್ಪ, ಜಾತ್ರಾ ಸಮಿತಿ ಸಂಚಾಲಕ ಹೊದಿಗೆರೆ ರಮೇಶ್, ಮಠದ ಧರ್ಮದರ್ಶಿಗಳಾದ ಹರ್ತಿಕೋಟೆ ವೀರೇಂದ್ರ ಸಿಂಹ, ನಲುವಾಗಲು ನಾಗರಾಜಪ್ಪ, ಕೆ.ಬಿ. ಮಂಜುನಾಥ್, ವಾಲ್ಮೀಕಿ ವಿಜಯ ಸ್ಮರಣೆ ಸಂಪುಟದ ಸಂಪಾದಕ ಡಾ.ಎ.ಬಿ. ರಾಮಚಂದ್ರಪ್ಪ, ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್, ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಉಪಸ್ಥಿತರಿದ್ದರು.

ಸಿಪಿಐ ಸತೀಶ್, ಪಿಎಸ್‌ಐ ರವಿಕುಮಾರ್, ಪಿಡಬ್ಲ್ಯೂಡಿ ಇಇ ಮಲ್ಲಿಕಾರ್ಜುನ್, ಜಿ.ಪಂ. ಉಪಕಾರ್ಯದರ್ಶಿ ಆನಂದ್, ಭಾನುವಳ್ಳಿ ಪುಟ್ಟಪ್ಪ, ಸಣ್ಣ ತಮ್ಮಪ್ಪ ಬಾರ್ಕಿ, ಜಿಗಳಿ ಆನಂದಪ್ಪ, ಕೊಕ್ಕನೂರು ಕೊಟ್ರಪ್ಪ, ಡಿ. ಸೋಮಶೇಖರ್, ವಿಜಯಶ್ರೀ, ಗೌರಮ್ಮ, ಪಾರ್ವತಿ, ರಾಘು ದೊಡ್ಡಮನಿ, ಹೆಚ್. ಚಂದ್ರಪ್ಪ, ಪತ್ರಕರ್ತ ಜಿಗಳಿ ಪ್ರಕಾಶ್, ಮಕರಿ ಪಾಲಾಕ್ಷಪ್ಪ, ಪಾಳೇಗಾರ್ ನಾಗರಾಜ್, ರಾಜನಹಳ್ಳಿ ಭೀಮಣ್ಣ ಮತ್ತಿತರರು ಹಾಜರಿದ್ದರು.

# ಕೆ.ಅಯ್ಯನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಕೆ. ಕೊಟ್ರೇಶ್ ಚಪ್ಪರದಳ್ಳಿ



ಕೊಟ್ಟೂರು, ಫೆ.3 - ಕೊಟ್ಟೂರು ತಾಲ್ಲೂಕು ಕೆ.ಅಯ್ಯನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಬಿ.ಜೆ.ಪಿ ಬೆಂಬಲಿತ ಕೆ.ಕೊಟ್ರೇಶ್ ಚಪ್ಪರದಹಳ್ಳಿ ಹಾಗೂ ಉಪಾಧ್ಯಕ್ಷರಾಗಿ ಸೋಮಕ್ಕಾ ಹರಾಳ್ ಇವರು ಆಯ್ಕೆಯಾಗಿದ್ದಾರೆ.

ಈ ಸಂದರ್ಭದಲ್ಲಿ ತಾಲ್ಲೂಕು ಪಂಚಾಯಿತಿ ಅಧ್ಯಕ್ಷ ಶಾನುಭೋಗರ ಗುರುಮೂರ್ತಿ, ಜಂಬೂರು ಕೊಟ್ರೇಶ್, ಗಂಗಾಧರ ಶಾಸ್ತ್ರಿ, ಗ್ರಾಮ ಪಂಚಾಯಿತಿ ಸದಸ್ಯರು ಹಾಜರಿದ್ದರು.

# ಮಕ್ಕಳ ಆಟೋಪಕರಣಗಳು ಸಾರ್ವಜನಿಕರ ಸೇವೆಗೆ



**(1ನೇ ಪುಟದಿಂದ)** ಶಿವಲಿಂಗಪ್ಪ, ಆಲೂರು ಜ್ಯೋತಿರ್ಲಿಂಗ, ನಿಖಿಲ್ ಎಂ. ಶೌಕತ್ ಆಲಿ, ಕೃಷ್ಣಪ್ಪ, ಪ್ರಜ್ವಲ್ ಎನ್.ಎಸ್, ಕೆ.ಬಿ. ಮಂಜುನಾಥ್, ಮಾಜಿ ಉಪಮಹಾಪೌರರಾದ ಶ್ರೀಮತಿ ಶೋಭಾ ಪಲ್ಲಾಗಟ್ಟೆ ಅವರ ಪತಿ - ಹಿರಿಯ ವರ್ತಕ ಶಿವಾನಂದಪ್ಪ ಪಲ್ಲಾಗಟ್ಟೆ, ಪುತ್ರ ಚಂದನ್ ಪಲ್ಲಾಗಟ್ಟೆ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ವ್ಯಾಯಾಮ ಸಲಕರಣೆ ಮತ್ತು ಆಟೋಪಕರಣಗಳ ಕಾಮಗಾರಿಯ ಗುತ್ತಿಗೆದಾರರಾಗಿದ್ದ ಪಿ.ಎಸ್.ಆರ್ ಗ್ರೂಪ್ ಆಫ್ ಕನ್‌ಸ್ಟ್ರಕ್ಷನ್ (ಬೆಂಗಳೂರು) ಇವರು ಆಟೋಪಕರಣವನ್ನು ವ್ಯವಸ್ಥೆಗೊಳಿಸಿದ್ದರು.

ವಾರ್ಡಿನ ಶ್ರೀ ಬನ್ನಿಮಹಾಕಾಳಿ ದೇವಸ್ಥಾನದ ಹತ್ತಿರವಿರುವ (6 ಮತ್ತು 7ನೇ ಕ್ರಾಸ್‌ಗೆ ಹೊಂದಿಕೊಂಡ, 12ನೇ ಮುಖ್ಯರಸ್ತೆಯ) ಉದ್ಯಾನವನದಲ್ಲಿಯೂ ಸಹ ಸಾರ್ವಜನಿಕರಿಗೆ ಆಧುನಿಕ ಜಿಮ್ ಸುಸಜ್ಜಿತವಾಗಿ ನಿರ್ಮಾಣಗೊಂಡಿದ್ದು, ಪಾಲಿಕೆ ಸದಸ್ಯ ಮಂಜುನಾಥ್ ಗಡಿಗುಡಾಳು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಸಾರ್ವಜನಿಕರು, ಮಕ್ಕಳು ನಿಯಮಿತ ವ್ಯಾಯಾಮದಿಂದ ತಮ್ಮದೈಹಿಕ ಆರೋಗ್ಯವನ್ನು ವೃದ್ಧಿಗೊಳಿಸಿಕೊಳ್ಳಲು ಕರೆ ನೀಡಿದರು. ಎರಡೂ ಉದ್ಯಾನವನಗಳಲ್ಲಿ ಸಸಿಗಳನ್ನು ನೆಡಲಾಯಿತು.

## ನಿವೃತ್ತ ಸಬ್ ಇನ್ಸ್‌ಪೆಕ್ಟರ್ ಜ್ಯೋತಿಗೌಡರ್ ನಿಧನ




ಹರಪನಹಳ್ಳಿ ತಾಲ್ಲೂಕು ಬೆಣ್ಣೆಹಳ್ಳಿ ಗ್ರಾಮದ, ದಾವಣಗೆರೆ ಸಿಟಿ ಡಿಸಿಎಂ ಟೌನ್ ಶಿಪ್ ವಾಸಿ, ನಿವೃತ್ತ ಸಬ್ ಇನ್ಸ್ ಪೆಕ್ಟರ್

**ಜ್ಯೋತಿ ಗೌಡರ್ (75)**

ಅವರು ದಿನಾಂಕ 3.02.2021 ರಂದು ಬುಧವಾರ ಮಧ್ಯಾಹ್ನ 3 ಗಂಟೆಗೆ ನಿಧನರಾಗಿದ್ದಾರೆ. ಪತ್ನಿ, ಓರ್ವ ಪುತ್ರ, ಮೂವರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 4.02.2021 ರಂದು ಗುರುವಾರ ಮಧ್ಯಾಹ್ನ 12.30ಕ್ಕೆ ಹರಪನಹಳ್ಳಿ ತಾಲ್ಲೂಕು ಕಾವಲಹಳ್ಳಿ ಗ್ರಾಮದಲ್ಲಿ ನೆರವೇರಲಿದೆ.

**ಇಂತಿ ದುಃಖತಪ್ತ ಕುಟುಂಬ ವರ್ಗದವರು, 9900900338**

## ಭಾವಪೂರ್ಣ ಶ್ರದ್ಧಾಂಜಲಿ




ದಿನಾಂಕ 03.02.2021ರ ಬುಧವಾರ ನಿಧನರಾದ ವಿನಾಯಕ ಬಡಾವಣೆ ನಾಗರಿಕ ಹಿತರಕ್ಷಣಾ ಸಮಿತಿಯ ಉಪಾಧ್ಯಕ್ಷರಾದ ಶ್ರೀ ದಿನೇಶ್ ಪಾಟೀಲ್‌ರವರ ತಂದೆ

**ಶ್ರೀ ಪಂಚಾಕ್ಷರಿಗೌಡ್ರು ಗಡಿಗುಡಾಳ್**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತಾ, ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.


**ಪದಾಧಿಕಾರಿಗಳು ಮತ್ತು ಸರ್ವ ಸದಸ್ಯರು**
**ವಿನಾಯಕ ಬಡಾವಣೆ ನಾಗರಿಕ ಹಿತರಕ್ಷಣಾ ಸಮಿತಿ, ದಾವಣಗೆರೆ.**

## ವಿ. ಸಂಬಂಧಂ ನಿಧನ




ದಾವಣಗೆರೆಯ ವಿನೋಬನಗರ 4ನೇ ಮೇನ್, 1ನೇ ಕ್ರಾಸ್ ರಾಯಲ್ ಕಲ್ಯಾಣ ಮಂಟಪದ ಹತ್ತಿರದ ವಾಸಿ, ಮೆಕ್ಯಾನಿಕ್ ವಿ.ಸಂಬಂಧಂ (86) ಅವರು ದಿನಾಂಕ 3.02.2021 ರಂದು ಬುಧವಾರ ಸಂಜೆ 4.30ಕ್ಕೆ ನಿಧನರಾಗಿದ್ದಾರೆ. ಪತ್ನಿ, ಓರ್ವ ಪುತ್ರ, ಐವರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 4.02.2021 ರಂದು ಗುರುವಾರ ಮಧ್ಯಾಹ್ನ 2 ಗಂಟೆಗೆ ನಗರದ ಪಿ.ಬಿ. ರಸ್ತೆಯ ವೈಕುಂಠ ಧಾಮದಲ್ಲಿ ನೆರವೇರಲಿದೆ.

## ಶ್ರೀಮತಿ ಸಾವಿತ್ರಮ್ಮ ನಿಧನ



ದಾವಣಗೆರೆ ಶಿವಕುಮಾರಸ್ವಾಮಿ ಬಡಾವಣೆ 2ನೇ ಹಂತದ ವಾಸಿ ಹೆಸರಾಂತ ಪುರೋಹಿತರೂ ಹಾಗೂ ಜೋತಿಷಿಗಳಾದ ವೇ.ಬ್ರಂ. ಶ್ರೀ ಶಂಕರ ನಾರಾಯಣ ಶಾಸ್ತ್ರಿಯವರ ಮಾತೃಶ್ರೀ ಶ್ರೀಮತಿ ಸಾವಿತ್ರಮ್ಮ (92) ಅವರು ದಿನಾಂಕ 3.02.2021ರಂದು ಬೆಳಿಗ್ಗೆ 10 ಕ್ಕೆ ಬೆಂಗಳೂರಿನಲ್ಲಿ ದೈವಾಧೀನರಾಗಿದ್ದಾರೆ. ಐವರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತಿಮ ವಿಧಿ-ವಿಧಾನಗಳು ದಿನಾಂಕ 03.2.2021 ರ ಬುಧವಾರ ಸಂಜೆ ಬೆಂಗಳೂರಿನಲ್ಲಿ ನೆರವೇರಿದವು.

## ಬಣಕಾರ ಬಸವರಾಜಪ್ಪ ನಿಧನ



ದಾವಣಗೆರೆ ತಾಲ್ಲೂಕು ಹೊಸ ಕುಂದುವಾಡ ಗ್ರಾಮದ ವಾಸಿ ಬಣಕಾರ ಬಸವರಾಜಪ್ಪ (73) ಅವರು ದಿನಾಂಕ 3.02.2021 ರಂದು ಬುಧವಾರ ರಾತ್ರಿ 10.15ಕ್ಕೆ ನಿಧನರಾಗಿದ್ದಾರೆ. ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 4.02.2021 ರಂದು ಗುರುವಾರ ಮಧ್ಯಾಹ್ನ 12 ಗಂಟೆಗೆ ಹೊಸ ಕುಂದುವಾಡದ ರುದ್ರಭೂಮಿಯಲ್ಲಿ ನೆರವೇರಲಿದೆ.

# ನೀರಾವರಿ ಕಛೇರಿ ಸ್ಥಳಾಂತರಕ್ಕೆ ಕೈ ಹಾಕಿದರೆ ಹೋರಾಟ



**(1ನೇ ಪುಟದಿಂದ)** ಹಿಸಿಕೊಂಡು ಬಂದಿರುವ ಈ ಕಛೇರಿ 34,373 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶವನ್ನು ಹೊಂದಿದೆ. ಇದರಲ್ಲಿ ಹೊನ್ನಾಳಿ ತಾಲ್ಲೂಕಿಗೆ 8842 ಹೆಕ್ಟೇರ್ ಮಾತ್ರ ಬರುತ್ತದೆ. ಅಚ್ಚುಕಟ್ಟಿನ ಕೊನೆ ಭಾಗದ 20-25 ಹಳ್ಳಿಗಳು ಈ ಕಛೇರಿ ವ್ಯಾಪ್ತಿಗೆ ಬರುತ್ತವೆ. ಮಲೇಬೆನ್ನೂರಿನಲ್ಲಿ ಈ ಕಛೇರಿ ಬಸವಾಪಟ್ಟಣ, ಸಾಸ್ವೆಹಳ್ಳಿ ಉಪವಿಭಾಗಗಳಿಗೆ ಹತ್ತಿರವಾಗಿದ್ದು, ಸ್ಥಳಾಂತರದಿಂದ ರೈತರಿಗೆ ತೀವ್ರ ತೊಂದರೆ ಆಗಲಿದೆ. ಕಛೇರಿ ಸ್ಥಳಾಂತರದ ಬಗ್ಗೆ ನೀರಾವರಿ ನಿಗಮದವರು ಯಾವುದೇ ಕಾರಣಕ್ಕೂ ಗಮನಹರಿಸಬಾರದು. ಒಂದು ವೇಳೆ ಸ್ಥಳಾಂತರಕ್ಕೆ ಕೈ ಹಾಕಿದರೆ ರೈತರ ಹೋರಾಟ ಅನಿವಾರ್ಯ ಎಂದು ವೈ. ದ್ಯಾವಪ್ಪ ರೆಡ್ಡಿ ತಿಳಿಸಿದರು.

ಎಪಿಎಂಸಿ ಸದಸ್ಯ ಜಿ. ಮಂಜುನಾಥ್ ಪಟೇಲ್ ಮಾತನಾಡಿ, ಭದ್ರಾ ನಾಲಾ ನಂ-3 ಈ ಕಛೇರಿಯನ್ನು ಬೇರೆಡೆಗೆ ಸ್ಥಳಾಂತರ ಮಾಡದಂತೆ ಶಾಸಕ ಎಸ್. ರಾಮಪ್ಪ ಅವರು ಬೆಂಗಳೂರಿನಲ್ಲಿ ನೀರಾವರಿ ಸಚಿವರನ್ನು ಹಾಗೂ ನೀರಾವರಿ ನಿಗಮದ ಎಂ.ಡಿ ಅವರನ್ನು ಭೇಟಿ ಮಾಡಿ ಮನವಿ ಮಾಡಿದ್ದಾರೆ. ರೈತರು ಈ ಬಗ್ಗೆ ಆತಂಕಗೊಳ್ಳುವ ಅವಶ್ಯಕತೆ ಇಲ್ಲ ಎಂದರು.

ಕೆ.ಎನ್. ಹಳ್ಳಿಯ ಗುಬ್ಬಿ ರಂಗನಾಥ್, ಸಿರಿಗೆರೆಯ ತಿಪ್ಪೇರುದ್ರಪ್ಪ ಆರ್.ಟಿ. ಸೋಮಶೇಖರಪ್ಪ, ನಂದಿತಾವರೆ ಮುರಿಗೇಂದ್ರಯ್ಯ, ವಾಸನದ ವೀರನಗೌಡ್ರು, ಟಿ.ಎಸ್. ಮಂಜುನಾಥ್, ಯಲವಟ್ಟಿ ಅಂಜಿನಪ್ಪ, ಹಳ್ಳಿಹಾಳ್ ಮಲ್ಲನಗೌಡ, ಕೆ.ಎನ್ ಹಳ್ಳಿಯ ದಿವಾಕರಪ್ಪ, ಚಂದ್ರಶೇಖರಪ್ಪ, ಯಲವಟ್ಟಿ ಚನ್ನಬಸಪ್ಪ, ಜಿಗಳಿ ಜಯಣ್ಣ, ಬೂದಿಹಾಳ್ ಮಹೇಶ್ವರಪ್ಪ, ಕುಣೆಬೆಳಕೆರೆ ಹನುಮಂತಪ್ಪ, ಭಾನುವಳ್ಳಿ ಕರಿಯಪ್ಪ, ನಿಟ್ಟೂರು ಜಯಪ್ಪ ಇದ್ದರು.

# ಅಂತರರಾಷ್ಟ್ರೀಯ ತಾರೆಯರಿಂದ ರೈತರಿಗೆ ಬಲ

**(1ನೇ ಪುಟದಿಂದ)** ಪ್ರತಿಭಟನೆಗೆ ಥುನ್‌ಬರ್ಗ್ ಬೆಂಬಲಿಬೇಕೆಂದು ಕೇಳಿದ್ದರು. ರೈತರು ಈಗಾಗಲೇ ಪರಿಸರ ಬಿಕ್ಕಟ್ಟನ್ನು ಎದುರಿಸುತ್ತಿದ್ದಾರೆ ಎಂದೂ ಅವರು ಹೇಳಿದ್ದರು.


ಉಗಾಂಡಾದ ಪರಿಸರ ಕಾರ್ಯಕರ್ತೆ ವನೆಸಾ ನಕಟೆ ಅವರೂ ಸಹ ರೈತರ ಹೋರಾಟವನ್ನು ಬೆಂಬಲಿಸಿದ್ದಾರೆ.

ಅಂತರರಾಷ್ಟ್ರೀಯ ತಾರೆಯರು ಅಂತರ್ಜಾಲ ಕಡಿತ ಹಾಗೂ ರೈತರ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿರುವುದಕ್ಕೆ ತೀವ್ರ ಪ್ರತಿಕ್ರಿಯೆ ನೀಡಿರುವ ಭಾರತ, ದೇಶದ ಸಣ್ಣ ವರ್ಗದ ರೈತರಿಗೆ ಕೃಷಿ ಸುಧಾರಣೆಗಳ ಬಗ್ಗೆ ಆಕ್ಷೇಪವಿದೆ.

ಪ್ರತಿಭಟನೆ ಬಗ್ಗೆ ಹೇಳಿಕೆ ನೀಡುವುದಕ್ಕೆ ಮುಂಚೆ ವಿಷಯವನ್ನು ಸೂಕ್ತವಾಗಿ ಅರ್ಥ ಮಾಡಿಕೊಳ್ಳಬೇಕು ಎಂದು ಹೇಳಿದೆ.

ರೈತರ ಹೋರಾಟದ ಬಗ್ಗೆ ಕೆಲ ತಾರೆಗಳು ಹಾಗೂ ಇತರರು ನೀಡಿರುವ ಹೇಳಿಕೆಗಳು ವಾಸ್ತವವಲ್ಲ ಹಾಗೂ ಜವಾಬ್ದಾರಿಯುತವೂ ಅಲ್ಲ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಹೇಳಿದೆ.

## ಪುಣ್ಯಸ್ಮರಣೆ





**ಶ್ರೀ ಮೂರ್ಕಲ್ ಎಸ್. ಮಹಾಲಿಂಗಪ್ಪ ಶ್ರೀಮತಿ ಗಿರಿಜಮ್ಮ ಮೂರ್ಕಲ್ ಹರಿಹರ**

ಜನನ : 28.11.1934, ನಿಧನ : 4.2.2006 ಜನನ : 3.7.1935, ನಿಧನ : 16.8.2016

ನೀವು ನಮ್ಮನ್ನಗಲಿ ವರ್ಷಗಳೇ ಕಳೆದವು... ಸದಾ ನಿಮ್ಮ ನೆನಪಿನಲ್ಲಿರುವ ಹಾಗೂ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ

**ಮಗ, ಸೊಸೆ, ಹೆಣ್ಣು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.**

## ಪ್ರಥಮ ವರ್ಷದ ಪುಣ್ಯಸ್ಮರಣೆ



**ದಿ. ಉತ್ತಂಗಿ ಸಂಗಪ್ಪನವರು**
**ಶ್ರೀಗುರು ಎಂಟರ್ ಪ್ರೈಸಸ್**
**ಮಹಾರಾಜ ಪೇಟೆ, ದಾವಣಗೆರೆ-1.**

ನೀವು ನಮ್ಮನ್ನಗಲಿ ಇಂದಿಗೆ (04.02.2021) 1ವರ್ಷವಾಯಿತು. ನಿಮ್ಮ ಆದರ್ಶದ ಜೀವನ ನಮಗೆ ಸ್ಫೂರ್ತಿಯಾಗಿದ್ದು, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಾ ಸದಾ ನಿಮ್ಮ ಸ್ಮರಣೆಯಲ್ಲಿರುವ...

ಧರ್ಮಪತ್ನಿ : **ಶ್ರೀಮತಿ ಶಕುಂತಲಾ ಸಂಗಪ್ಪ ಉತ್ತಂಗಿ**
ಮಕ್ಕಳಾದ : **ಅರ್ಜುನ್ ಉತ್ತಂಗಿ**
**ಮುತ್ತುರಾಜ್ ಉತ್ತಂಗಿ ಮತ್ತು ಸಚಿನ್ ಉತ್ತಂಗಿ**
ಸೊಸೆ : **ಶ್ರೀಮತಿ ಶೃತಿ ಅರ್ಜುನ್**
ಮೊಮ್ಮಗಳು : **ಆರ್ನಾ ಅರ್ಜುನ್.**
**ಸಹೋದರ- ಸಹೋದರಿಯರು ಮತ್ತು ಉತ್ತಂಗಿ ಮನೆತನದವರು, ದಾವಣಗೆರೆ.**

## ಅಸಂಘಟಿತರೆಂದು ಘೋಷಿಸಲು ಪುರೋಹಿತರು - ಅರ್ಚಕರ ಮನವಿ



ದಾವಣಗೆರೆ, ಫೆ.3- ಖಾಸಗಿ ದೇವಾಲಯಗಳಲ್ಲಿ ಹಾಗೂ ಪೌರೋಹಿತ್ಯ ನಡೆಸುವ ವೃತ್ತಿಪರ ಪುರೋಹಿತರು ಮತ್ತು ಅರ್ಚಕರನ್ನು ಅಸಂಘಟಿತ ಕಾರ್ಮಿಕರೆಂದು ಘೋಷಿಸಿ, ಸರ್ಕಾರದ ಅಧಿಕೃತ ಗುರುತಿನ ಚೀಟಿ ನೀಡಿ ಸರ್ಕಾರಿ ಸೌಲಭ್ಯಗಳನ್ನು ದೊರಕಿಸುವಂತೆ ಆಗ್ರಹಿಸಿ ನಗರದಲ್ಲಿ ಇಂದು ಕರ್ನಾಟಕ ರಾಜ್ಯ ಅಸಂಘಟಿತ ಪುರೋಹಿತ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾ ಕಾರ್ಯಕಾರಿಣಿ ಸಮಿತಿ ವತಿಯಿಂದ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಯಿತು.

ಸಂಘದ ಸಂಸ್ಥಾಪಕ ರಾಜ್ಯಾಧ್ಯಕ್ಷ ಡಾ. ಎಂ.ಬಿ. ಅನಂತಮೂರ್ತಿ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿದ ಸಮಿತಿ ಪದಾಧಿಕಾರಿಗಳು, ಬೇಡಿಕೆಗಳುಳ್ಳ ಮನವಿ ಪತ್ರವನ್ನು ಅಪರ ಜಿಲ್ಲಾಧಿಕಾರಿ ಮುಖಾಂತರ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಂಘದ ಜಿಲ್ಲಾ ಗೌರವಾಧ್ಯಕ್ಷ ಕೆ.ಆರ್. ವರದರಾಜ್ ಅಧ್ಯಕ್ಷತೆ ವಹಿಸಿದ್ದರು. ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಹೆಚ್.ಕೆ. ನಾಗೇಂದ್ರಕುಮಾರ್, ರಾಜ್ಯ ಗೌರವಾಧ್ಯಕ್ಷ ಪ್ರಭುಮೂರ್ತಿ, ರಾಜ್ಯ ಉಪಾಧ್ಯಕ್ಷರಾದ ಡಿ.ಎಸ್. ರಾಜೇಶ್, ಎಸ್. ನಾಗೇಶ್, ಜಿಲ್ಲಾಧ್ಯಕ್ಷ ಎಸ್.ಎ. ಆಂಜನೇಯ, ಉಪಾಧ್ಯಕ್ಷ ಎಂ.ಡಿ. ಮುರುಳೀಧರರಾವ್, ಕಾರ್ಯದರ್ಶಿ ಆರ್. ಬಿ. ನಾಗರಾಜ್, ಸಹ ಕಾರ್ಯದರ್ಶಿ ಎಸ್.ಎ. ವಿನಯ್, ಖಜಾಂಚಿ ರಂಗನಾಥ್ ಭಾರದ್ವಜ್, ಸದಸ್ಯರಾದ ಎಸ್. ನಾಗರಾಜ್, ಕೆ.ವಿ. ಅಮರನಾಥ್, ನಾಗೇಶ್ ಭಟ್, ಯೋಗ ನರಸಿಂಹಮೂರ್ತಿ ಸೇರಿದಂತೆ ಇತರರು ಇದ್ದರು.

## ಪ್ರಬಂಧ ಸರ್ಧೆಯಲ್ಲಿ ಅಂಕಿತ ಆಯ್ಕೆ



**ಹೊನ್ನಾಳಿ**

ಹೊನ್ನಾಳಿ, ಫೆ.3- ರಾಜ್ಯ ಚುನಾವಣಾ ಆಯೋಗದವರು ನಡೆಸಿದ ಆಂಗ್ಲ ಭಾಷೆಯ 'ಇಂಪಾರ್ಟೆನ್ಸ್ ಆಫ್ ಎಲೆಕ್ಷನ್ಸ್ ಇನ್ ಡೆವಲೆಪ್‌ಮೆಂಟ್ ಆಫ್ ಇಂಡಿಯಾ' ಎಂಬ ವಿಷಯದ ಪ್ರಬಂಧ ಸ್ಪರ್ಧೆಯಲ್ಲಿ ರಾಜ್ಯ ಮಟ್ಟದಲ್ಲಿ ದ್ವಿತೀಯ ಸ್ಥಾನ ಪಡೆದಿರುವ ಪ್ರಥಮ ಪಿಯು ವಿಜ್ಞಾನ ವಿಭಾಗದ ಎಂ.ಆರ್.ಅಂಕಿತ ಕಾಲೇಜಿಗೆ ಕೀರ್ತಿ ತಂದಿರುತ್ತಾಳೆ ಎಂದು ತಾಲ್ಲೂಕಿನ ಕಡದಕಟ್ಟೆಯ ವಿಜಯ ಕಾಲೇಜಿನ ಪ್ರಾಂಶುಪಾಲ ವಸಂತಕುಮಾರ್ ತಿಳಿಸಿದ್ದಾರೆ.

11ನೇ ರಾಷ್ಟ್ರೀಯ ಮತದಾರರ ದಿನಾಚರಣೆಯಂದು ಬೆಂಗಳೂರಿನ ಶ್ರೀ ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ನಡೆದ ಸಮಾರಂಭದಲ್ಲಿ ಡಾ.ಸಂಜೀವ್ ಕುಮಾರ್, ರವಿಕುಮಾರ್, ಮಂಜುನಾಥ ಪ್ರಸಾದ್ ಇವರುಗಳು ಪ್ರಶಸ್ತಿ ವಿಜೇತೆಗೆ ಪ್ರಶಸ್ತಿ ಪತ್ರ ಹಾಗೂ ಬಹುಮಾನ ವಿತರಿಸಿದರು.

## ಆಸನ ಭರ್ತಿಗೆ 4 ವಾರ ಅವಕಾಶ

**(1ನೇ ಪುಟದಿಂದ)** ನಿಯಂತ್ರಿಸಲು ಚಿತ್ರಮಂದಿರಗಳಲ್ಲಿ ಶೇ.50 ರಷ್ಟು ಮಾತ್ರ ಆಸನ ಭರ್ತಿ ಮಾಡಬೇಕು ಎಂದು ಮಾರ್ಗಸೂಚಿ ಹೊರಡಿಸಿತ್ತು. ಕೇಂದ್ರ ಸರ್ಕಾರವು ಶೇ.100 ರಷ್ಟು ಭರ್ತಿ ಮಾಡಲು ಅವಕಾಶ ನೀಡಿದ್ದರೂ, ಕೋವಿಡ್ ಹಿನ್ನೆಲೆಯಲ್ಲಿ ಆಯಾ ರಾಜ್ಯ ಸರ್ಕಾರಗಳು ನಿರ್ಧಾರ ಕೈಗೊಳ್ಳಬಹುದು ಎಂದು ತಿಳಿಸಿತ್ತು. ಅದರಂತೆ ಮಾರ್ಗಸೂಚಿ ರೂಪಿಸಲಾಗಿತ್ತು ಎಂದು ವಿವರಿಸಿದರು.

ಆದರೆ ಆರೋಗ್ಯ ಇಲಾಖೆಯ ಈ ಮಾರ್ಗಸೂಚಿಯನ್ನು ಚಲನಚಿತ್ರ ರಂಗದವರು ವಿರೋಧಿಸಿದ್ದಾರೆ. ಕಾರ್ಮಿಕರು, ನಿರ್ಮಾಪಕರ ಹಿತದೃಷ್ಟಿಯಿಂದ ಹಾಗೂ ಚಿತ್ರರಂಗದ ಪರಿಸ್ಥಿತಿ ಶೋಚನೀಯವಾಗಿರುವುದರಿಂದ ನಿರ್ಧಾರ ಬದಲಿಸಬೇಕು ಎಂದು ಹೇಳಿದ್ದಾರೆ. ಇಂತಹ ಸಂದರ್ಭದಲ್ಲಿ ಸರ್ಕಾರ ನಮ್ಮೊಂದಿಗೆ ಇರಬೇಕು ಎಂದು ಕೂಡ ಚಿತ್ರರಂಗದವರು ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದಾರೆ ಎಂದು ತಿಳಿಸಿದರು.

ಈ ಬಗ್ಗೆ ಚರ್ಚೆ ನಡೆದಿದ್ದು, ಮುಖ್ಯಮಂತ್ರಿಗಳ ಸೂಚನೆಯಂತೆ ನಾಲ್ಕು ವಾರಗಳವರೆಗೆ ಶೇ.100 ರಷ್ಟು ಚಿತ್ರಮಂದಿರಗಳಲ್ಲಿ ಆಸನ ಭರ್ತಿ ಮಾಡಲು ಅವಕಾಶ ನೀಡಲಾಗಿದೆ. ಆದರೆ ಇದಕ್ಕೆ ಕಠಿಣವಾದ ಮಾರ್ಗಸೂಚಿ ರೂಪಿಸಲಿದ್ದು, ನಾಳೆಯೇ ಅದನ್ನೂ ಬಿಡುಗಡೆ ಮಾಡಲಾಗುವುದು. ಇದನ್ನು ಚಿತ್ರಮಂದಿರಗಳ ಮಾಲೀಕರು ಅಳವಡಿಸಿಕೊಳ್ಳಬೇಕು. ಜನರು ಕೂಡ ಯಥಾವತ್ತಾಗಿ ಪಾಲಿಸಬೇಕು. ನಾಲ್ಕು ವಾರಗಳಲ್ಲಿ ಪ್ರೇಕ್ಷಕರಿಗೆ ಸೋಂಕು ತಗುಲುವ ಅಥವಾ ಕೋವಿಡ್ ಸೋಂಕು ಹೆಚ್ಚಿದ ಪ್ರಕರಣ ಕಂಡುಬಂದರೆ, ಮತ್ತೆ ನಿರ್ಧಾರ ಬದಲಿಸಿಕೊಳ್ಳುವ ಅನಿವಾರ್ಯ ಸ್ಥಿತಿ ಬರಲಿದೆ ಎಂದು ಸ್ಪಷ್ಟಪಡಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಚಿವ ಸಿ.ಸಿ.ಪಾಟೀಲ್, ನಟ ಶಿವರಾಜ್ ಕುಮಾರ್ ಉಪಸ್ಥಿತರಿದ್ದರು.

## ಅಪಪ್ರಚಾರ ತಡೆಯಲು ಟ್ವಿಟ್ಟರ್‌ಗೆ ಸೂಚನೆ

**(1ನೇ ಪುಟದಿಂದ)** ಸುವ್ಯವಸ್ಥೆ ಎಂದರೆ ಏನು ಹಾಗೂ ಅಧಿಕಾರಸ್ಥರ ಹಕ್ಕುಗಳು ಏನು ಎಂಬುದನ್ನು ಸುಪ್ರೀಂ ಕೋರ್ಟ್‌ನ ಸಂವಿಧಾನಿಕ ಪೀಠ ಸೇರಿದಂತೆ ಹಲವಾರು ಆದೇಶಗಳು ತಿಳಿಸಿರುವುದಾಗಿ ಟ್ವಿಟ್ಟರ್‌ಗೆ ಕಳಿಸಲಾದ ನೋಟಿಸ್‌ನಲ್ಲಿ ಹೇಳಲಾಗಿದೆ. ಟ್ವಿಟ್ಟರ್ ತಾನೇ ನ್ಯಾಯಾಂಗದ ಪಾತ್ರ ನಿರ್ವಹಿಸುವುದು ಹಾಗೂ ಆದೇಶ ಪಾಲನೆ ಮಾಡದೇ ಇರುವುದನ್ನು ಸಮರ್ಥಿಸಿಕೊಳ್ಳಲಾಗದು ಎಂದು ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವಾಲಯದ ಮೂಲಗಳು ಹೇಳಿವೆ.

250 ಟ್ವಿಟ್ಟರ್ ಖಾತೆಗಳು ರೈತರ ನರಮೇಧ ಎಂಬ ಅಪಪ್ರಚಾರ ನಡೆಸಿದ್ದವು. ಇಂತಹ ಪ್ರಚಾರಕ್ಕೆ ಟ್ವಿಟ್ಟರ್ ಖಾತೆಗಳು ಯಾವುದೇ ಆಧಾರ ಒದಗಿಸಿರಲಿಲ್ಲ ಎಂದು ಹೇಳಿದ್ದ ಕೇಂದ್ರ ಎಲೆಕ್ಟ್ರಾನಿಕ್ಸ್ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವಾಲಯ, ಖಾತೆಗಳನ್ನು ತಡೆಯಲು ಆದೇಶ ಹೊರಡಿಸಿತ್ತು.

# ಬೆಂಗಳೂರು ಮಾದರಿಯಲ್ಲಿ ದಾವಣಗೆರೆ ಜಯನಗರ ಅಭಿವೃದ್ಧಿ

## ಕದಂಬ ಪಾರ್ಕ್ ಉದ್ಘಾಟನಾ ಸಮಾರಂಭದಲ್ಲಿ ಹಿರಿಯ ಶಾಸಕ ಎಸ್.ಎ. ರವೀಂದ್ರನಾಥ್ ಭರವಸೆ

ದಾವಣಗೆರೆ, ಫೆ.3- ಬೆಂಗಳೂರಿನ ಜಯನಗರ ಮಾದರಿಯಲ್ಲಿ ಸ್ಥಳೀಯ ಜಯ ನಗರ ಸುತ್ತಮುತ್ತಲ ಪ್ರದೇಶವೂ ಅಭಿವೃದ್ಧಿ ಹೊಂದುತ್ತಿದ್ದು, ಮುಂದಿನ ದಿನಗಳಲ್ಲಿ ಈ ಭಾಗದಲ್ಲಿ ಇನ್ನೂ ಹೆಚ್ಚು ಅಭಿವೃದ್ಧಿ ಕೈಗೊಂಡು ಜನರ ಋಣ ತೀರಿಸುವೆ ಎಂದು ಹಿರಿಯ ಶಾಸಕ ಎಸ್.ಎ.ರವೀಂದ್ರನಾಥ್ ತಿಳಿಸಿದರು.

ಇಲ್ಲಿನ 35ನೇ ವಾರ್ಡಿನ ಜಯನಗರ 'ಸಿ' ಬ್ಲಾಕ್‌ನ ನಾಗರಿಕ ಹಿತರಕ್ಷಣಾ ಸಮಿತಿಯಿಂದ ಮೊನ್ನೆ ಏರ್ಪಾಡಾಗಿದ್ದ ಕದಂಬ ಪಾರ್ಕ್ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಬೆಂಗಳೂರನ್ನು ನೋಡಿದವರೇ ಈ ಭಾಗದಲ್ಲಿ ಹೆಚ್ಚಾಗಿ ಮನೆ ಕಟ್ಟಿಕೊಂಡಿದ್ದು, ರಾಜಧಾನಿ ವಾತಾವರಣ ಇಲ್ಲೂ ಕಂಡು ಬರುತ್ತಿದೆ ಎಂದರು.

ಸ್ಥಳೀಯ ನಿವಾಸಿಗಳೇ ಸ್ವಯಂ ಪ್ರೇರಣೆಯಿಂದ ಪಾರ್ಕ್ ಅಭಿವೃದ್ಧಿ, ನಿರ್ವಹಣೆಗೆ ಮುಂದಾಗಿದ್ದು ಇತರರಿಗೂ ಮಾದರಿಯಾಗಿದೆ. ಅದೇ ರೀತಿ ಶುದ್ಧ ಪ್ರಾಣವಾಯು ಸಿಗುವಂತಾಗಲು ಸಸಿಗಳನ್ನು ನೆಟ್ಟು, ಅವುಗಳನ್ನು ದೊಡ್ಡ ಮರಗಳನ್ನಾಗಿ ಬೆಳೆಸುವ ಕೆಲಸ ಸಹ ಆಗಬೇಕು. ಮುಂದಿನ ದಿನಗಳಲ್ಲಿ ಸಮಿತಿಯ ಎಲ್ಲಾ ಬೇಡಿಕೆಗಳನ್ನು ಈ ಭಾಗದ ಪಾಲಿಕೆ ಸದಸ್ಯರಾದ ಉಮಾ ಪ್ರಕಾಶ್ ಅವರು ಅಧಿಕಾರಿಗಳೊಡನೆ ಚರ್ಚಿಸಿ, ಹಂತ ಹಂತವಾಗಿ ಅಭಿವೃದ್ಧಿ ಕಾರ್ಯ ಕೈಗೊಳ್ಳುವುದಾಗಿ ಅವರು ಭರವಸೆ ನೀಡಿದರು.



ನಿಟುವಳ್ಳಿ ಭಾಗಕ್ಕೆ, ಹೊಸ ಬಡಾವಣೆಗಳಿಗೆ ನೀರು ಕೊಟ್ಟ ಭಗೀರಥ ಶಾಸಕ ಎಸ್.ಎ.ರವೀಂದ್ರನಾಥ್. ಪಾಲಿಕೆಗೆ ಸಿಎಂ ವಿಶೇಷಾನುದಾನ 100 ಕೋಟಿ ಬಂದಾಗ 5-6 ಕೋಟಿ ವೆಚ್ಚದಲ್ಲಿ ಈ ಭಾಗದ ಅಭಿವೃದ್ಧಿಗೆ ಕಾರಣರಾಗಿದ್ದರು. ನೂರಾರು ಪಾರ್ಕ್ ರಕ್ಷಣೆ ಮಾಡಿದ್ದು, ಟಾರ್ ರಸ್ತೆ ಆಗಿದ್ದು ರವೀಂದ್ರನಾಥ್ ಸಚಿವರಿದ್ದ ಅವಧಿಯಲ್ಲಿ.

**ಎ.ವೈ.ಪ್ರಕಾಶ್,**
**ಹಿರಿಯ ವಕೀಲ, ಬಿಜೆಪಿ ಮುಖಂಡ.**

ಪಾಲಿಕೆ ಸದಸ್ಯರೂ ಆದ ಮಾಜಿ ಮೇಯರ್ ಶ್ರೀಮತಿ ಉಮಾ ಪ್ರಕಾಶ್ ಮಾತನಾಡಿ, ಕಳೆದ ಸಲ ಕಾಂಗ್ರೆಸ್ ಆಳ್ವಿಕೆಯಲ್ಲಿ ಈ ಭಾಗದಲ್ಲಿ ಅಭಿವೃದ್ಧಿ ಕಾರ್ಯ ಆಗಲಿಲ್ಲ. ಅದಕ್ಕೂ ಮುಂಚೆ ತಮ್ಮ ಅವಧಿಯಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯವಾಗಿತ್ತು. ಅಂದು ಸಚಿವರಾಗಿದ್ದ ಎಸ್.ಎ. ರವೀಂದ್ರನಾಥ್, ಸಂಸದ ಜಿ.ಎಂ. ಸಿದ್ದೇಶ್ವರರ ಮಾರ್ಗದರ್ಶನದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯ ಕೈಗೊಂಡಿದ್ದೆವು. ಪಾಲಿಕೆ ಸಿಬ್ಬಂದಿ ಕೊರತೆ ಮಧ್ಯೆಯೂ ಸಾಕಷ್ಟು ಅಭಿವೃದ್ಧಿ ಕಾರ್ಯವಾಗುತ್ತಿದೆ. ಸ್ಥಳೀಯರು ಪಾರ್ಕ್ ನಿರ್ವಹಣೆಗೆ ಕೈಜೋಡಿಸುವ ಮೂಲಕ ಇತರರಿಗೂ ಮಾದರಿಯಾಗಿದ್ದಾರೆ. ಹಂತ ಹಂತವಾಗಿ ಅಭಿವೃದ್ಧಿ ಕಾರ್ಯವನ್ನು 35ನೇ ವಾರ್ಡ್‌ನಲ್ಲಿ ಕೈಗೊಳ್ಳಲಾಗುವುದು ಎಂದು ಹೇಳಿದರು.

ಕಸದ ಗಾಡಿ ಸಮಸ್ಯೆ ಬಗ್ಗೆ ಸಿಬ್ಬಂದಿಯೂ ದೂರುತ್ತಿದ್ದಾರೆ. ಮನೆಯ ಮುಂದೆಯೇ ಕಸದ ಗಾಡಿ ಮೈಕ್‌ನಲ್ಲಿ ಹಾಡು ಹಾಕಿ ಕೊಂಡು ಬಂದು ನಿಂತರೂ ಜನರು ಕಸ ಹಾಕಲು ತಡ ಮಾಡುತ್ತಾರೆ. ಇದರಿಂದ ಮುಂದೆ ಹೋಗಲು ಸಿಬ್ಬಂದಿಗೂ ತೊಂದರೆಯಾಗುತ್ತಿದೆ. ಕಸದ ಗಾಡಿ ಮನೆ ಬಳಿ ಬಂದಾಗ ತ್ವರಿತವಾಗಿ ಕಸ ಹಾಕಿ, ಸ್ವಚ್ಛತೆಗೆ ಜನರೂ ಸ್ಪಂದಿಸಬೇಕು ಎಂದು ಅವರು ಕರೆ ನೀಡಿದರು.

ಜಯನಗರ, ಎಸ್ಸೆಸ್ ಹೈಟೆಕ್ ಬಡಾವಣೆ, ರಾಜೇಂದ್ರ ಬಡಾವಣೆ, ಭೂಮಿಕಾ ನಗರ, ಶಕ್ತಿ ನಗರದಲ್ಲೂ ಅಭಿವೃದ್ಧಿ ಕೈಗೊಳ್ಳಲಾಗುವುದು. ರಾಜ ಕಾಲುವೆಯ ದುರಸ್ತಿ, ನಾಮಫಲಕ ಅಳವಡಿಕೆ, ರಸ್ತೆಯಂತಹ ಮೂಲ ಸೌಕರ್ಯ ಕಲ್ಪಿಸಲಾಗುವುದು. ಖಾಲಿ ನಿವೇಶನದಲ್ಲಿ ಕಸ ಸುರಿಯಬೇಡಿ ಎಂದು ಅವರು ಮನವಿ ಮಾಡಿದರು.

ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಮಾತನಾಡಿ, ಹಿಂದೆ ನೂರಾರು ಪಾರ್ಕ್‌ಗಳಿಗೆ ದೂರದೃಷ್ಟಿಯಿಂದ ಬೇಲಿ, ಕಾಂಪೌಂಡ್ ಹಾಕಿಸುವ ಮೂಲಕ ಆಗ ಸಚಿವರಾಗಿದ್ದ ಎಸ್.ಎ.ರವೀಂದ್ರನಾಥ್ ಪಾರ್ಕ್ ಉಳಿಯಲು ಕಾರಣರಾಗಿ ದ್ದಾರೆ ಎಂದರು. ಕದಂಬ ಉದ್ಯಾನವನವೆಂಬ ನಾಮಕರಣ ಮಾಡಿ, ಪಾರ್ಕ್ ಅಭಿವೃದ್ಧಿಗೆ ಸ್ಥಳೀಯರೇ ಮುಂದಾಗಿದ್ದು ಇತರರಿಗೂ ಪ್ರೇರಣೆಯಾಗಿದ್ದಾರೆ ಎಂದು ಶ್ಲಾಘಿಸಿದರು.

ಸಮಿತಿ ಅಧ್ಯಕ್ಷ ಪಿ.ಅಂಜನಪ್ಪ ಅಧ್ಯಕ್ಷತೆ ವಹಿಸಿದ್ದರು. ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷ ಕೆ.ಪ್ರಸನ್ನಕುಮಾರ್, ಆಯುಕ್ತ ವಿಶ್ವನಾಥ್ ಮುದಜ್ಜಿ, ಹಿರಿಯ ವಕೀಲರೂ ಆದ ದೂಡಾ ಮಾಜಿ ಅಧ್ಯಕ್ಷ ಏಕನಾಥ್ ರಾಯ್ಕರ್, ಎ.ವೈ.ಪ್ರಕಾಶ್, ಪಾಲಿಕೆ ಸದಸ್ಯ ಕೆ.ಎಂ. ವೀರೇಶ್, ಹಿರಿಯ ಸಾಹಿತಿ ಎಸ್.ಟಿ. ಶಾಂತ ಗಂಗಾಧರ್, ಬಿ.ಎನ್. ಬಿಕ್ಕೋಜಪ್ಪ, ಟಿ.ಈ.ರುದ್ರಪ್ಪ, ವೈ.ತಿಪ್ಪೇಸ್ವಾಮಿ ಶೆಟ್ರು, ಪಿ.ಎಸ್.ನಾಗರಾಜ್, ವೈ.ಅನಂತ ಶೆಟ್ರು, ಡಿ.ರವಿಕುಮಾರ್, ಪಂಕಜಾ, ಸುರೇಶ್ ವಿ. ಮಸಲವಾಡ, ನಿಂಗಪ್ಪ ಇಟಗಿ, ಜಿ.ಪಿ. ರುದ್ರಪ್ಪ, ಪದ್ಮಾಕುಮಾರಿ, ಎಚ್.ಎಸ್. ಮುರುಗೇಶ್, ಶೋಭಾ, ಡಿ.ಆರ್. ವಸಂತ್, ಡಿ.ಭೈರಪ್ಪ, ಎನ್.ಬಿ. ರೇವಣಸಿದ್ದಪ್ಪ ಇತರರು ಇದ್ದರು.

## ಗುಳೇದ ಲಕ್ಕಮ್ಮ ದೇವಿ ದೇವಸ್ಥಾನ ಶೀಘ್ರ ಪೂರ್ಣ

ಹರಪನಹಳ್ಳಿ, ಫೆ.3- ತಾಲ್ಲೂಕಿನ ಹುಲಿಕಟ್ಟಿ ಗ್ರಾಮದ ಶಕ್ತಿ ದೇವತೆ, ಅಸಂಖ್ಯಾತ ಭಕ್ತರ ಆರಾಧ್ಯ ದೈವ ಗುಳೇದ ಲಕ್ಕಮ್ಮ ದೇವಿ ದೇವಸ್ಥಾನದ ಕಾಮಗಾರಿ ಪ್ರಗತಿಯಲ್ಲಿದ್ದು, ಮುಂಬರುವ ಆಗಸ್ಟ್ ತಿಂಗಳ ಅಂತ್ಯದೊಳಗೆ ಕಾಮಗಾರಿ ಪೂರ್ಣಗೊಂಡು ದೇವಸ್ಥಾನ ಉದ್ಘಾಟನೆ ಹಾಗೂ ದೇವಿ ಮೂರ್ತಿ ಪ್ರತಿಷ್ಠಾಪಿಸಲಾಗುವುದು ಎಂದು ದೇವಸ್ಥಾನ ಅಭಿವೃದ್ಧಿ ಸಮಿತಿ ಅಧ್ಯಕ್ಷರೂ ಆದ ಕೆಪಿಸಿಸಿ ಮಹಿಳಾ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಪಿ.ಲತಾ ಮಲ್ಲಿಕಾರ್ಜುನ್ ತಿಳಿಸಿದ್ದಾರೆ.

ಪ್ರತಿ ಎರಡು ವರ್ಷಕ್ಕೊಮ್ಮೆ ಹುಲಿಕಟ್ಟಿ ಗ್ರಾಮದ ಸಮೀಪದ ಅರಣ್ಯ ಪ್ರದೇಶದಲ್ಲಿ ಎರಡು ದಿನಗಳ ಕಾಲ ಜರುಗುವ ಜಾತ್ರೋತ್ಸವ ಅಂಗವಾಗಿ ನಿನ್ನೆ ನಡೆದ ಮೊದಲ ದಿನದ ಧಾರ್ಮಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಗ್ರಾಮಸ್ಥರಿಂದ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಲಕ್ಕಮ್ಮ ದೇವಿಯ ಬೆಳ್ಳಿ ವಿಗ್ರಹ ಮಾಡಿಸಬೇಕೆನ್ನುವುದು ಸಹೋದರ, ಮಾಜಿ ಶಾಸಕ ದಿವಂಗತ ಎಂ.ಪಿ.ರವೀಂದ್ರ ಅವರ ಕನಸಾಗಿತ್ತು. ರವೀಂದ್ರ ಅವರಿಗೆ ಸಂಬಂಧಿಸಿದ ಉಡುಗೊರೆಯ 8 ಕೆ.ಜಿ, ದೇವಿಗೆ ಸಂಬಂಧಿಸಿದ 3 ಕೆ.ಜಿ, ನಮ್ಮಿಂದ 3 ಕೆ.ಜಿ ಸೇರಿ ಒಟ್ಟು 14 ಕೆ.ಜಿ. ಬೆಳ್ಳಿಯ ದೇವಿಯ ವಿಗ್ರಹವನ್ನು ಪಶ್ಚಿಮ ಬಂಗಾಳದ ಕಲಾವಿದರಿಂದ ಸಿದ್ಧಗೊಳಿಸಲಾಗುತ್ತಿದೆ ಎಂದು ಅವರು ಮಾಹಿತಿ ನೀಡಿದರು.



**ತಾಲ್ಲೂಕಿನ ಹುಲಿಕಟ್ಟೆ ಗ್ರಾಮದ ಕಾರ್ಯಕ್ರಮದಲ್ಲಿ ಎಂ.ಪಿ. ಲತಾ ಮಲ್ಲಿಕಾರ್ಜುನ್**

ದೇವಸ್ಥಾನವನ್ನು 1 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತಿದ್ದು, ಸದ್ಯ 40 ಲಕ್ಷ ರೂ. ವೆಚ್ಚವಾಗಿದೆ. ಶಾಸಕರ ಅನುದಾನ 10 ಲಕ್ಷ ರೂ. ಹೊರತುಪಡಿಸಿ ಎಂ.ಪಿ. ರವೀಂದ್ರ ವೈಯಕ್ತಿಕವಾಗಿ 35 ಲಕ್ಷ ರೂ. ದೇವಸ್ಥಾನಕ್ಕೆ ನೀಡಿದ್ದಾರೆ. ಎಂ.ಪಿ. ರವೀಂದ್ರ ಅವರ ಆರೋಗ್ಯ ಸಮಸ್ಯೆ ಮತ್ತು ಚುನಾವಣೆ ಅಂಗವಾಗಿ ದೇವಸ್ಥಾನ ಕಾಮಗಾರಿ ನೆನೆಗುದಿಗೆ ಬಿದ್ದಿತ್ತು. ಸದ್ಯ ಅಗತ್ಯವಿರುವ ಉಳಿದ ಹಣವನ್ನು ಗ್ರಾಮಸ್ಥರ ಸಹಕಾರದೊಂದಿಗೆ ನಾವು ಭರಿಸುವ ಮೂಲಕ ದೇವಸ್ಥಾನ ಕಾಮಗಾರಿ ಪೂರ್ಣಗೊಳಿಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ತಾಲ್ಲೂಕು ಪಂಚಾಯ್ತಿ ಸದಸ್ಯ ಹುಲಿಕಟ್ಟಿ ಚಂದ್ರಪ್ಪ, ಪುರಸಭೆ ಸದಸ್ಯರಾದ ಎಂ.ವಿ. ಅಂಜಿನಪ್ಪ, ಟಿ. ವೆಂಕಟೇಶ್ ಗಣೇಶ್, ಗೊಂಗಡಿ ನಾಗರಾಜ್, ಮುಖಂಡರಾದ ಎಚ್. ವಸಂತಪ್ಪ, ರಾಯದುರ್ಗದ ವಾಗೀಶ್, ಹೆಚ್. ಎಂ. ಕೊಟ್ರೇಶ್, ಬಣಕಾರ ಗಂಗಾಧರಪ್ಪ, ಟಿ. ಹೋಮ್ಯಪ್ಪ, ಹೊಳಿಯಪ್ಪ, ಗುರುವಪ್ಪ, ಕೆ. ಹಾಲೇಶ್, ಎನ್. ಶಿವಾನಂದಪ್ಪ, ಮಹಾದೇವಪ್ಪ, ಬಿ. ಕೃಷ್ಣಪ್ಪ, ಕುಂಬಾರ ಬಸವರಾಜ್, ಟಿ. ದುಶ್ಯಂತ್, ನಂದ್ಯಾಲ ಪ್ರಕಾಶ್, ಬಿ. ಸದ್ಯೋಜಾತಪ್ಪ, ಬಾರಿಕರ ತಿರುಕಪ್ಪ, ಹೆಚ್. ಹನುಮಂತಪ್ಪ, ಕವಿತಾ ಸುರೇಶ್, ಉಮಾಶಂಕರ್ ಇನ್ನಿತರರಿದ್ದರು.

## ಬಿಜೆಪಿ ಮತ್ತೆ ವಾಮಮಾರ್ಗ

**(1ನೇ ಪುಟದಿಂದ)** ಹಾಕಲಿ. ಆದರೆ ಬೇರೆ ಜಿಲ್ಲೆಯವರ ಹೆಸರನ್ನು ಇಲ್ಲಿ ಸೇರಿಸಲು ಯಾವ ಕಾರಣಕ್ಕೂ ಬಿಡುವುದಿಲ್ಲ ಎಂದರು.

ಬಿಜೆಪಿಯ ದುರ್ಮಾರ್ಗದ ಕುರಿತು ನ್ಯಾಯಾಲಯದ ಮೆಟ್ಟಿಲೇರಲಿದ್ದೇವೆ. ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸುತ್ತೇವೆ ಎಂದು ಹೇಳಿದರು.

ಕೆಪಿಸಿಸಿ ವಕ್ತಾರ ಡಿ.ಬಸವರಾಜ್ ಮಾತನಾಡುತ್ತಾ, ಸಚಿವ ಆರ್.ಶಂಕರ್ ಇತ್ತೀಚೆಗಷ್ಟೇ ರಾಣೇಬೆನ್ನೂರು ನಗರಸಭೆ ಅಧ್ಯಕ್ಷರ ಚುನಾವಣೆಯಲ್ಲಿ ಅಲ್ಲಿನ ನಿವಾಸಿ ಎಂದು ಮತದಾನ ಮಾಡಿದ್ದಾರೆ. ಈಗ ದಾವಣಗೆರೆ ಪಾಲಿಕೆ ಮೇಯರ್ ಸ್ಥಾನಕ್ಕೆ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಶಂಕರ್ ಹೆಸರಿನಲ್ಲಿ ಜಯನಗರದಲ್ಲಿ ಬಾಡಿಗೆ ಮನೆ ಮಾಡಿ, ನಕಲಿ ದಾಖಲೆ ಸೃಷ್ಟಿಸಿ, ಮತದಾರರ ಪಟ್ಟಿಯಲ್ಲಿ ಅವರ ಹೆಸರು ಸೇರಿಸಲು ಬಿಜೆಪಿ ಮುಂದಾಗಿದೆ ಎಂದರು.

ತುಮಕೂರಿನಲ್ಲಿ ವಾಸವಾಗಿರುವ ಎಂಎಲ್‌ಸಿ ಚಿದಾನಂದಗೌಡರ ಹೆಸರಿನಲ್ಲಿ ವಿದ್ಯಾನಗರದಲ್ಲಿ ಬಾಡಿಗೆ ಮನೆ ಮಾಡಿ ಅವರ ಹೆಸರು ಮತದಾರರ ಪಟ್ಟಿಯಲ್ಲಿ ಸೇರಿಸಲು ಮುಂದಾಗಿರುವುದು ಪ್ರಜಾಪ್ರಭುತ್ವದ ಕಗ್ಗೊಲೆಯಾಗಿದೆ ಎಂದು ಕಿಡಿಕಾರಿದರು.

ಪಾಲಿಕೆ ಸದಸ್ಯ ದೇವರಮನಿ ಶಿವಕುಮಾರ್ ಮಾತನಾಡಿ, ಅಕ್ರಮವಾಗಿ ಮತದಾರರ ಪಟ್ಟಿಗೆ ಹೆಸರುಗಳನ್ನು ಸೇರ್ಪಡೆ ಮಾಡಿರುವ ಅಧಿಕಾರಿಗಳನ್ನು ಅಮಾನತ್ತಿನಲ್ಲಿಡಬೇಕು ಎಂದು ಆಗ್ರಹಿಸಿದರು.

ಪಾಲಿಕೆ ಸದಸ್ಯ ಚಮನ್ ಸಾಬ್, ಈ ರೀತಿ ಹೊರಗಿನಿಂದ ಎಂಎಲ್‌ಸಿಗಳನ್ನು ಕರೆತಂದು ಚುನಾವಣೆ ನಡೆಸುವುದಾದರೆ ಸ್ಥಳೀಯ ಜನಪ್ರತಿನಿಧಿಗಳೇಕೆ? ಎಂದು ಪ್ರಶ್ನಿಸಿದರು. ಮುಂದೊಂದು ದಿನ ಮುಖ್ಯಮಂತ್ರಿ ಯಡಿಯೂರಪ್ಪನವರೂ ಸಹ ಬಂದು ಮತದಾನ ಮಾಡಿದರೆ ಆಶ್ಚರ್ಯ ಪಡಬೇಕಿಲ್ಲ ಎಂದರು.

ಪ್ರತಿಭಟನೆಯಲ್ಲಿ ಪಾಲಿಕೆ ಸದಸ್ಯರಾದ ಗಡಿಗುಡಾಳ್ ಮಂಜುನಾಥ್, ಜೆ.ಎನ್.ಶ್ರೀನಿವಾಸ್, ಕಲ್ಲಳ್ಳಿ ನಾಗರಾಜ್, ಕಾಂಗ್ರೆಸ್ ಮುಖಂಡರಾದ ಗಣೇಶ್ ಹುಲ್ಮನಿ, ಉಮೇಶ್, ಕೆ.ಎಂ.ಮಂಜುನಾಥ, ಆರ್.ಹೆಚ್. ನಾಗಭೂಷಣ್, ಮಲ್ಲಿಕಾರ್ಜುನ್ ಇಂಗಳೇಶ್ವರ ಮತ್ತಿತರರು ಭಾಗವಹಿಸಿದ್ದರು.

ಮಾಧ್ಯಮದವರನ್ನು ಸಚಿವ ಶಂಕರ್ ನೀಡಿರುವ ವಿಳಾಸಕ್ಕೆ ಕರೆದೊಯ್ದ ಕಾಂಗ್ರೆಸ್ ಮುಖಂಡರು, ಮನೆಯಲ್ಲಿದ್ದ ಮಹಿಳೆಯನ್ನು ವಿಚಾರಿಸಲಾಗಿ, ಶಂಕರ್ ಅವರು ಬಾಡಿಗೆಗೆ ಮನೆ ನೋಡಿಕೊಂಡು ಹೋಗಿದ್ದು, ಕರಾರು ಪತ್ರ ಮಾಡಿಸಿದ್ದಾಗಿ ಮಹಿಳೆ ಮಾಹಿತಿ ನೀಡಿದ್ದಾರೆ.

## ನಾಳೆಯಿಂದ ಸರ್ಕಾರಿ ನೌಕರರ ಕ್ರೀಡಾಕೂಟ, ಸಾಂಸ್ಕೃತಿಕ ಸ್ಪರ್ಧೆ

ದಾವಣಗೆರೆ, ಫೆ.3- ಜಿಲ್ಲಾ ಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ, ಸಾಂಸ್ಕೃತಿಕ ಸ್ಪರ್ಧೆ ಮತ್ತು ರಾಜ್ಯಮಟ್ಟಕ್ಕೆ ಆಯ್ಕೆ ಪ್ರಕ್ರಿಯೆ ನಡೆಯಲಿದೆ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ. ಪಾಲಾಕ್ಷಿ ಹಾಗೂ ತಹಶೀಲ್ದಾರ್ ಬಿ.ಎನ್. ಗಿರೀಶ್ ಅವರುಗಳು ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಜಿಲ್ಲಾ ಶಾಖೆ ಸಂಯುಕ್ತಾಶ್ರಯದಲ್ಲಿ ಕ್ರೀಡಾಕೂಟ, ಸಾಂಸ್ಕೃತಿಕ ಸ್ಪರ್ಧೆಗಳು ಆಯೋಜನೆಗೊಂಡಿವೆ ಎಂದು ತಿಳಿಸಿದರು.

**ಉದ್ಘಾಟನಾ ಸಮಾರಂಭ :** ನಾಡಿದ್ದು ದಿನಾಂಕ 5 ರಂದು ಬೆಳಿಗ್ಗೆ 10.30 ಕ್ಕೆ ಜಿಲ್ಲಾ ಕ್ರೀಡಾಂಗಣದಲ್ಲಿ ಉದ್ಘಾಟನಾ ಸಮಾರಂಭ ಜರುಗಲಿದೆ. ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಸಮಾರಂಭ ಉದ್ಘಾಟಿಸುವರು. ಶಾಸಕ ಎಸ್.ಎ. ರವೀಂದ್ರನಾಥ್ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ, ಸಂಸದ ಜಿ.ಎಂ. ಸಿದ್ದೇಶ್ವರ, ಜಿ.ಪಂ. ಅಧ್ಯಕ್ಷ ಕೆ.ವಿ. ಶಾಂತಕುಮಾರಿ, ಶಾಸಕರಾದ ಕೆ. ಮಾಡಾಳು ವಿರೂಪಾಕ್ಷಪ್ಪ, ಎಸ್.ವಿ. ರಾಮಚಂದ್ರ, ಪ್ರೊ. ಎನ್. ಲಿಂಗಣ್ಣ, ಡಾ. ಶಾಮನೂರು ಶಿವಶಂಕರಪ್ಪ ಮುಂತಾದ ಗಣ್ಯರು ಭಾಗವಹಿಸಲಿದ್ದಾರೆ. ವಿಶೇಷ ಆಹ್ವಾನಿತರಾಗಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಎಸ್ಪಿ ಹನುಮಂತರಾಯ, ಜಿ.ಪಂ. ಸಿಇಓ ಪದ್ಮಾ ಬಸವಂತಪ್ಪ ಭಾಗವಹಿಸಲಿದ್ದಾರೆ.

**ಸಂಗೀತ ಸಂಜೆ :** ಸಂಜೆ 6 ಗಂಟೆಗೆ ಸಂಗೀತ ಸಂಜೆ ಕಾರ್ಯಕ್ರಮ ನಡೆಯಲಿದೆ. ಝೀ ಕನ್ನಡ 'ಸರಿಗಮಪ' ಖ್ಯಾತಿಯ ಕಂಬದ ರಂಗಯ್ಯ, ನೇಹ ಶಾಸ್ತ್ರಿ, ಅಶ್ವಿನ್ ಶರ್ಮಾ, ಈ ಟಿವಿ 'ಎದೆ ತುಂಬಿ ಹಾಡುವೆನು' ಖ್ಯಾತಿಯ ಇಂಚರ ಆರ್. ಮೂರ್ತಿ, ಸಚಿನ್ ತಂಡದವರು ಸಂಗೀತ ಸಂಜೆ ನಡೆಸಿಕೊಡಲಿದ್ದಾರೆ. ಶ್ರೀ ಗುರು ವಾದ್ಯ ವೃಂದದ ಗೀತಾ ಅವರ ನೃತ್ಯ ಪ್ರದರ್ಶನವಿದೆ. 'ಗುಡುಗುಡಿಯ ಸೇದಿ ನೋಡೋ' ಚಿತ್ರ ತಂಡ ಕೂಡ ಆಗಮಿಸಲಿದೆ.

ಇದೇ ದಿನಾಂಕ 6 ರಂದು ಬೆಳಿಗ್ಗೆ 10ಕ್ಕೆ ಜಿಲ್ಲಾ ಕ್ರೀಡಾಂಗಣದಲ್ಲಿ ವೇಟ್ ಲಿಫ್ಟಿಂಗ್, ಪವರ್ ಲಿಫ್ಟಿಂಗ್, ಬಾಡಿ ಬಿಲ್ಡಿಂಗ್ ಆಂಜನೇಯ ಬಡಾವಣೆಯ ಕುಸ್ತಿ ಒಳಾಂಗಣ ಕ್ರೀಡಾಂಗಣದಲ್ಲಿ ಕುಸ್ತಿ ಪಂದ್ಯ ನಡೆಯಲಿದೆ.

ಎಸ್.ಎಸ್. ಬಡಾವಣೆ ನೇತಾಜಿ ಒಳಾಂಗಣ ಕ್ರೀಡಾಂಗಣದಲ್ಲಿ ಚೆಸ್, ಕೇರಂ, ಷಟಲ್ ಬ್ಯಾಡ್ಮಿಂಟನ್ ಹಾಗೂ ಆಫೀಸರ್ಸ್ ಕ್ಲಬ್‌ನಲ್ಲಿ ಟೇಬಲ್ ಟೆನ್ನಿಸ್ ಕ್ರೀಡೆಗಳು ನಡೆಯಲಿವೆ. ಅಂದು ಬೆಳಿಗ್ಗೆ 10 ಕ್ಕೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಮುದಾಯ ಭವನದಲ್ಲಿ ಸಾಂಸ್ಕೃತಿಕ ಸ್ಪರ್ಧೆಗಳು ಮತ್ತು ಸಂಜೆ 5 ಕ್ಕೆ ಬಹುಮಾನ ವಿತರಣೆ, ಸಮಾರೋಪ ಸಮಾರಂಭ ಏರ್ಪಡಿಸಲಾಗಿದೆ. ದಿನಾಂಕ 7 ರಂದು ಬೆಳಿಗ್ಗೆ 8 ಕ್ಕೆ ಜಿಲ್ಲಾ ಕ್ರೀಡಾಂಗಣದಲ್ಲಿ ಫುಟ್ಬಾಲ್, ಕ್ರಿಕೆಟ್, ಹಾಕಿ, ಬ್ಯಾಸ್ಕೆಟ್ ಬಾಲ್ ಕ್ರೀಡೆಗಳ ರಾಜ್ಯ ಮಟ್ಟದ ಆಯ್ಕೆ ಪ್ರಕ್ರಿಯೆ ನಡೆಯಲಿದೆ.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ಹೆಚ್.ಆರ್. ಮಂಜುನಾಥ್, ಎಸ್.ಕಲ್ಲೇಶ್ವರಪ್ಪ, ಕೆ.ಎಂ. ಸಿದ್ದಲಿಂಗಸ್ವಾಮಿ, ಡಾ. ಡಿ. ಉಮೇಶ್ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಬಿ. ಶ್ರೀನಿವಾಸ್ ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಸಂಧ್ಯಾ ವಂದನೆ

ಅಖಿಲ ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಮತ್ತು ಅಖಿಲ ಕರ್ನಾಟಕ ಅರ್ಚಕರು ಮತ್ತು ಪುರೋಹಿತರ ಸಂಘದ ವತಿಯಿಂದ ತ್ರಿಮತಸ್ಥ ಬ್ರಾಹ್ಮಣ ಬಂಧುಗಳಿಗೆ ಸಂಧ್ಯಾವಂದನೆ ಮತ್ತು ನಿತ್ಯ ದೇವತಾರ್ಚನೆ ಶಿಬಿರ ಇಂದಿನಿಂದ ಇದೇ ದಿನಾಂಕ 15 ರವರೆಗೆ ಪ್ರತಿದಿನ ಸಂಜೆ 5.30 ರಿಂದ 6.30 ರವರೆಗೆ ಶ್ರೀ ಜಯದೇವ ವೃತ್ತದಲ್ಲಿರುವ ಕೂಡಲಿ ಶಂಕರ ಮಠದಲ್ಲಿ ನಡೆಯಲಿದೆ. ಶಿಬಿರದಲ್ಲಿ ಪಾಲ್ಗೊಳ್ಳಲು ವಯಸ್ಸಿನ ಮಿತಿ ಇರುವುದಿಲ್ಲ ಎಂದು ಪುರೋಹಿತರ ಸಂಘದ ಅಧ್ಯಕ್ಷ ಪವನ್ ಕುಮಾರ್‌ಭಟ್ (9886212889, 9611165426) ತಿಳಿಸಿದ್ದಾರೆ.

# ಡಿನೋಟಿಫಿಕೇಷನ್; ಜಾಮೀನಿನ ಮೇಲಿರುವವರು ಸಿಎಂ ಆಗಿ ಮುಂದುವರೆಯಬಹುದೇ?


## ವಿಧಾನಸಭೆಯಲ್ಲಿ ರಾಜ್ಯಪಾಲರ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಪ್ರಶ್ನೆ

ಬೆಂಗಳೂರು, ಫೆ. 3- ಡಿನೋಟಿಫಿಕೇಷನ್ ಪ್ರಕರಣದಲ್ಲಿ ಜಾಮೀನಿನ ಮೇಲಿರುವ ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿ ಹುದ್ದೆಯಲ್ಲಿ ಮುಂದುವರೆಯುವುದು ಸರಿಯೇ? ಎಂದು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ವಿಧಾನಸಭೆಯಲ್ಲಿಂದು ಪ್ರಶ್ನಿಸಿದ್ದಾರೆ.

ರಾಜ್ಯಪಾಲರ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಅವರು, ಡಿನೋಟಿಫಿಕೇಷನ್ ಪ್ರಕರಣದಲ್ಲಿ ಯಡಿಯೂರಪ್ಪ, ಗಣಿ ಸಚಿವ ಮುರುಗೇಶ್ ನಿರಾಣಿ ಸೇರಿದಂತೆ ಮೂವರ ವಿರುದ್ಧ ಆರೋಪಗಳಿವೆ ಎಂದರು.

ಹಗರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ನೀಡಿದ ತೀರ್ಪನ್ನು ಪ್ರಶ್ನಿಸಿದ ಇವರ ಅರ್ಜಿಯನ್ನು ಸುಪ್ರೀಂಕೋರ್ಟ್ ತಿರಸ್ಕರಿಸಿದೆ. ಅರ್ಜಿ ವಿಚಾರಣೆ ನಡೆಸಿದ ಮೂವರು ಸದಸ್ಯರ ಪೀಠ ಕೆಳ ಹಂತದ ನ್ಯಾಯಾಲಯ ನೀಡಿರುವ ತೀರ್ಪನ್ನು ಎತ್ತಿ ಹಿಡಿದು ವಿಚಾರಣೆ ಆಗಲಿ ಎಂದಿತು.

ಈ ಸಮಯದಲ್ಲಿ ಯಡಿಯೂರಪ್ಪ ಅವರ ವಕೀಲರು, ಯಡಿಯೂರಪ್ಪ ಕರ್ನಾಟಕದ ಮುಖ್ಯಮಂತ್ರಿಯಾಗಿದ್ದಾರೆ, ಅವರನ್ನು ಮುಂದಿನ ದಿನಗಳಲ್ಲಿ ಬಂಧಿಸಬಹುದು, ಅರ್ಜಿದಾರರ ಆರೋಪಗಳಲ್ಲಿ ಹುರುಳಿಲ್ಲ, ಹೈಕೋರ್ಟ್ ನೀಡಿರುವ ತೀರ್ಪನ್ನು ವಜಾಗೊಳಿಸಬೇಕು ಎಂದು ಮನವಿ ಮಾಡಿದ್ದಾರೆ. ಇದಕ್ಕೆ ಪೀಠ, ಮುಖ್ಯಮಂತ್ರಿ ಅವರನ್ನು ಬಂಧಿಸಲು ಸಾಧ್ಯವೇ, ಅವರೇ ಆದೇಶ ಹೊರಡಿಸಬೇಕು, ತನಿಖೆ ನಡೆಯಲಿ, ಆದರೆ, ಅವರನ್ನು ಬಂಧಿಸುವ ಅಗತ್ಯವಿಲ್ಲ ಎಂದು ಸ್ಪಷ್ಟವಾಗಿ ತಿಳಿಸಿದೆ, ಇದನ್ನು ನಾನೂ ಮಾಧ್ಯಮಗಳಲ್ಲಿ ಓದಿ ದ್ದೇನೆ, ಇದರ ಅರ್ಥ ಏನು ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು. ಜನ ಹಾದಿ ಬೀದಿಯಲ್ಲಿ ಆಡಿಕೊಳ್ಳುತ್ತಿದ್ದಾರೆ, ಜಾಮೀನಿನ ಮೇಲಿರುವವರು ಮುಖ್ಯಮಂತ್ರಿ ಆಗಿರಬಹುದೇ ಎಂದು ಕೇಳುತ್ತಿದ್ದಾರೆ, ಅದನ್ನು ನಾನು ಸದನದಲ್ಲಿ ಪ್ರಸ್ತಾಪಿಸುತ್ತಿದ್ದೇನೆ.



ಮುಖ್ಯಮಂತ್ರಿ ಅವರು ಜೈಲಿಗೆ ಹೋಗಬೇಕು ಎಂದು ನಾನು ಹೇಳುವುದಿಲ್ಲ, ಸಾರ್ವಜನಿಕ ಜೀವನದಲ್ಲಿ ನಮ್ಮನ್ನು ಪ್ರಶ್ನೆ ಮಾಡುತ್ತಾರೆ, ಆದರೆ ನ್ಯಾಯಾಲಯ ನೀಡಿರುವ ಆದೇಶವನ್ನಷ್ಟೇ ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ ಎಂದರು.

ಈ ಹಂತದಲ್ಲಿ ಮುಂದಿನ ಸನ್ನಿವೇಶ ಹೇಗೆ ನಿರ್ಮಾಣವಾಗಬಹುದು ಎಂದು ರಮೇಶ್ ಕುಮಾರ್ ಹೇಳಿದಾಗ ಗೃಹ ಸಚಿವ ಬಸವರಾಜ ಬೊಮ್ಮಾಯಿ ವಿರೋಧ ವ್ಯಕ್ತಪಡಿಸಿದರು.

ಸದ್ಯದ ಸ್ಥಿತಿಯಲ್ಲಿ ಮುಂದಿನ ಸನ್ನಿವೇಶದ ಬಗ್ಗೆ ಮಾತನಾಡುವುದು ಬೇಡ ಎಂದಾಗ ಪುನಃ ಮಾತನಾಡಿದ ರಮೇಶ್ ಕುಮಾರ್, ಕೇಂದ್ರದಲ್ಲಿ ಜನತಾದಳ ಸರ್ಕಾರ ಬರುವವರೆಗೆ ರಾಜಕಾರಣದಲ್ಲಿ ಯಾರೂ ನಿರೀಕ್ಷಣಾ ಜಾಮೀನು ಪಡೆಯುವ ಸ್ಥಿತಿ ಇರಲಿಲ್ಲ ಎಂದರು.

ಮಾತು ಮುಂದುವರೆಸಿದ ಸಿದ್ದರಾಮಯ್ಯ, ಪ್ರಕರಣದ ಆರೋಪದಲ್ಲಿ ಮುಖ್ಯಮಂತ್ರಿಗಳು, ಮಂತ್ರಿಗಳಿದ್ದಾರೆ, ಇವರು ಅಧಿಕಾರದಲ್ಲಿ ಮುಂದುವರೆಯುವುದು ನೈತಿಕವಲ್ಲ ಎಂದು ಜನ ಹೇಳುತ್ತಾರೆ, ಅದನ್ನು ಪ್ರಸ್ತಾಪಿಸಿದ್ದೇನೆ ಎಂದರು.

ಬಸವರಾಜ ಬೊಮ್ಮಾಯಿ ಮಾತನಾಡಿ, ಸಾರ್ವಜನಿಕ ಜೀವನದಲ್ಲಿ ಇರುವವರ ಮೇಲೆ ದೂರು ದಾಖಲಾಗುವುದು ಸಹಜ, ಇದು ಅವರು-ಇವರು ಅಂತ ಇಲ್ಲ, ಬಹುತೇಕ ಎಲ್ಲರ ಮೇಲೆ ಇಂತಹ ಮೊಕದ್ದಮೆಗಳು ದಾಖಲಾಗಿವೆ, ಜನರಿಗೂ ಇದು ಗೊತ್ತಿದೆ, ದಾಖಲಾದ ಮೊಕದ್ದಮೆಗಳಲ್ಲಿ ಹಲವು ಮಂದಿ ನಿರ್ದೋಷಿಗಳಾಗಿ ಹೊರಬಂದಿದ್ದಾರೆ, ಆರೋಪ ಬಂದ ಕೂಡಲೇ ಅದನ್ನೇ ದೊಡ್ಡದು ಮಾಡಲು ಸಾಧ್ಯವಿಲ್ಲ ಎಂದರು.

ಆಡಳಿತ ಪಕ್ಷದಲ್ಲಿದ್ದವರ ಮೇಲೂ ಆರೋಪಗಳು ಬರುತ್ತವೆ, ವಿರೋಧ ಪಕ್ಷಗಳವರ ಮೇಲೂ ಆರೋಪ ಬರುತ್ತವೆ ಎಂದು ಬಸವರಾಜ ಬೊಮ್ಮಾಯಿ ಹೇಳಿದಾಗ ಮಧ್ಯೆ ಪ್ರವೇಶಿಸಿದ ರಮೇಶ್ ಕುಮಾರ್, ಈ ವಿಷಯವನ್ನು ನಾವೇಕೆ ಪ್ರಸ್ತಾಪಿಸಿದ್ದೇವೆಂದರೆ ಈಗಿನ ಬೆಳವಣಿಗೆಗಳನ್ನು ಜನ ನೋಡುತ್ತಿರುತ್ತಾರೆ, ನಾವು ಈ ಬಗ್ಗೆ ಮಾತನಾಡದಿದ್ದರೆ ಆಡಳಿತ ಪಕ್ಷದೊಂದಿಗೆ ಹೊಂದಾಣಿಕೆ ಮಾಡಿಕೊಂಡಿದ್ದಾರಾ? ಅಂತ ಜನ ಪ್ರಶ್ನೆ ಮಾಡುತ್ತಾರೆ ಎಂದರು.

ಮಾತು ಮುಂದುವರೆಸಿದ ಸಿದ್ದರಾಮಯ್ಯ, ಇದು ಕೇವಲ ನೈತಿಕತೆಯ ಪ್ರಶ್ನೆ, ಈ ಹಿಂದೆ ತಮ್ಮ ಸರ್ಕಾರದಲ್ಲಿ ಸಚಿವರಾಗಿದ್ದ ಜಾರ್ಜ್ ಮೇಲೂ ಆರೋಪ ಬಂತು, ಸಿಬಿಐ ತನಿಖೆಗೆ ಆದೇಶ ನೀಡಲಾಯಿತು, ಜಾರ್ಜ್ ರಾಜೀನಾಮೆ ನೀಡಿದರು, ಇದನ್ನು ಗಮನದಲ್ಲಿಟ್ಟುಕೊಂಡು ಎಲ್ಲ ಪ್ರಕರಣಗಳನ್ನು ನೋಡಬೇಕು ಎಂದರು.

## ಆಯುರ್ವೇದಕ್ಕೆ ಅಭೂತಪೂರ್ವ ಭವಿಷ್ಯ : ಶ್ರೀ ತ್ಯಾಗೀಶ್ವರಾನಂದಜೀ



ದಾವಣಗೆರೆ, ಫೆ.3- ನಗರದ ಅಶ್ವಿನಿ ಆಯುರ್ವೇದ ಮೆಡಿಕಲ್ ಕಾಲೇಜಿನಲ್ಲಿ ಔಷಧಿ ಸಸ್ಯಗಳ ನೆಡುವಿಕೆ ಕಾರ್ಯಕ್ರಮವು ನಿನ್ನೆ ನಡೆಯಿತು.

ಮುಖ್ಯ ಅತಿಥಿಗಳಾಗಿ ರಾಮಕೃಷ್ಣಾಶ್ರಮದ ಶ್ರೀ ತ್ಯಾಗೀಶ್ವರಾನಂದಜೀ ಸಸಿಗಳನ್ನು ನೆಡುವುದರ ಮೂಲಕ ಸಾಂಕೇತಿಕವಾಗಿ ಅಶ್ವಿನಿ ವನದ ಔಷಧಿ ವನದ ಉದ್ಘಾಟನೆ ನೆರವೇರಿಸಿದರು. ಬಾತಿ ಗ್ರಾಪಂ ಸದಸ್ಯರಾದ ಹನುಮಂತಪ್ಪ, ಉಮೇಶ್ ಅತಿಥಿಗಳಾಗಿ ಆಗಮಿಸಿದ್ದರು. ಆಯುರ್ವೇದ ಕಾಲೇಜಿನ ಡಾ. ಮೃತ್ಯುಂಜಯ ಎನ್. ಹಿರೇಮಠ್ ಅಧ್ಯಕ್ಷತೆ ವಹಿಸಿದ್ದರು. ಡಾ. ಎಲ್.ಎಂ. ಜ್ಞಾನೇಶ್ವರ್, ಆಯುರ್ವೇದ ಆಸ್ಪತ್ರೆಯ ಛೇರ್ಮನ್ ಡಾ.ಎನ್.ಆರ್ ಶಂಕರನಾರಾಯಣ ಉಪಸ್ಥಿತರಿದ್ದರು. ಡಾ. ಹುಸೇನ್, ಡಾ. ದೀಪ್ತಿ, ಡಾ. ಅಕ್ಷತಾ, ಡಾ. ಅನಿತ ಮತ್ತಿತರರು ಉಪಸ್ಥಿತರಿದ್ದರು.

## ಪುಟ್ಟರಾಜ ಗುರುಕುಲದಿಂದ ಸಂಗೀತ



ದಾವಣಗೆರೆ, ಫೆ.3- ನಗರದ ಪುಟ್ಟರಾಜ ಗಾನ ಗುರುಕುಲ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಜಂಟಿ ಆಶ್ರಯದಲ್ಲಿ ಸುಗಮ ಸಂಗೀತ, ರಂಗಗೀತೆಗಳ ಸಂಗೀತ ಸಂಭ್ರಮ ಸಮಾರಂಭವು ನಗರದ ರೋಟರಿ ಬಾಲಭವನದಲ್ಲಿ ಕಳೆದ ವಾರ ನಡೆಯಿತು.

ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಜಿಲ್ಲಾಧ್ಯಕ್ಷ ಸಾಲಿಗ್ರಾಮ ಗಣೇಶ್ ಶೆಣೈ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಖಿನ್ನತೆಯ ಕಲುಷಿತ ಮನಸ್ಸುಗಳನ್ನು ಪುಳಕಿತಗೊಳಿಸುವ ಶಕ್ತಿ ಸಂಗೀತಕ್ಕೆ ಇದೆ ಎಂದು ಹೇಳಿದರು. ಪುಟ್ಟರಾಜ ಗಾನ ಗುರುಕುಲದ ಅಧ್ಯಕ್ಷ ಬಸವಲಿಂಗಯ್ಯ ವಿ.ಹಿರೇಮಠ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಸಂಗೀತ ಗುರುಗಳಾದ ರೇವಣಸಿದ್ದಪ್ಪ ಉಪಸ್ಥಿತರಿದ್ದರು.

ಸಂಗೀತಾ ಬಿ. ಹಿರೇಮಠ ಪ್ರಾರ್ಥಿಸಿದರು. ಗುರುಕುಲದ ಕಾರ್ಯದರ್ಶಿ ಲತಾ ವಿ. ಹಿರೇಮಠ ಸ್ವಾಗತಿಸಿ, ವಂದಿಸಿದರು. ಸುಗಮ ಸಂಗೀತ ಕಲಾವಿದರಾದ ಶ್ರೀಮತಿ ರೇಖಾ ಓಂಕಾರಪ್ಪ ಮತ್ತು ವೃತ್ತಿ ರಂಗಭೂಮಿ ಕಲಾವಿದೆ ಶ್ರೀಮತಿ ರೇಣುಕಾ ಮತ್ತು ತಂಡದವರಿಂದ ರಂಗಗೀತೆ, ಸಂಗೀತ ಕಾರ್ಯಕ್ರಮ ನಡೆಯಿತು. ಎಸ್. ಶಿವಕುಮಾರ್ ನಿರೂಪಿಸಿದರು.

## ಅತ್ತಿಗೆರೆಯಲ್ಲಿ ಪಠ್ಯಪುಸ್ತಕ ವಿತರಣೆ



ದಾವಣಗೆರೆ, ಫೆ.3- ಅತ್ತಿಗೆರೆಯ ಶ್ರೀಮತಿ ಚನ್ನಪ್ಪ ಶಿವಲಿಂಗಪ್ಪ ಗುರುಬಸಪ್ಪ ಪದವಿ ಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕ ಮತ್ತು ಸಮವಸ್ತ್ರ ವಿತರಿಸಲಾಯಿತು. ಉದ್ಘಾಟಕರಾಗಿ ಕಾಲೇಜಿನ ಉಪಾಧ್ಯಕ್ಷ ಬಸವನಗೌಡ್ರು, ಕಾರ್ಯದರ್ಶಿ ಕೆ.ಆರ್. ಸಿದ್ದಪ್ಪ, ಅಧ್ಯಕ್ಷ ಚನ್ನಪ್ಪ, ಪ್ರಾಚಾರ್ಯ ಹೆಚ್. ಚಂದ್ರಪ್ಪ ಉಪಸ್ಥಿತರಿದ್ದರು.

**ದಿನದ ಚುಟುಕು**

ನೀರೊಳಗಣ ಬೆಂಕಿಯ ರೂಪವು
ಬೆಳಗಿತು ಮನೆಮನೆಯಲು ದೀಪವು
ಮಿತಿ ಮೀರದೆ ಬೆಳಗಲಿ ಹೊಂಬೆಳಕು
ಬೆಸೆದಿದೆ ಬಾಳಲಿ ಬೆಸುಗೆಯ ತಳಕು.

- ವೀಣಾ ಕೃಷ್ಣಮೂರ್ತಿ

## 7ರಂದು ಹಾವೇರಿ ಜಿಲ್ಲೆಯಲ್ಲಿ ಕವಿಗೋಷ್ಠಿ

ಹಾವೇರಿ, ಫೆ.3- ಅಖಿಲ ಭಾರತೀಯ ಸಾಹಿತ್ಯ ಪರಿಷದ್ ನಿಧಿ ಅಭಿಯಾನಕ್ಕೆ ಪೂರ್ವಕವಾಗಿ ರಾಜ್ಯದಲ್ಲಿ ಸ್ಪರ್ಧಾತ್ಮಕ ಕವಿಗೋಷ್ಠಿಯನ್ನು ಸಂಘಟಿಸಿದ್ದು, ಮೂರು ಹಂತಗಳಲ್ಲಿ ಕವಿಗೋಷ್ಠಿಗಳು ನಡೆಯಲಿವೆ.

ಹಾವೇರಿ ಜಿಲ್ಲೆಯಲ್ಲಿ ಇದೇ ದಿನಾಂಕ 7 ರ ಭಾನುವಾರ ಕವಿಗೋಷ್ಠಿ ಹಮ್ಮಿಕೊಂಡಿದ್ದು, ಅಯೋಧ್ಯೆಯಲ್ಲಿ ರಾಮಮಂದಿರ, ಹೃದಯದಲ್ಲಿ ರಾಮಚಂದಿರ ವಿಷಯವಾಗಿ ಕವನಗಳನ್ನು ರಚಿಸಬೇಕು. ಕವನ ಸಂಕಲನ ಕೂಡಾ ಪ್ರಕಟಗೊಳ್ಳಲಿದೆ.

ಕವನಗಳನ್ನು ಒಂದು ದಿನ ಮುಂಚಿತವಾಗಿ ವಾಟ್ಸಾಪ್ ಅಥವಾ ಇನ್ಯಾವುದೇ ರೂಪದಲ್ಲಿ ಸಂಘಟಕರಿಗೆ ತಲುಪಿಸಬೇಕು. ಸ್ಪರ್ಧೆಯಲ್ಲಿ ಜಿಲ್ಲೆಯವರು ಮಾತ್ರ ಭಾಗವಹಿಸಬಹುದಾಗಿದೆ ಎಂದು ಜಿಲ್ಲಾ ಸಂಚಾಲಕ ಚಂದ್ರಪ್ಪ ಬಾರಂಗಿ, ವೆಂಕಟೇಶ್ ಈಡಿಗರ ಮತ್ತು ಪ್ರಭಾಕರ ಎನ್. ಶಿಗ್ಲಿ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗೆ ಮತ್ತು ಕವನಗಳನ್ನು ಕಳುಹಿಸಲು: ಮೊಬೈಲ್ : 9008848676, 9986471683 ಕ್ಕೆ ಸಂಪರ್ಕಿಸಬಹುದು.

## ಸಾವಿತ್ರಿಬಾಯಿ ಎನ್‌ಟಿಸಿ ಕೇಂದ್ರದಲ್ಲಿ ಗಣರಾಜ್ಯೋತ್ಸವ

ದಾವಣಗೆರೆ, ಫೆ.3- ನಗರದ ಶ್ರೀಮತಿ ಸಾವಿತ್ರಿಬಾಯಿ ಪುಲೆ ನರ್ಸರಿ ಶಿಕ್ಷಕಿಯರ ತರಬೇತಿ ಕೇಂದ್ರದಲ್ಲಿ (ಎನ್‌ಟಿಸಿ) 72ನೇ ಗಣರಾಜ್ಯೋತ್ಸವವನ್ನು ಹಮ್ಮಿಕೊಂಡಿದ್ದು, ಸಂಸ್ಥೆ ಅಧ್ಯಕ್ಷ ವೃಷಭೇಂದ್ರಸ್ವಾಮಿ ಧ್ವಜಾರೋಹಣ ನೆರವೇರಿಸಿದರು.

ಮುಖ್ಯ ಅತಿಥಿಗಳಾಗಿ ಸಂಸ್ಥೆ ಕಾರ್ಯದರ್ಶಿ ಕೆ. ಮಲ್ಲಪ್ಪ ಆಗಮಿಸಿದ್ದರು. ತರಬೇತಿ ಕೇಂದ್ರದ ಉಪನ್ಯಾಸಕರಾದ ಎಂ.ಎಸ್. ಖಾನಂ ಸಂವಿಧಾನ ರಚನೆಯ ಇತಿಹಾಸ, ಪರಿಚ್ಛೇದಗಳು, ಸಂವಿಧಾನದ ಉದ್ದೇಶ, ಕರ್ತವ್ಯಗಳು, ಹಕ್ಕುಗಳ ಕುರಿತು ಮಾತನಾಡಿದರು. ಶಿಕ್ಷಕಿಯರಾದ ಎಂ. ತೇಜಾ, ಪಾರ್ವತಮ್ಮ, ಜ್ಯೋತಿ ಭಾಷಣ ಮಾಡಿದರು.

ಎಂ. ತೇಜಾ ಪ್ರಥಮ ಸ್ಥಾನ, ಮೋನಿಕಾ, ಜ್ಯೋತಿ, ಪಾರ್ವತಮ್ಮ ದ್ವಿತೀಯ ಸ್ಥಾನ ಹಾಗೂ ಟಿ. ಲಕ್ಷ್ಮಿ ತೃತೀಯ ಸ್ಥಾನ ಗಳಿಸಿದರು. ಆಡಳಿತಾಧಿಕಾರಿ ಎಂ. ಆರ್. ಲಕ್ಷ್ಮಣ, ಮುಖ್ಯಸ್ಥ ಎಂ.ಎಸ್. ಕೃಷ್ಣಪ್ಪ, ಉಪನ್ಯಾಸಕ ಬಾಷಾ ಸಾಬ್, ರೂಪ, ಶ್ರೇಯಾ ಉಪಸ್ಥಿತರಿದ್ದರು.

## ಬಾಪೂಜಿ ಶಾಲೆಯಲ್ಲಿ ಎಂ.ಜಿ. ಈಶ್ವರಪ್ಪಗೆ ಸನ್ಮಾನ

ದಾವಣಗೆರೆ, ಫೆ.3- ನಗರದ ಬೀಇಎ ಹಿರಿಯ ಪ್ರಾಥಮಿಕ (ಸಿಬಿಎಸ್‌ಇ) ಶಾಲೆಯಲ್ಲಿ ಬಾಪೂಜಿ ವಿದ್ಯಾಸಂಸ್ಥೆ ಶೈಕ್ಷಣಿಕ ನಿರ್ದೇಶಕ ಡಾ. ಎಂ.ಜಿ. ಈಶ್ವರಪ್ಪನವರಿಗೆ ಅಭಿನಂದನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಶಾಲಾ ಆಡಳಿತಾಧಿಕಾರಿ ಪ್ರೊ. ವೈ. ವೃಷಭೇಂದ್ರಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿ, ಈಶ್ವರಪ್ಪನವರಿಗೆ ದೊರೆತ ಪ್ರಶಸ್ತಿ ಬಾಪೂಜಿ ವಿದ್ಯಾಸಂಸ್ಥೆಗೆ ಸಂದ ಗೌರವವಾಗಿದೆ ಎಂದರು. ಸನ್ಮಾನ ಸ್ವೀಕರಿಸಿ ಮಾತನಾಡಿದ ಈಶ್ವರಪ್ಪ ನವರು ದಾವಣಗೆರೆ ಶೈಕ್ಷಣಿಕ ನಗರಿ ಎಂದು ಪ್ರಸಿದ್ಧಿ ಪಡೆಯಲು ಕಾರಣ ಬಾಪೂಜಿ ವಿದ್ಯಾಸಂಸ್ಥೆಯಾಗಿದೆ. ಬದಲಾದ ಪಾಠ ಬೋಧನಾ ವಿಧಾನ ಹಾಗೂ ಸಂಪರ್ಕ ಮಾಧ್ಯಮಗಳ ಬೆಳವಣಿಗೆಯಿಂದ ಜಗತ್ತೇ ಕಿರಿದಾಗಿದ್ದು, ಶಿಕ್ಷಕನಿಗೆ ಜ್ಞಾನಧಾರೆ ಎರೆಯುವುದು ಸವಾಲಾಗಿದೆ ಎಂದು ಅಭಿಪ್ರಾಯ ಪಟ್ಟರು.

ಚಿತ್ರಕಲಾ ಶಿಕ್ಷಕ ಡಿ.ವಿ. ಬಡಿಗೇರ್ ಅವರು ಈಶ್ವರಪ್ಪನವರ ಭಾವಚಿತ್ರವನ್ನು ಪೆನ್ಸಿಲ್ ಸ್ಕೆಚ್ ಮಾಡಿ ನೆನಪಿನ ಕಾಣಿಕೆಯಾಗಿ ನೀಡಿದರು. ಶಿಕ್ಷಕಿಯರಾದ ಡಾ. ಗೀತಾ ನಿರೂಪಿಸಿದರು. ಜೆ.ಎಂ. ಅವಿನಾ ವಂದಿಸಿದರು.

## ನಗರಕ್ಕೆ ವೀರಶೈವ ಸಭಾದ ಉಮೇಶ್ ಪಾಟೀಲ್ ಭೇಟಿ



ದಾವಣಗೆರೆ,ಫೆ.3- ಅಖಿಲ ಭಾರತ ವೀರಶೈವ ಮಹಾಸಭಾ ವಾಣಿಜ್ಯ ಮತ್ತು ಕೈಗಾರಿಕಾ ಘಟಕದ ರಾಷ್ಟ್ರೀಯ ಅಧ್ಯಕ್ಷ ಉಮೇಶ್ ಹೆಚ್. ಪಾಟೀಲ್ ಅವರು ನಿನ್ನೆ ನಗರಕ್ಕೆ ಭೇಟಿ ನೀಡಿದ್ದರು. ಬಾಪೂಜಿ ಅತಿಥಿ ಗೃಹದಲ್ಲಿ ನಡೆದ ಸಭೆಯಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಘಟಕದ ಕೇಂದ್ರ ಸಮಿತಿಗೆ ಬಸವನಾಳ ಇಂಡಸ್ಟ್ರೀಸ್ ಮಾಲೀಕ ಶಂಭುಲಿಂಗಪ್ಪ ಬಸವನಾಳ ಅವರನ್ನು ಕಾರ್ಯನಿರ್ವಾಹಕ ಸದಸ್ಯರನ್ನಾಗಿ ನೇಮಕ ಮಾಡಿದರು.

ಸಭೆಯಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರು ಮತ್ತು ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಸದಸ್ಯ ಮಹಾಂತೇಶ್ ಪಾಟೀಲ್, ಉಪಾಧ್ಯಕ್ಷ ಗೋಪನಗೌಡ ಪಾಟೀಲ್, ದಾವಣಗೆರೆ ಜಿಲ್ಲಾ ಯುವ ಘಟಕದ ಉಪಾಧ್ಯಕ್ಷರು, ಉಪಾಧ್ಯಕ್ಷರೂ ಆದ ವಕೀಲ ಕೊಂಡಜ್ಜಿ ಬಣಕಾರ್ ಶಿವಕುಮಾರ್, ಸ್ವದೇಶಿ ಸೋಲಾರ್ ಮಾಲೀಕ ಸಚಿನ್, ಜಯ ಪ್ರಕಾಶ್ ಕೊಂಡಜ್ಜಿ ಮತ್ತಿತರರು ಉಪಸ್ಥಿತರಿದ್ದರು.

## ಕಸ್ತೂರಿ ಬಾ ಸಮಾಜದಿಂದ ಸಮವಸ್ತ್ರ ವಿತರಣೆ



ದಾವಣಗೆರೆ, ಫೆ. 3- ನಗರದ ಕಸ್ತೂರಿ ಬಾ ಸಮಾಜದಿಂದ ಮಾರುತಿ ಪ್ರೌಢಶಾಲಾ ಮಕ್ಕಳಿಗೆ ಈಚೆಗೆ ಸಮವಸ್ತ್ರ ವಿತರಿಸಲಾಯಿತು. ಈ ಸಂದರ್ಭದಲ್ಲಿ ಸಮಾಜದ ಅಧ್ಯಕ್ಷರು, ಸದಸ್ಯರು ಉಪಸ್ಥಿತರಿದ್ದರು.

## ಎಸ್.ಎಸ್.ಎಫ್. ಅಧ್ಯಕ್ಷರಾಗಿ ಖಾದರ್ ಬಾಷಾ

ದಾವಣಗೆರೆ, ಫೆ.3- ಕರ್ನಾಟಕ ರಾಜ್ಯ ಸುನ್ನಿ ಸ್ಟೂಡೆಂಟ್ಸ್ ಫೆಡರೇಷನ್ (ಎಸ್‌ಎಸ್‌ಎಫ್) ಅಧ್ಯಕ್ಷರಾಗಿ ಖಾದರ್ ಬಾಷಾ, ಪ್ರಧಾನ ಕಾರ್ಯದರ್ಶಿಯಾಗಿ ಅಬ್ದುಲ್ ಹಮೀದ್ ನೇಮಕಗೊಂಡಿದ್ದಾರೆ.

ಉಪಾಧ್ಯಕ್ಷರಾಗಿ ಇಮ್ರಾನ್ ರಜ್ವಾ, ಕೌಸರ್, ಮಹಮದ್ ಶಮ್ಸ್ ತಬರೇಜ್, ಕಾರ್ಯದರ್ಶಿಗಳಾಗಿ ಸುಹೇಲ್, ನಿಜಾಮ್, ಷಾಹೀದ್, ಹಾಷಂಖಾನ್, ಮುಸ್ತಫಾ ಸಖಾಫಿ, ಉಸ್ಮಾನ್, ಕೋಶಾಧಿಕಾರಿ ಷರೀಫ್ ಸಖಾಫಿ, ಕಾರ್ಯಕಾರಿ ಸಮಿತಿ ಸದಸ್ಯರಾಗಿ ಕೆ.ಕೆ. ಅಶ್ರಫ್ ಸಖಾಫಿ, ಅಬೂಬಕರ್, ಜೆ. ಇಕ್ಬಾಲ್, ಯೂನಸ್, ಮಹಮದ್ ಶಾಖೀಬ್, ಮಹಮದ್ ಅಸ್ಲಾಂ, ನಯಾಜ್, ಸಿದ್ಧಿಕ್, ಸಾದತ್, ಫೈರೋಜ್ ಅಲಿ ಇವರನ್ನು 2 ವರ್ಷಗಳ ಅವಧಿಗೆ ಆಯ್ಕೆ ಮಾಡಲಾಗಿದೆ ಎಂದು ಪ್ರಧಾನ ಕಾರ್ಯದರ್ಶಿ ಅಬ್ದುಲ್ ಹಮೀದ್ ತಿಳಿಸಿದ್ದಾರೆ.


## ತಿಪ್ಪೇರುದ್ರಪ್ಪ ತಾಲ್ಲೂಕು ಗಣಿತ ಶಿಕ್ಷಕರ ಸಂಘದ ಅಧ್ಯಕ್ಷ



**ಹರಪನಹಳ್ಳಿ**

ಹರಪನಹಳ್ಳಿ, ಫೆ.3- ತಾಲ್ಲೂಕಿನ ಗಣಿತ ಶಿಕ್ಷಕರ ಸಂಘ ಅಸ್ತಿತ್ವಕ್ಕೆ ಬಂದಿದೆ. ಅಧ್ಯಕ್ಷರಾಗಿ ತಿಪ್ಪೇರುದ್ರಪ್ಪ, ಉಪಾಧ್ಯಕ್ಷರಾಗಿ ಲತಾ ರಾಥೋಡ್, ಗೌರವ ಅಧ್ಯಕ್ಷರಾಗಿ ವಾಮದೇವಪ್ಪ, ಕಾರ್ಯದರ್ಶಿಯಾಗಿ ವೀರೇಂದ್ರ ತೋಟಗಾರ್, ಸಹಕಾರ್ಯದರ್ಶಿಯಾಗಿ ಎಂ.ಎನ್ ದಯಾನಂದ್, ಖಜಾಂಚಿಯಾಗಿ ನೇವಾರ ಲಿಂಗರಾಜ್, ವಲಯವಾರು ಸಂಘಟಕರಾಗಿ ಚಿಗಟೇರಿ ವಿಶ್ವನಾಥ್, ತೆಲಗಿ ಗೌಡ್ರು ವಿಜಯ, ಪಟ್ಟಣದ ಸುಮಿತ್ರ ನುಲಿ, ಅರಸೀಕರೆ ಗುರುರಾಜ್, ಗೌರವ ಸಲಹೆಗಾರರಾಗಿ ಕೆ.ದಯಾನಂದ್, ಗಣೇಶ್, ಮಾಧ್ಯಮ ಪ್ರತಿನಿಧಿಗಳಾಗಿ ಎನ್.ಜಿ. ಮನೋಹರ್, ಲತಾ ರಾಥೋಡ್, ತಾಂತ್ರಿಕ ಸಲಹೆಗಾರರಾಗಿ ಪ್ರದೀಪ್ ಕುಮಾರ್, ಬರವಣಿಗೆ ಗಾರರಾಗಿ ಬಿ.ಎಸ್. ಪವಿತ್ರ, ಕೆ.ಟಿ.ಲತಾ, ಗಣೇಶ್, ಮಂಜುನಾಥ್, ಮಧೂಸೂದನ್ ಅವರುಗಳನ್ನು ಆಯ್ಕೆ ಮಾಡಲಾಗಿದೆ ಎಂದು ನೋಡಲ್ ಅಧಿಕಾರಿ ಮಹೇಶ್ ಪೂಜಾರ್ ತಿಳಿಸಿದ್ದಾರೆ.

## ವರ ಕವಿಗೆ ಗೀತ ನಮನ



ಕನ್ನಡದ 'ವರಕವಿ'
ದ.ರಾ.ಬೇಂದ್ರೆ
ಎಲ್ಲರಿಗೂ ಬಲು ಇಷ್ಟ
ಅವರಂದ್ರೆ
ಜಾನಪದ ಸೊಗಡಿನ
ಕಾವ್ಯಗಳ ಕಣಜ
ಧಾರವಾಡದ ಶ್ರೇಷ್ಠ ಕವಿ
ನಮ್ಮ ಬೇಂದ್ರೆ ಅಜ್ಜ.

ಪಡೆದರು ಅತ್ಯುನ್ನತ 'ಜ್ಞಾನಪೀಠ ಪ್ರಶಸ್ತಿ'
ಕನ್ನಡಕೆ ಅದುವೇ ಬಹುದೊಡ್ಡ ಆಸ್ತಿ
ನಾನು ನೀನು ಆನು ತಾನು ನಾಕೆ 'ನಾಕು ತಂತಿ'
ತಂದೆ ತಾಯಿ ಮಗುವಿನ ಬಾಂಧವ್ಯದ ಸಂತತಿ.

ಗಂಗೆಯನು ಧರೆಗಿಳಿಸಿದ 'ಗಂಗಾವತರಣ'
ಹಾಡುವವರ ಬಾಯಿಗದುವೆ ಸಿಹಿ ಹೂರಣ
ಯುಗಯುಗಾದಿ ಕಳೆದರೂ ಮರಳಿ ಬರುವ
ಯುಗಾದಿಯಲಿ
ಬಾಗಿಲಿಗೆ ಕಟ್ಟುವರು ಮಾವು ಬೇವು ತೋರಣ.

ಶಕುನದ ಹಕ್ಕಿಯಿಂದ ಶುಭವ ನುಡಿಸುತ್ತ
ತೋರಿಸಿದರು ಬೇಂದ್ರೆಯವರು 'ನಾದಲೀಲೆ'ಯ
'ಒಲವೆಂಬ ಹೊತ್ತಗೆ'ಯ ಕವನವನು ಬರೆಯುತ್ತ
ಜೀಕಿದರು ಜೀವನದ 'ಉಯ್ಯಾಲೆ'ಯ.

ಯಕ್ಷ ಯಕ್ಷಿಣಿಯರ ವಿರಹ ವೇದನೆಯ
ವರ್ಣನೆಯ ಕಾವ್ಯವೇ 'ಮೇಘದೂತ'ವು
'ವಿಧಿ ತಂದ ವಧು' ಎಂದು ಪತ್ನಿಯನು ಬಣ್ಣಿಸಿದ
ವಿಲಾಸವದುವೇ 'ಸಖೀಗೀತ'ವು.

ಅರವತ್ತರ ಪ್ರಾಯಕ್ಕೆ 'ಅರಳು ಮರಳಿ'ನಾ
ಕಾವ್ಯದಸುಧೆಯನು ಹರಿಸಿದಾ ಸಿರಿ
ಕಾಲದ ಗತಿಯೊಲು ಆಕಾಶದೆತ್ತರಕೆ
ಹಕ್ಕಿಯಾ ಹಾರಿಸಿ ಕೆದರಿದಾ 'ಗರಿ'.

ಕನ್ನಡದ ಹಿರಿಮೆಯನು ಬೆಳಗಿದ ಈ ಕವಿಯು
ಕನ್ನಡ ಮಾತೆಯ ಪ್ರೀತಿಯ ಸುತ
ಕರುನಾಡ ನೆಲದ 'ನಂದಾದೀಪ'ವು
'ಕವಿಪುಂಗವ ಅಂಬಿಕಾತನಯದತ್ತ'.

- ಜಿ.ಎಸ್.ಗಾಯತ್ರಿ, ಶಿಕ್ಷಕಿ
ಬಾಪೂಜಿ ಶಾಲೆ, ಹರಿಹರ.

## ನೂರಿಪ್ಪತ್ತೈದನೆ ಜನ್ಮದಿನದ ಪ್ರಯುಕ್ತ ಬೇಂದ್ರೆಯವರಿಗೆ ನಮನ

ನೂರಿಪ್ಪತ್ತೈದನೇ ಜನ್ಮದಿನವಿದು
ಪರಿಪೂರ್ಣ ಕವಿಯ ನೆನೆವದಿನವಿದು
ಮರೆತ ಕವನಗಳ ಮತ್ತೆ ಗುನುಗೋದಿನವಿದು
ಮೆರೆವ ಕನ್ನಡವನ್ನು ಕೇಳೊ ದಿನವಿದು

ಬೇಂದ್ರೆಯವರ ಚರಣಕೆ ಬಾಗಿ ನಮಿಸುವ
ಸುಂದರ ಸಾಹಿತ್ಯವ ಆಸ್ವಾದಿಸುವ
ಅಂದದ ಅನುಭಾವವ ಅನುಭವಿಸುವ
ಚೆಂದದ ಸಾಲುಗಳಲ್ಲಿ ಮಿಂದೇಳುವ

ಧಾರವಾಡ ಭಾಷೆಯ ಸೊಗಡ ತುಂಬುತ
ತಾರೆಯಂತೆ ಮಿನುಗುವ ನಕ್ಷತ್ರವಾಗುತ
ಮರೆಯಲಾಗದ ಸಾಲುಗಳ ನಮಗೆ ನೀಡುತ
ಏರಿ ಎತ್ತರಕೆ ಜ್ಞಾನಪೀಠ ಪಡೆಯುತ

ಪ್ರಕೃತಿ ಆರಾಧನೆಯಲಿ ಕಾಲಕಳೆಯುತ
ಚಕಿತರಾಗಿ ಸ್ಫೂರ್ತಿಲಿ ಪದವ ರಚಿಸುತ
ನಾಕುತಂತಿ ನಾದಲೀಲ ಗರಿ ಹೊಮ್ಮುತ
ಸುಕೃತದಿ ಅಂಬಿಕಾತನಯದತ್ತ ಎನಿಸುತ

- ಶ್ರೀ ಕೃಷ್ಣಾರ್ಪಣಮಸ್ತು
ರೂಪಶ್ರೀ ಶಶಿಕಾಂತ್


**ಸೈಟುಗಳು ಮಾರಾಟಕ್ಕಿವೆ ಮನೆಗಳು ಬಾಡಿಗೆಗೆ ಇವೆ**
ಡಾಲರ್ಸ್ ಕಾಲೋನಿಯಲ್ಲಿ 30x50 ಪೂರ್ವ, ಸಪ್ತಗಿರಿ ಹಾಸ್ಟೆಲ್ ಹತ್ತಿರ, ಬಸವೇಶ್ವರ ಬಡಾವಣೆಯಲ್ಲಿ 1ನೇ ಫ್ಲೋರ್ 2 ಬೆಡ್ ರೂಂ. 2ನೇ ಫ್ಲೋರ್ 1 ಬೆಡ್‌ರೂಂ. ಹೊಸಮನೆ ಬಾಡಿಗೆಗೆ ಇದೆ. (ಸಸ್ಯಹಾರಿಗಳಿಗೆ ಮಾತ್ರ)
ಸ್ವಾಮಿ ಏಜೆಂಟ್ (ವಿದ್ಯಾನಗರ)
97421 44715

**ಮನೆ ಮಾರಾಟಕ್ಕಿದೆ**
ಕುವೆಂಪು ಬಡಾವಣೆಯಲ್ಲಿ 40x60 North 3 ಬೆಡ್‌ರೂಂ ಮನೆ. ಇಂಡಿಪೆಂಡೆಂಟ್ ಹೌಸ್
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110
93410 14130

**R.C. ಸ್ಮಾರ್ಟ್ ಕಾರ್ಡ್ ಕಳೆದಿದೆ**
ಎಸ್.ಸಿ. ನಟರಾಜ್ ಎಂಬುವವರ ದ್ವಿಚಕ್ರ ವಾಹನದ (KA-17 EY-7534) R.C. ಸ್ಮಾರ್ಟ್‌ಕಾರ್ಡ್ ಕಳೆದಿದೆ. ಯಾರಿಗಾದರೂ ಸಿಕ್ಕಲ್ಲಿ ಈ ಕೆಳಗಿನ ನಂಬರಿಗೆ ಸಂಪರ್ಕಿಸಿ:
89716 64936

**ಅಂಗಡಿ ಲೀಜ್/ಬಾಡಿಗೆಗೆ**
ಹಾಸಬಾವಿ ಸರ್ಕಲ್ ಹತ್ತಿರ ಅಂಗಡಿ ಲೀಜ್/ಬಾಡಿಗೆಗೆ ಇದೆ ವಿಚಾರಿಸಿ
89041 29928

**ರಾಣೇಬೆನ್ನೂರಿನ**
ಚೋಳ ಮರುಡೇಶ್ವರ ನಗರದಲ್ಲಿ 40x60 East, 40x50 East South Corner
ಐನಳ್ಳಿ ಚನ್ನಬಸಪ್ಪ, ಏಜೆಂಟ್
9916612110, 9341014130

**ಮನೆಯ ರೀ ಪೇಂಟಿಂಗ್**
ಹಳೆಯ ಮನೆಯನ್ನು ಹೊಸದಾಗಿ ಪೇಂಟಿಂಗ್ ಮಾಡಿಸಿಕೊಳ್ಳಿ, ಕಡಿಮೆ ದರದಲ್ಲಿ
72046 33302

**ಬೇಕಾಗಿದ್ದಾರೆ**
ಕರುಣಾ ಜೀವ ಕಲ್ಯಾಣ ಟ್ರಸ್ಟ್ ನಲ್ಲಿ ಕೆಲಸ ಮಾಡಲು ಸಮಾಜ ಸೇವೆಯಲ್ಲಿ ಆಸಕ್ತಿ ಇರುವ ಉತ್ಸಾಹಿ ವಿವಾಹಿತ ಮಹಿಳೆಯರು ಬೇಕಾಗಿದ್ದಾರೆ.
ವಿದ್ಯಾರ್ಹತೆ: ಎಸ್‌ಎಸ್‌ಎಲ್‌ಸಿ/ಪಿಯುಸಿ
ಸಂಪರ್ಕಿಸಿ : 83105 20002

**For Rent Commercial**
Rent for Bank, Audit Office, Financial Office, Medicine Pharma, Agencies, Ayurveda, Homeopathy
Ground Floor, First, 2nd Floor, Total 2200 Sq/ft, Opp. Amrutha Vidyalaya, Davanagere.
94811 62163

**ಸೈಟ್‌ಗಳು ಮಾರಾಟಕ್ಕಿವೆ**
ಸಂಕೋಳ್ ಶಿವಪ್ಪ ಬಡಾವಣೆಯಲ್ಲಿ 30x40 ಉತ್ತರ, ಶಿವ ಪಾರ್ವತಿ ಬಡಾವಣೆಯಲ್ಲಿ 40x50 ದಕ್ಷಿಣ, ಬನಶಂಕರಿ ಬಡಾವಣೆಯಲ್ಲಿ 30x50 ಪೂರ್ವ, 30x50 ಪಶ್ಚಿಮ
ಶಾಮನೂರು ಧನ್ಯಕುಮಾರ್
ಮೊ.97415 62589
ಸ್ವಾಮಿ ಏಜೆಂಟ್ ವಿದ್ಯಾನಗರ
ಮೊ.97421 44715

**ಬೇಕಾಗಿದ್ದಾರೆ**
ದಾವಣಗೆರೆ ಸಮೀಪದ ತೋಟದಲ್ಲಿ ಕೆಲಸ ಮಾಡಲು ಮತ್ತು ಆಕಳು ನೋಡಿಕೊಳ್ಳಲು ಆಳು ಬೇಕಾಗಿದ್ದಾರೆ. ಮನೆ ಬಳಿ ಇದ್ದುಕೊಂಡೇ ಕೆಲಸ ಮಾಡಲು ಹುಡುಗ ಬೇಕಾಗಿದ್ದಾನೆ. ಸಂಪರ್ಕಿಸಿ:
7018588900 9538870257

**ಜಮೀನು ಮಾರಾಟಕ್ಕಿದೆ**
ಪುಣಭಘಟ್ಟ ಗ್ರಾಮ, ಅರಸೀಕೆರೆ ಹೋಬಳಿ, ಸರ್ವೆ ನಂ.335/A 4-08 ಸೆಂಟ್ಸ್, ಸರ್ವೆ ನಂ.335/B 2-43 ಸೆಂಟ್ಸ್, ಸರ್ವೆ ನಂ.335/1 1-62 ಸೆಂಟ್ಸ್, ಒಟ್ಟು 8.13 ಸೆಂಟ್ಸ್, 2 ಪಂಪ್‌ಸೆಟ್ ಹೊಂದಿರುವ ಜಮೀನು ಮಾರಾಟಕ್ಕಿದೆ.
99726 02950

**WANTED**
Recetionist & Clinical Assistant Male/Female, Starting salary b/w 4-5 K Interview will be hold on Thursday & Friday b/w 12 to 2 PM in
**Zareen Hospital**
near Hasbavi circle, Chamarajpet.
80502 21315

**ಬೇಕಾಗಿದ್ದಾರೆ**
ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ಷಾ ಆಪ್ಟಿಕಲ್ಸ್
4ನೇ ಮೇನ್, ಪಿ.ಜೆ. ಎಕ್ಸ್‌ಟೆನ್ಷನ್, ದೃಷ್ಟಿ ಕಣ್ಣಿನ ಆಸ್ಪತ್ರೆ ಎದುರುಗಡೆ, ದಾವಣಗೆರೆ.

**ಬೇಕಾಗಿದ್ದಾರೆ**
ಬೇತೂರು ಮತ್ತು ನೆಲ್ಲೂರಿನಲ್ಲಿ ಹಾಗೂ ದಾವಣಗೆರೆ ಸುತ್ತಮುತ್ತಲು ಸೆಕ್ಯೂರಿಟಿ ಹಾಗೂ ರಿಸೆಪ್ಷನಿಸ್ಟ್, ರೂಮ್ ಬಾಯ್ಸ್ ಬೇಕಾಗಿದ್ದಾರೆ. ಕೆಲವು ಕಡೆ ಊಟದ ವ್ಯವಸ್ಥೆ ಇರುತ್ತದೆ. ಕೂಡಲೇ ಸಂಪರ್ಕಿಸಿರಿ :
9880648207, 7411307071

**ಬೇಕಾಗಿದ್ದಾರೆ**
Ape ಆಟೋ, TATA Ace ಆಟೋಗೆ ಡ್ರೈವರ್, ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ.
ಧನಶ್ರೀ ಮಾರ್ಕೆಟಿಂಗ್
ಎಪಿಎಂಸಿ 'ಇ' ಬ್ಲಾಕ್, ದಾವಣಗೆರೆ.
94838 94420
94484 56993

**ಬೇಕಾಗಿದ್ದಾರೆ**
ಹೋಲ್‌ಸೇಲ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ಅನುಭವವಿರುವವರಿಗೆ ಆದ್ಯತೆ.
VENKATESHWARA PHARMACEUTICALS.
2nd main, K.T.J nagar, DAVANGERE-577002.
8660775329

**ಬೇಕಾಗಿದ್ದಾರೆ**
1) ಡೆಲಿವರಿ ಬಾಯ್ಸ್, ಸೈಕಲ್ ಹೊಂದಿರಬೇಕು.
2) ಸೇಲ್ಸ್ ಬಾಯ್ಸ್
ಶ್ರೀ ಕುರುವತ್ತಿ ಬಸವೇಶ್ವರ ಫಾರ್ಮ
1ನೇ ಫ್ಲೋರ್, ಕಾಲೇಜು ರಸ್ತೆ, ಡಾ|| ಆಲೂರು ಮಂಜುನಾಥ ಹಾಸ್ಪಿಟಲ್ ಪಕ್ಕ, ಪಿ.ಜೆ. ಬಡಾವಣೆ, ದಾವಣಗೆರೆ
9513222192, 7760157961

**ಸೈಟುಗಳು ಮಾರಾಟಕ್ಕಿದೆ**
ವಾಜಪೇಯಿ ಲೇ ಔಟ್‌ನಲ್ಲಿ, ಡಾಲರ್ಸ್ ಕಾಲೋನಿಯಲ್ಲಿ 30x50 West, 30x40, 30x40 West ಅಕ್ಕ ಪಕ್ಕ, 30x50 East, 30x63 South West Corner, 30x32 Corner
ಐನಳ್ಳಿ ಚನ್ನಬಸಪ್ಪ, ಏಜೆಂಟ್
9916612110, 9341014130

**ಬೇಕಾಗಿದ್ದಾರೆ**
ನಮ್ಮ ಅಂಗಡಿಯಲ್ಲಿ ಸಾಮಾನು ಕೊಡಲು ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ :
ಆನಂದ ಹಾರ್ಡ್‌ವೇರ್ ಅಂಡ್ ಪೇಂಟ್ಸ್
ಮಂಡಿಪೇಟೆ, ದಾವಣಗೆರೆ.

**ಬೇಕಾಗಿದ್ದಾರೆ**
ಕೆಲಸ ಬೇಕಾ.com
ಮರ್ಚೆಂಟ್ ನೇವಿಯಲ್ಲಿ ಕೆಲಸ ಮಾಡಲು ಆಸಕ್ತ ಯುವಕ-ಯುವತಿಯರು ಬೇಕಾಗಿದ್ದಾರೆ.
ವಯಸ್ಸು : 18 ರಿಂದ 25 ವರ್ಷ
ಸಂಬಳ : ತಿಂಗಳಿಗೆ 1 ಲಕ್ಷದವರೆಗೆ
96869 58555, 77609 55550

**ಬಾಡಿಗೆಗೆ ವಿಚಾರಿಸಿ**
ಹಾಸ್ಟೆಲ್‌ಗೆ ಸೌಲಭ್ಯವಿರುವ ಬಿಲ್ಡಿಂಗ್ ಸರಸ್ವತಿ ನಗರ ಕೆನರಾ ಬ್ಯಾಂಕ್ ಹತ್ತಿರ ಇದೆ. ವಿಚಾರಿಸಿ
ಮೊ: 81055 42689

**ಡೇಜಾ ಪಾರ್ಟಿ ಹಾಲ್**
ದಾವಣಗೆರೆ ಆಂಜನೇಯ ಬಡಾವಣೆ 14 ನೇ ಕ್ರಾಸ್‌ನಲ್ಲಿ ಮದುವೆ, ನಾಮಕರಣ, ಜನ್ಮದಿನ ಮುಂತಾದ ಶುಭ ಸಮಾರಂಭಗಳಿಗೆ ದಿನದ ಬಾಡಿಗೆಗೆ ಸುಸಜ್ಜಿತ ಪಾರ್ಟಿ ಹಾಲ್ ಇದೆ.
80731 05526
92412 04318

**ಬೇಕಾಗಿದ್ದಾರೆ**
ಬಾರ್ ಮತ್ತು ರೆಸ್ಟೋರೆಂಟ್ ಕೆಲಸಕ್ಕೆ ಬೇಕಾಗಿದ್ದಾರೆ.
99455 97132
80889 56656

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಹಾಲ್/ಮಳಿಗೆ ಬಾಡಿಗೆಗಿದೆ**
800 sqft ಹಾಲ್, ಮೊದಲನೇ ಮಹಡಿ ಮಾಮಾಸ್ ಜಾಯಿಂಟ್ ರೋಡ್, ಎಂ.ಸಿ.ಸಿ. 'ಬಿ' ಬ್ಲಾಕ್,
94489 21346
82177 72482

**Hombal Mart**
Tele Caller - 8 Female
Picking & Packing - 4 Male
Delivery Boys - 4 Male
Salary 6,000/- to 8,000/-
Call : 8073718937

**ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ಧರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ. ವಯೋವೃದ್ಧರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ. (ಊಟ, ವಸತಿ ವ್ಯವಸ್ಥೆ ಇರುತ್ತದೆ.)
ಫೋ. : 96062 82814

**ಮನೆಗಳು ಬಾಡಿಗೆಗೆ ಇರುತ್ತವೆ**
ದಾವಣಗೆರೆ ಎಂಸಿಸಿ ಬಿ ಬ್ಲಾಕ್‌ನ ಕುವೆಂಪು ನಗರದಲ್ಲಿರುವ ಮನೆಗಳು (Apartment, Ist Floor & IInd Floorನಲ್ಲಿ) ಪೂರ್ವ ಮತ್ತು ಉತ್ತರ ದಿಕ್ಕುಗಳಿಗಿರುವ, ನೀರಿನ ಸೌಲಭ್ಯ ಹಾಗೂ ವಾಹನ ನಿಲುಗಡೆಗೆ ವ್ಯವಸ್ಥೆ ಇರುವ ಮನೆಗಳು ಬಾಡಿಗೆಗೆ ಇರುತ್ತವೆ.
90666 37770

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯಿತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637

**ಮನೆ ಬಾಡಿಗೆಗೆ ಇದೆ**
ಟಿ.ವಿ. ಸ್ಟೇಷನ್‌ಗೆ, ಸರ್.ಎಂ.ವಿ. ಕಾಲೇಜ್, ಶಶಿ ಸೋಪ್ ಫ್ಯಾಕ್ಟರಿಗೆ, ಹೈಟೆಕ್ ಆಸ್ಪತ್ರೆಗೆ ತುಂಬಾ ಹತ್ತಿರವಿರುವ ವಿಶಾಲವಾದ ಹಾಲ್, 2 ಬೆಡ್‌ರೂಂ, 2 ಬಾತ್‌ರೂಂ, ಸೋಲಾರ್, ಕಾರ್ ಪಾರ್ಕಿಂಗ್, ಸದಾ ನೀರಿನ ವ್ಯವಸ್ಥೆ, ವಾಸ್ತು ಪ್ರಕಾರವಿರುವ ಮನೆ ಕ್ಲೀನ್ ಆಗಿ ಮನೆ ಇಟ್ಟುಕೊಳ್ಳುವವರಿಗೆ, ಹಿಂದೂ ಜನಕ್ಕೆ, ಆರೋಗ್ಯವಂತರಿಗೆ ಮಾತ್ರ ವಿಚಾರಿಸಿ.
99865 38099, 99806 11110

**BASIC + NUDI + TALLY**
= Fee: 2200/- only
Free Spoken English Class
Door to Door also
Mob: 97426 10385

**HIRING FOR A PRESTIGIOUS INSTITUTION**
10 - SECURITY GUARDS
Rs. 10,000/-
Qualification : Min. 10th
02 - SECURITY SUPERVISORS
Rs. 15,000/-
5 Yrs. Experience, Min. 12th Std.
G M I T CAMPUS DAVANGERE
91411 58731
99722 11111

**ಬೇಕಾಗಿದ್ದಾರೆ**
ದಾವಣಗೆರೆ ನಗರ ಹಾಗೂ ಸುತ್ತಮುತ್ತಲಿನ ಹಳ್ಳಿಗಳಿಗೆ ಪಾಂಪ್ಲೆಟ್ಸ್ ಹಂಚಲು ಯುವಕರು ಬೇಕಾಗಿದ್ದಾರೆ. ಸಮಯ : 7.00 ರಿಂದ 12.00 ರವರೆಗೆ. ಬೈಕ್ ಇದ್ದವರಿಗೆ ಆದ್ಯತೆ.
ಸಂಪರ್ಕಿಸಿ :
ಗಂಗೋತ್ರಿ ವೆಲ್‌ನೆಸ್ ಸೆಂಟರ್
ಜಯದೇವ ಸರ್ಕಲ್ ಹತ್ತಿರ, ದಾವಣಗೆರೆ.
86602 35013

**2BHK ಮನೆ ಬಾಡಿಗೆಗೆ ಇದೆ**
ಎನ್.ಆರ್. ರೋಡ್, ಅಕ್ಕಮಹಾದೇವಿ ಸ್ಕೂಲ್ ಹತ್ತಿರ, ದಾವಣಗೆರೆ.
(ಸಸ್ಯಹಾರಿಗಳಿಗೆ ಮಾತ್ರ)
94493 32648

**KVR Constructions WANTED/REQUIRED**
Qualifiction : MBA, BBM, M. Com, B.Com Experience : 3 to 4 years Experience in Marketing field, Male only. Contact
81232 70058 / 08192-263341
kvrconstructions007@gmail.com

**ಸೈಟು ಮಾರಾಟಕ್ಕಿದೆ**
25'x40' ಅಳತೆಯ ಜಯನಗರ ಚರ್ಚ್ ಹಿಂಭಾಗ, ದಾವಣಗೆರೆಯಲ್ಲಿ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ:
97416 66288

**ಬೇಕಾಗಿದ್ದಾರೆ**
ಕಾವೇರಿ ಫಾರ್ಮದಲ್ಲಿ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ. SSLC or PUC,
ವಿಳಾಸ :
ಕಾವೇರಿ ಫಾರ್ಮ, ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ-04

**ಹಾಲ್ ಬಾಡಿಗೆಗಿದೆ**
800 sqft ಹಾಲ್, ಮೊದಲನೇ ಮಹಡಿ ಮಾಮಾಸ್ ಜಾಯಿಂಟ್ ರೋಡ್, ಎಂ.ಸಿ.ಸಿ. 'ಬಿ' ಬ್ಲಾಕ್,
94489 21346
82177 72482

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**Sanjeevini Institute of Nursing & Paramedical Davanagere**
GNM, DMLT, DOTT, DHI, BSCMLT, M.Sc MLT
08192-220611
97430 73102

**UPS BATTERY & RO PURIFIERS**
Sales & Service
PEACE ENTERPRISES
83100 42490, 99013 18277
98801 56667

**WANTED**
Boys Required for Sales Executive Post Leading Electronics Small home appliances Attractive Salary & Incentives. Please attend with Resume
Contact : 82963 92991
Balaji Enterprises, Davangere.

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ನೇರ ಪರೀಕ್ಷೆಗಳು**
DIRECT EXAMS
ಮನೆಯಲ್ಲೇ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC SCIENCE, COMMERCE, ARTS
ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ.
ಮಾನಸ ಎಜುಕೇಷನ್ ಟ್ರಸ್ಟ್ (ರಿ.)
ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

**JOBS**
MCS ACADEMY
Training & Placement Cell
98444 92888

**ಡಾ|| ಸೋಮಶೇಖರ್. ಎಸ್.ಎ.**
Rheumatologist ಇವರು ದಿ. 04.02.2021ರ ಗುರುವಾರ ಮತ್ತು 05.02.2021ರ ಶುಕ್ರವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

## ಅಂಗನವಾಡಿ ಶಿಕ್ಷಕಿ ಮೇಲೆ ಹಲ್ಲೆ

**ಆರೋಪಿಗಳ ಬಂಧನಕ್ಕೆ ಒತ್ತಾಯ**

ರಾಣೇಬೆನ್ನೂರು, ಫೆ.3- ಪೋಲಿಯೋ ಡ್ರಾಪ್ಸ್ ಹಾಕುವ ಅಂಗನವಾಡಿ ಶಿಕ್ಷಕಿಯರ ಮೇಲೆ ಮುಷ್ಠೂರಿನ ಕೆಲ ಕಿಡಿಗೇಡಿಗಳು ಹಲ್ಲೆ ಮಾಡಿದ್ದು ಅವರನ್ನು ತಕ್ಷಣ ಬಂಧಿಸಿ ಕ್ರಮಕೈಗೊಳ್ಳಬೇಕು ಎಂದು ರೈತ ಸಂಘದ ಸಂಘಟನಾ ಕಾರ್ಯದರ್ಶಿ ರವೀಂದ್ರಗೌಡ ಪಾಟೀಲ ಒತ್ತಾಯಿಸಿದ್ದಾರೆ.

ಅಂಗನವಾಡಿ ಶಿಕ್ಷಕಿಯರು ಕೊರೊನಾ ಸಂದರ್ಭದಲ್ಲಿ ವಾರಿಯರ್ಸ್ ಆಗಿ ತಮ್ಮ ಜೀವದ ಹಂಗು ತೊರೆದು ಕಾರ್ಯ ನಿರ್ವಹಿಸಿದರು. ಇಂತಹವರಿಗೆ ಸರಿಯಾಗಿ ಸಂಬಳ ಸಿಗುತ್ತಿಲ್ಲ. ಎಲ್ಲ ಸರ್ಕಾರಿ ಸೇವೆಗಳಿಗೆ ಬಳಸಿಕೊಳ್ಳುವ ಇವರಿಗೆ ಸರ್ಕಾರ ರಕ್ಷಣೆ ನೀಡಬೇಕು.ಆರೋಪಿತರನ್ನು ಶೀಘ್ರವೇ ಬಂಧಿಸದಿದ್ದರೆ ರಾಜ್ಯಾದ್ಯಂತ ಹೋರಾಟ ಮಾಡಲಾಗುವುದು ಎಂದು ಪಾಟೀಲ ಎಚ್ಚರಿಸಿದ್ದಾರೆ.

## ಜಂಬೋ ಕಿಡ್ಸ್‌ನಲ್ಲಿ ಗಣರಾಜ್ಯೋತ್ಸವ

ದಾವಣಗೆರೆ, ಫೆ. 3- ನಗರದ ಪೋದಾರ್ ಜಂಬೋ ಕಿಡ್ಸ್ ಹಾಗೂ ಇಂಟರ್‌ನ್ಯಾಷನಲ್ ಸ್ಕೂಲ್ ವತಿಯಿಂದ ಗಣರಾಜ್ಯೋತ್ಸವ ಆಚರಿಸಲಾಯಿತು. ಪ್ರಾಂಶುಪಾಲ ರಮೇಶ್ ಚಂದ್ರಪಾಂಡು, ಮುಖ್ಯೋಪಾಧ್ಯಾಯಿನಿ ಮೊನಾಲಿಸ್ ಸಿಂಗ್ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕಿಯರಾದ ಶ್ರೀಮತಿ ಮಂಗಳ ಮಲ್ಲಿಕಾರ್ಜುನ್, ಅನಿಶಿತ, ಕವಿತ, ಕಲ್ಪನ, ರೋಮ, ದೀಪ್ತಿ, ಶೃತಿ, ಪದ್ಮಾವತಿ, ಅನುಷ, ತೌಫೀಕ್, ಸಾವನ್, ಅಶ್ವಿನಿ ಪ್ರಸಾದ್, ಗೌಡ್ರ ಕಲ್ಲೇಶಪ್ಪ ಉಪಸ್ಥಿತರಿದ್ದರು.

# ಜಗತ್ತಿನಲ್ಲಿ ಜ್ಞಾನಕ್ಕೆ ಸಮನಾದ, ಪವಿತ್ರವಾದ ವಸ್ತು ಮತ್ತೊಂದಿಲ್ಲ

## 'ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ' ಎಂಬ ಪ್ರೇರೇಪಣಾ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಪ್ರತಿಪಾದನೆ

ದಾವಣಗೆರೆ, ಫೆ.3- ಜಗತ್ತಿನಲ್ಲಿ ಜ್ಞಾನಕ್ಕೆ ಸಮಾನ ಮತ್ತು ಪವಿತ್ರವಾದ ವಸ್ತು ಇನ್ನೊಂದಿಲ್ಲ. ಶ್ರದ್ಧೆಯುಳ್ಳ ಸತತ ಪರಿಶ್ರಮಿ ಮಾತ್ರ ಜ್ಞಾನವನ್ನು ಪಡೆಯಲು ಸಾಧ್ಯ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಪ್ರತಿಪಾದಿಸಿದರು.




ನಗರದ ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆ, ಗುರುಬಸಮ್ಮ ವಿ. ಚಿಗಟೇರಿ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಹತ್ತನೇ ತರಗತಿ ವಿದ್ಯಾರ್ಥಿಗಳಿಗೆ ಅಖಿಲ ಭಾರತ ವೀರಶೈವ ಮಹಾಸಭಾ ರಾಷ್ಟ್ರೀಯ ಮಹಿಳಾ ಘಟಕದ ಆಶ್ರಯದಲ್ಲಿ ಇಂದು ಹಮ್ಮಿಕೊಂಡಿದ್ದ 'ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ' ಎಂಬ ಪ್ರೇರೇಪಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಮುನ್ನಡೆದಾಗ ಯಶಸ್ಸು ಪಡೆಯಲು ಸಾಧ್ಯ. ನರಕ ಮತ್ತು ಸ್ವರ್ಗ ಎರಡೂ ಹೊರಗಿಲ್ಲ, ಅವೆಲ್ಲಾ ನಮ್ಮ ಮನಸ್ಸಿನಲ್ಲಿವೆ. ನಮ್ಮ ಮನಸ್ಸು ಸ್ವಚ್ಛವಾಗಿಟ್ಟುಕೊಂಡಾಗ ಸ್ವರ್ಗ ತಾನೇ ತಾನಾಗಿ ಸೃಷ್ಟಿಯಾಗುತ್ತದೆ. ಜೀವನದಲ್ಲಿ ಸತತ ಪ್ರಯತ್ನದಿಂದ ಆತ್ಮವಿಶ್ವಾಸ ಹೆಚ್ಚಾಗುತ್ತದೆ. ಹಾಗಾಗಿ ವಿದ್ಯಾರ್ಥಿಗಳು ನಿರಂತರ ಅಧ್ಯಯನಶೀಲರಾಗಬೇಕು. ವಿದ್ಯಾರ್ಥಿಗಳು ಕನಸು ಕಾಣಬೇಕು ಅದರಲ್ಲೂ ದೊಡ್ಡ ಕನಸುಗಳನ್ನು ಕಾಣುತ್ತಾ, ಅವುಗಳನ್ನು ಸಾಕಾರಗೊಳಿಸಲು ಸತತ ಪ್ರಯತ್ನ - ಆತ್ಮ ವಿಶ್ವಾಸದೊಂದಿಗೆ ಮುನ್ನಡೆದಾಗ ಜೀವನದಲ್ಲಿ ಯಶಸ್ಸು ಖಂಡಿತಾ ಸಿಕ್ಕೇ ಸಿಗುತ್ತದೆ ಎಂದು ಉದಾಹರಣೆಗಳೊಂದಿಗೆ ಜಿಲ್ಲಾಧಿಕಾರಿಗಳು ತಿಳಿಸುವುದರ ಮೂಲಕ ವಿದ್ಯಾರ್ಥಿಗಳನ್ನು ಪ್ರೇರೇಪಿಸಿದರು.

ಶ್ರೀಮತಿ ವಿನುತ ರವಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿದ್ದ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಶಾಂತಕುಮಾರಿ, ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷರಾದ ಮಂಜುಳಾ, ಡಿಡಿಪಿಐ ಪರಮೇಶ್ವರಪ್ಪ, ಉತ್ತರ ವಲಯ ಬಿಇಓ ಕೊಟ್ರೇಶ್ ಕೆ, ಸ್ಫೂರ್ತಿ ಭಾಷಣಕಾರರಾದ ಹಾಲೇಶ್ ಶ್ರೀವರ, ವಿಹಂಗಮ ಯೋಗ ಕೇಂದ್ರ ವಾರಣಾಸಿಯ ಸಂತ ಅನುರಾಗ್‌ದೇವ್, ಪಂಚತಂತ್ರ ಗುರುಕುಲಮ್‌ನ ಜಿ.ಬಿ. ಹರಗಿ ಅವರುಗಳು ಕೊರೊನಾ ಕಾರ್ಮೋಡದಲ್ಲಿ ಕಲಿಕೆಯಲ್ಲಿ ನಿರುತ್ಸಾಹಿಗಳಾಗಿದ್ದ ಹತ್ತನೇ ತರಗತಿ ಮಕ್ಕಳಿಗೆ ಆತ್ಮವಿಶ್ವಾಸ ತುಂಬಿ ಕಲಿಕೆಗೆ ಪ್ರೇರೇಪಿಸಿದರು.

ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆಯ ಉಪಾಧ್ಯಕ್ಷ ಬಸವರಾಜ್ ಬೆಳಗಾವಿ, ಕಾರ್ಯದರ್ಶಿ ಮನೋಹರ್ ಚಿಗಟೇರಿ, ಶ್ರೀಮತಿ ಪುಷ್ಪಾ ಗುಂಡಿ ಸಿದ್ದೇಶ್, ಶೃತಿ ಕಬ್ಬೂರು, ಶ್ರೀಮತಿ ಆರ್. ವಾಗ್ದೇವಿ, ಎಂ.ಟಿ. ಮಳಗಿ, ಶ್ರೀಮತಿ ವೀರಮ್ಮ ಮತ್ತಿತರರು ಕಾರ್ಯಕ್ರಮದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆಯ ಮುಖ್ಯ ಶಿಕ್ಷಕ ನಾಗರಾಜ್ ಎಸ್. ಸ್ವಾಗತಿಸಿದರು. ವಿದ್ಯಾರ್ಥಿ ಆಕಾಶ್ ವೈ.ಸಿ ಪ್ರಾರ್ಥಿಸಿದರು. ಶಿಕ್ಷಕಿ ಶಿವಲೀಲ ಕಾರ್ಯಕ್ರಮ ನಿರೂಪಿಸಿದರು. ಗುರುಬಸಮ್ಮ ವಿ. ಚಿಗಟೇರಿ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಹೆಚ್. ನಿಂಗಪ್ಪ ವಂದಿಸಿದರು.

# ಭಕ್ತರ-ಭಗವಂತನ ಮಧ್ಯೆ ಕಾರ್ಯನಿರ್ವಹಿಸಿ, ಇಬ್ಬರನ್ನೂ ತೃಪ್ತಿಪಡಿಸುವುದು ಪುರೋಹಿತರ ಕರ್ತವ್ಯವಾಗಬೇಕಿದೆ



**ಹೊನ್ನಾಳಿ ಕಾರ್ಯಕ್ರಮದಲ್ಲಿ ರಟ್ಟೆಹಳ್ಳಿ ಕಬ್ಬಿಣಕಂತಿ ಮಠದ ಶಿವಲಿಂಗ ಸ್ವಾಮೀಜಿ ವಿಶ್ಲೇಷಣೆ**

ಹೊನ್ನಾಳಿ, ಫೆ.3 - ವೀರಶೈವ ಧರ್ಮಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು ನುರಿತ ವಿದ್ವಾಂಸರಿಂದ ಪುರೋಹಿತರು ಕೇಳುವ ಅನೇಕ ಪ್ರಶ್ನೆಗಳಿಗೆ ವಿಚಾರ ಸಂಕಿರಣದಲ್ಲಿ ಅಭಿಪ್ರಾಯ ವ್ಯಕ್ತಪಡಿಸಲಿದ್ದು, ಉತ್ತರಗಳನ್ನು ಕಂಡು ಕೊಳ್ಳುವ ಪ್ರಯತ್ನ ಮಾಡುವಂತೆ ಹಿರೇಕಲ್ಮಠದ ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮೀಜಿ ಹೇಳಿದರು.

ನಿನ್ನೆ ಇಲ್ಲಿ ಆರಂಭಗೊಂಡಿರುವ ಮೂರು ದಿನಗಳ ಅಖಿಲ ಕರ್ನಾಟಕ ವೀರಶೈವ ಪುರೋಹಿತ ಮಹಾಸಭಾದ ಅಧಿವೇಶನದಲ್ಲಿ ಇಂದು ಏರ್ಪಾಡಾಗಿದ್ದ 2ನೇ ದಿನದ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಸಮಾರಂಭದ ಸಾನಿಧ್ಯ ವಹಿಸಿ ಮಾತನಾಡಿದ, ರಟ್ಟೆಹಳ್ಳಿ ಕಬ್ಬಿಣಕಂತಿ ಮಠದ ಶ್ರೀ ಶಿವಲಿಂಗ ಸ್ವಾಮೀಜಿ ಮಾತನಾಡಿ, ಭಕ್ತರ-ಭಗವಂತನ ಮಧ್ಯೆ ಪುರೋಹಿತರು ಕಾರ್ಯ ನಿರ್ವಹಿಸುತ್ತಾರೆ. ಇಬ್ಬರನ್ನೂ ತೃಪ್ತಿಪಡಿಸುವುದು ಪುರೋಹಿತರ ಕರ್ತವ್ಯವಾಗಬೇಕಿದೆ ಎಂದರು. ಭಕ್ತರು ಹಾಗೂ ಭಗವಂತ ತೃಪ್ತಿಯಾದರೆ ಮಾತ್ರ ಪುರೋಹಿತರು ಕೈಗೊಂಡ ಧಾರ್ಮಿಕ ವಿಧಿ ವಿಧಾನಗಳಿಗೆ ಸಾರ್ಥಕತೆ ಬರುತ್ತದೆ. ಕಾಟಾಚಾರದ ಕೈಂಕರ್ಯಗಳನ್ನು ಯಾವ ಕಾರಣಕ್ಕೂ ಮಾಡಬಾರದು ಎಂದು ತಿಳಿಸಿದರು.

ಯಾವುದೇ ಕಾಯಕ ಮಾಡಲಿ ಮಾಡುವ ಕೆಲಸದಲ್ಲಿ ಆಸಕ್ತಿ ಮತ್ತು ನಿಷ್ಠೆ ಇರಬೇಕು, ಎಲ್ಲಾ ಶುಭ ಕಾರ್ಯಗಳಲ್ಲಿ ಭಕ್ತರು ಪುರೋಹಿತರನ್ನು ನಂಬಿ ತಮ್ಮ ಮನೆಗಳಿಗೆ ಕರೆಸಿಕೊಳ್ಳುತ್ತಾರೆ. ನಂಬಿಕೆಗೆ ಧಕ್ಕೆ ಬಾರದಂತೆ ಕರ್ತವ್ಯ ನಿರ್ವಹಿಸಬೇಕು ಎಂದು ಕಿವಿ ಮಾತು ಹೇಳಿದರು.

ಬೇಡ ಜಂಗಮ ಸಮಿತಿ ತಾಲ್ಲೂಕು ಅಧ್ಯಕ್ಷ ಕೆ.ಎಂ. ಪರಮೇಶ್ವರಯ್ಯ, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಎಚ್.ಎಂ. ಗಂಗಾಧರಯ್ಯ, ಕೆಪಿಸಿಸಿ ಹಿಂದುಳಿದ ವರ್ಗಗಳ ರಾಜ್ಯ ಉಪಾಧ್ಯಕ್ಷ ಎಚ್.ಎ. ಉಮಾಪತಿ ಮಾತನಾಡಿದರು.

ಕತ್ತಿಗೆ ಮಠದ ಚನ್ನೇಶಯ್ಯಸ್ವಾಮಿ, ಅಖಿಲ ಕರ್ನಾಟಕ ವೀರಶೈವ ಪುರೋಹಿತ ಮಹಾಸಭಾದ ರಾಜ್ಯಾಧ್ಯಕ್ಷ ಚನ್ನೇಶ ಶಾಸ್ತ್ರೀ ಮಠದ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಮೃತ್ಯುಂಜಯ ಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಯಗಟಿ ಶಿವಲಿಂಗಸ್ವಾಮಿ, ಹಾಸನದ ದೇವರಾಜ ಶಾಸ್ತ್ರಿ, ಹಾಗೂ ಬೆಂಗಳೂರಿನ ಚಂದ್ರಶೇಖರ ಶಾಸ್ತ್ರಿ, ಚನ್ನೇಶ ಶಾಸ್ತ್ರಿ, ಪುಟ್ಟಯ್ಯ ಶಾಸ್ತ್ರಿ, ಬಸವರಾಜ ಶಾಸ್ತ್ರಿ, ಕೆ.ಜಿ. ಮಹದೇವಸ್ವಾಮಿ, ಸೋಮಶೇಖರಯ್ಯ ಶಾಸ್ತ್ರಿ ಮತ್ತಿತರರು ವಿವಿಧ ವಿಷಯಗಳ ಕುರಿತಂತೆ ಉಪನ್ಯಾಸ ನೀಡಿದರು.

# ಪುರೋಹಿತರು, ಅರ್ಚಕರನ್ನು ಅಸಂಘಟಿತರೆಂದು ಪರಿಗಣಿಸಬೇಕು

## ಪುರೋಹಿತ ಸಂಘದ ರಾಜ್ಯಾಧ್ಯಕ್ಷ ಡಾ. ಅನಂತಮೂರ್ತಿ ಒತ್ತಾಯ



ದಾವಣಗೆರೆ, ಫೆ.3- ವೃತ್ತಿಪರ ಪುರೋಹಿತರು ಮತ್ತು ಅರ್ಚಕರ ಸಂಕುಲ ಸರ್ಕಾರಿ ಸೌಲಭ್ಯಗಳಿಂದ ವಂಚಿತರಾಗಿ ಸಂಕಷ್ಟಕ್ಕೆ ಸಿಲುಕಿದ್ದು, ಅಳಿವಿನಂಚಿಗೆ ಬಂದಿದ್ದಾರೆ. ಆದ್ದರಿಂದ ಇವರನ್ನು ಅಸಂಘಟಿತರೆಂದು ಪರಿಗಣಿಸುವಂತೆ ಕರ್ನಾಟಕ ರಾಜ್ಯ ಅಸಂಘಟಿತ ಪುರೋಹಿತ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ಸಂಸ್ಥಾಪಕ ರಾಜ್ಯಾಧ್ಯಕ್ಷ ಡಾ. ಎಂ.ಬಿ. ಅನಂತಮೂರ್ತಿ ಒತ್ತಾಯಿಸಿದರು.

ಅವರು, ಇಂದು ನಗರದ ರಂಗಮಹಲ್‌ನಲ್ಲಿ ಕರ್ನಾಟಕ ರಾಜ್ಯ ಅಸಂಘಟಿತ ಪುರೋಹಿತ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾ ಕಾರ್ಯಕಾರಿಣಿ ಸಮಿತಿ ಉದ್ಘಾಟಿಸಿ ಮಾತನಾಡಿದರು.

ಖಾಸಗಿ ದೇವಾಲಯಗಳಲ್ಲಿ ಹಾಗೂ ಪೌರೋಹಿತ್ಯ ನಡೆಸುವ ವೃತ್ತಿಪರ ಪುರೋಹಿತರು ಮತ್ತು ಅರ್ಚಕರ ಜೀವನ ಸಂಕಷ್ಟಕ್ಕೆ ಸಿಲುಕಿ ಭದ್ರತೆ ಇಲ್ಲವಾಗಿದೆ. ಸರ್ಕಾರಿ ಸೌಲಭ್ಯಗಳು ಸಿಗದಂತಾಗಿದೆ. ಯಾವುದೇ ಕ್ಷೇತ್ರದಲ್ಲೂ ಮೀಸಲಾತಿ ಇಲ್ಲ ಎಂದು ನೋವು ವ್ಯಕ್ತಪಡಿಸಿದರು.

ಮಂತ್ರ ಮತ್ತು ಬುದ್ಧಿಶಕ್ತಿಯಿಂದ ಲೋಕಕ್ಕೆ ಸುಖ-ಶಾಂತಿ ಬಯಸುತ್ತಿರುವ ಇವರನ್ನು ಅಸಂಘಟಿತ ಕಾರ್ಮಿಕರೆಂದು ಪರಿಗಣಿಸಿ ಸರ್ಕಾರದ ಅಧಿಕೃತ ಗುರುತಿನ ಚೀಟಿ ನೀಡಿ, ಸರ್ಕಾರಿ ಸೌಲಭ್ಯ, ಮಕ್ಕಳ ವಿದ್ಯಾಭ್ಯಾಸ, ಕೌಶಲ್ಯ ಅಭಿವೃದ್ಧಿ ತರಬೇತಿ, ಪಿಂಚಣಿ ಯೋಜನೆ ನೀಡಬೇಕು ಎಂದು ಆಗ್ರಹಿಸಿದರಲ್ಲದೇ, ಹಾಗೇನಾದರೂ ಗುರುತಿನ ಚೀಟಿ ನೀಡದಿದ್ದರೆ ಬೆಂಗಳೂರಿನ ವಿಧಾನ ಸೌಧದ ಬಳಿ ಪ್ರತಿಭಟನೆ ನಡೆಸಲಾಗುವುದು ಎಂದು ಸರ್ಕಾರಕ್ಕೆ ಎಚ್ಚರಿಸಿದರು.

ಕಾರ್ಯಕ್ರಮದಲ್ಲಿ ಸಂಘದ ಜಿಲ್ಲಾ ಗೌರವಾಧ್ಯಕ್ಷ ಕೆ.ಆರ್. ವರದರಾಜ್ ಅಧ್ಯಕ್ಷತೆ ವಹಿಸಿದ್ದರು. ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಹೆಚ್.ಕೆ. ನಾಗೇಂದ್ರ ಕುಮಾರ್, ರಾಜ್ಯ ಗೌರವಾಧ್ಯಕ್ಷ ಪ್ರಭು ಮೂರ್ತಿ, ರಾಜ್ಯ ಉಪಾಧ್ಯಕ್ಷರಾದ ಡಿ.ಎಸ್. ರಾಜೇಶ್, ಎಸ್. ನಾಗೇಶ್, ಜಿಲ್ಲಾಧ್ಯಕ್ಷ ಎಸ್.ಎ. ಆಂಜನೇಯ, ಉಪಾಧ್ಯಕ್ಷ ಎಂ.ಡಿ. ಮುರುಳೀಧರರಾವ್, ಕಾರ್ಯದರ್ಶಿ ಆರ್.ಬಿ. ನಾಗರಾಜ್, ಸಹ ಕಾರ್ಯದರ್ಶಿ ಎಸ್.ಎ. ವಿನಯ್, ಖಜಾಂಚಿ ರಂಗನಾಥ್ ಭಾರದ್ವಜ್, ಸದಸ್ಯರಾದ ಎಸ್. ನಾಗರಾಜ್, ಕೆ.ವಿ. ಅಮರನಾಥ್, ನಾಗೇಶ್ ಭಟ್, ಯೋಗ ನರಸಿಂಹಮೂರ್ತಿ ಸೇರಿದಂತೆ ಇತರರು ಇದ್ದರು.

## ಪಂಚಮಸಾಲಿ ಜಗದ್ಗುರುಗಳಿಂದ ಪತ್ರಕರ್ತ ದುಗ್ಗಪ್ಪಗೆ ಆಶೀರ್ವಾದ



ದಾವಣಗೆರೆ, ಫೆ.3- ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ನೀಡುವಂತೆ ಆವಾಂತರ ಪತ್ರಿಕೆ ಸಂಪಾದಕ ಹೆಚ್. ದುಗ್ಗಪ್ಪ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಸಮಾಜದ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು, ಸರ್ಕಾರಿ ನೌಕರಿ ಸೇರಿದಂತೆ, ಇನ್ನಿತರೆ ಸೌಲಭ್ಯಗಳನ್ನು ಪಡೆಯಲು ಮತ್ತು ಉನ್ನತ ಶಿಕ್ಷಣಕ್ಕಾಗಿ 2ಎ ಮೀಸಲಾತಿ ಅವಶ್ಯಕತೆ ಇದ್ದು, ಇದಕ್ಕಾಗಿ ಸಮಾಜ ಹಮ್ಮಿಕೊಂಡಿರುವ ಪಾದಯಾತ್ರೆ ಯಶಸ್ವಿಯಾಗಲೆಂದು ಶುಭ ಹಾರೈಸಿದರು.

ದುಗ್ಗಪ್ಪ ಅವರು ದಾವಣಗೆರೆ-ಆನಗೋಡು ಮಧ್ಯೆ ವಿಶ್ರಾಂತಿಗಾಗಿ ತಂಗಿದ್ದ ಕೂಡಲ ಸಂಗಮದ ಪಂಚಮಸಾಲಿ ಗುರುಪೀಠದ ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ, ಹರಿಹರದ ಪಂಚಮಸಾಲಿ ಪೀಠದ ಶ್ರೀ ವಚನಾನಂದ ಸ್ವಾಮೀಜಿಯವರ ದರ್ಶನಾಶೀರ್ವಾದ ಪಡೆದರು.

ಪಂಚಮಸಾಲಿ ಸಮಾಜವನ್ನು 2ಎ ವ್ಯಾಪ್ತಿಗೆ ಒಳಪಡಿಸುವಂತೆ ಈ ಹಿಂದೆ ಹಮ್ಮಿಕೊಂಡಿದ್ದ ಹೋರಾಟದಿಂದ ಪ್ರಯೋಜನವಾಗಲಿಲ್ಲ. ಮುಂದುವರೆದ ಭಾಗವಾಗ ಇದೀಗ ಪಾದಯಾತ್ರೆ ಹಮ್ಮಿಕೊಂಡಿದ್ದಾರೆ. ಸರ್ಕಾರ ಸಮಾಜದ ಮನವಿ ಪುರಸ್ಕರಿಸಿ 2ಎ ಮೀಸಲಾತಿ ನೀಡುವಂತೆ ದುಗ್ಗಪ್ಪ ಆಗ್ರಹಿಸಿದ್ದಾರೆ.

## ನಗರದಲ್ಲಿಂದು ಸಾರಿಗೆ ಪ್ರಾಧಿಕಾರದ ಸಭೆ

ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆಯನ್ನು ಜಿಲ್ಲಾಧಿಕಾರಿಗಳ ಕಚೇರಿ ತುಂಗಭದ್ರಾ ಸಭಾಂಗಣದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಗುವುದು ಎಂದು ಪ್ರಾಧಿಕಾರದ ಕಾರ್ಯದರ್ಶಿ ಶ್ರೀಧರ್ ಕೆ. ಮಲ್ಲಾಡದ ತಿಳಿಸಿದ್ದಾರೆ.

## ಬಸವ ಕಲ್ಯಾಣದಲ್ಲಿ ಬೇಡ ಜಂಗಮ ಸಮಾವೇಶ

ಮಲೇಬೆನ್ನೂರು, ಫೆ.3- ಅಖಿಲ ಕರ್ನಾಟಕ ಬೇಡ ಜಂಗಮ ಸಂಘಟನೆಗಳ ಒಕ್ಕೂಟದ ವತಿಯಿಂದ ಬೇಡಜಂಗಮ ಜಾತಿ ಪ್ರಮಾಣ ಪತ್ರಕ್ಕಾಗಿ ಬಿ.ಡಿ. ಹಿರೇಮಠರವರ ನೇತೃತ್ವದಲ್ಲಿ ಇದೇ ದಿನಾಂಕ 7 ರಂದು ಬೆಳಿಗ್ಗೆ 11 ಗಂಟೆಗೆ ಬೀದರ್ ಜಿಲ್ಲೆಯ ಬಸವ ಕಲ್ಯಾಣದ ಥೇರ ಮೈದಾನ ಸಭಾ ಭವನದಲ್ಲಿ ಬೇಡ ಜಂಗಮರ ಸಮಾವೇಶ ಹಮ್ಮಿಕೊಳ್ಳಲಾಗಿದೆ.

ಬೇಡ ಜಂಗಮರ ಸಂವಿಧಾನ ಬದ್ಧ ಹಕ್ಕೊತ್ತಾಯಕ್ಕಾಗಿ ನಡೆಯುತ್ತಿರುವ ಹೋರಾಟದಲ್ಲಿ ಜಂಗಮ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕೈ ಜೋಡಿಸಲು ಮನವಿ ಮಾಡಲಾಗಿದೆ. ಹೆಚ್ಚಿನ ಮಾಹಿತಿಗೆ ತಾಲ್ಲೂಕು ಕಾರ್ಯದರ್ಶಿ ನಂದಿಗಾವಿ ತಿಪ್ಪೇಸ್ವಾಮಿ-9448233997, ತಾಲ್ಲೂಕು ಸಂಚಾಲಕ ಬಿ.ಎಂ. ಹಾಲಸ್ವಾಮಿ- 9448814413, ಬಿ.ಎಂ. ಜಗದೀಶ್ವರ ಸ್ವಾಮಿ- 9448102682 ಹಾಗೂ ಉಮೇಶ್ ಮಠದ್- 7019426890 ಸಂಪರ್ಕಿಸಲು ಒಕ್ಕೂಟ ತಿಳಿಸಿದೆ.

## ಕಾಡಜ್ಜಿ ತರಬೇತಿ ಕೇಂದ್ರದಿಂದ ಇಂದು ಕೃಷಿ ತರಬೇತಿ

ಪರಿಸರ ಸ್ನೇಹಿ ಭತ್ತ ಬೆಳೆಯುವ ಕುರಿತು ಕಾಡಜ್ಜಿ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಇಂದು ಸಂಜೆ 6.30 ರಿಂದ 7.30 ವರೆಗೆ ಆನ್‌ಲೈನ್ ತರಬೇತಿ ಕಾರ್ಯಕ್ರಮ ಆಯೋಜಿಸಿದೆ.

ಇಕೋ ಅಗ್ರಿಪ್ರೂನರ್ಸ್ ಪ್ರೈ.ಲಿ.ನ ಬೇಸಾಯ ಶಾಸ್ತ್ರಜ್ಞ ಡಾ. ಎಂ. ನಾಗನ ಗೌಡ ವಿಷಯ ಮಂಡನೆ ಮಾಡಲಿದ್ದಾರೆ. ರೈತರು ಈ ಕೆಳಗೆ ನಮೂದಿಸಿದ ಗೂಗಲ್ ಮೀಟ್ ಲಿಂಕ್ ಬಳಸಿ ತರಬೇತಿ ಪ್ರಯೋಜನ ಪಡೆದುಕೊಳ್ಳಲು ಕೋರ ಲಾಗಿದೆ. ಹೆಚ್ಚಿನ ಮಾಹಿತಿಗೆ ಸಹಾಯಕ ಕೃಷಿ ನಿರ್ದೇಶಕರು, ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಕಾಡಜ್ಜಿ, ದಾವಣಗೆರೆ (9945910090, 8277928964) ಸಂಪರ್ಕಿಸಲು ಕೇಂದ್ರದ ಸಹಾಯಕ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

## ನಗರದಲ್ಲಿ ಇಂದು ಶ್ರೀ ದುರ್ಗಾ ಪೂಜೆ ಹಾಗೂ ದುರ್ಗಾ ದೀಪ ನಮಸ್ಕಾರ

ವಿಶ್ವ ಮಧ್ವ ಮಹಾಪರಿಷತ್ (ಬೆಂಗಳೂರು) ಮತ್ತು ವಿಶ್ವ ಮಧ್ವ ಮಹಾಪರಿಷತ್ (ದಾವಣಗೆರೆ) ಇವರುಗಳ ಸಹಯೋಗದಲ್ಲಿ ಲೋಕ ಕಲ್ಯಾಣಾರ್ಥವಾಗಿ ಇಂದು ಸಂಜೆ 5 ಗಂಟೆಗೆ ಪಿ.ಜೆ. ಬಡಾವಣೆಯ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಶ್ರೀ ದುರ್ಗಾಪೂಜೆ ಹಾಗೂ ದುರ್ಗಾ ದೀಪ ನಮಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

## ನಗರದಲ್ಲಿ ಕಾಂಗ್ರೆಸ್ ಕಾರ್ಮಿಕ ವಿಭಾಗದಿಂದ ಇಂದು ಪ್ರತಿಭಟನೆ

ಪ್ರಧಾನಿ ನರೇಂದ್ರ ಮೋದಿ ಸರ್ಕಾರದ ಬಜೆಟ್ ಮಂಡನೆಯಾಗಿದ್ದು, ಬಜೆಟ್‌ನಲ್ಲಿ ಪೆಟ್ರೋಲ್, ಡೀಸೆಲ್, ಬೇಳೆ ಕಾಳು, ಎಸಿ, ಟಿ.ವಿ, ಅಡುಗೆ ಎಣ್ಣೆ ಸೇರಿದಂತೆ ಅನೇಕ ದಿನಬಳಕೆ ವಸ್ತುಗಳ ಬೆಲೆಯನ್ನು ಏರಿಕೆ ಮಾಡಿರುವುದನ್ನು ಖಂಡಿಸಿ ಇಂದು ಬೆಳಿಗ್ಗೆ 11 ಗಂಟೆಗೆ ಮಹಾನಗರ ಪಾಲಿಕೆಯ ಮುಂಭಾಗದಲ್ಲಿ ಜಿಲ್ಲಾ ಕಾಂಗ್ರೆಸ್ ಕಾರ್ಮಿಕ ವಿಭಾಗದಿಂದ ಪ್ರತಿಭಟನೆ ನಡೆಯಲಿದೆ ಎಂದು ಜಿಲ್ಲಾ ಕಾಂಗ್ರೆಸ್ ಕಾರ್ಮಿಕ ವಿಭಾಗದ ಕಾರ್ಯಾಧ್ಯಕ್ಷ ಹೆಚ್.ಸುಭಾನ್ ಸಾಬ್ ತಿಳಿಸಿದ್ದಾರೆ.

## ಕೈಗಾರಿಕಾ ಪ್ರದೇಶದಲ್ಲಿ ನಿವೇಶನ ಹಂಚಿಕೆಗಾಗಿ ಅರ್ಜಿ

ಹರಿಹರ, ಫೆ.3- ಹರಿಹರ ತಾಲ್ಲೂಕು ಸಾರಥಿ-ಕುರುಬರಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ನಿವೇಶನ ಹಂಚಿಕೆಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಉದ್ಯಮಶೀಲರು 250 ರೂ. ಅರ್ಜಿ ಶುಲ್ಕದ ಡಿ.ಡಿ.ಯನ್ನು ಕೆಐಎಡಿಬಿಐ ಕಚೇರಿ ದಾವಣಗೆರೆ ಇಲ್ಲಿ ಸಲ್ಲಿಸುವುದು. ಅರ್ಜಿ ಸಲ್ಲಿಸಲು ಇದೇ ದಿನಾಂಕ 10 ಕೊನೆಯ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗೆ ಕಾರ್ಯಪಾಲಕ ಅಭಿಯಂತರರು, ಕೆಐಎಡಿಬಿ ದಾವಣಗೆರೆ ಅಥವಾ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ ದಾವಣಗೆರೆ ಕಚೇರಿಗೆ ಸಲ್ಲಿಸಲು ಕೇಂದ್ರದ ನಿರ್ದೇಶಕ ಜಯಪ್ರಕಾಶ್ ನಾರಾಯಣ ತಿಳಿಸಿದ್ದಾರೆ. ಫೋನ್: 08192-262001, 262788ಕ್ಕೆ ಸಂಪರ್ಕಿಸುವುದು.

## ಜಗಳೂರು ತಾ||ನಲ್ಲಿ ಪ್ರತಿಭಾ ಪುರಸ್ಕಾರ



ಜಗಳೂರು, ಫೆ.3 - ತಾಲ್ಲೂಕಿನ ಚದರಗೊಳ್ಳ ಶ್ರೀ ಉಮಾಮಹೇಶ್ವರ ಗ್ರಾಮಾಂತರ ಪ್ರೌಢಶಾಲೆಯಲ್ಲಿ ಗುತ್ತಿದುರ್ಗದ ಶಾನುಭೋಗ ಕೆ. ವೆಂಕಟರಾವ್ ಸೇವಾ ಟ್ರಸ್ಟ್ ಪ್ರತಿಷ್ಠಾನದ ವತಿಯಿಂದ ಪ್ರತಿಭಾ ಪುರಸ್ಕಾರ ಸಮಾರಂಭ ಹಮ್ಮಿಕೊಳ್ಳಲಾಗಿತ್ತು.

2019 ಮತ್ತು 2020 ನೇ ಸಾಲಿನಲ್ಲಿ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಂದನಾ ಮತ್ತು ಲೋಕೇಶ್ ಅವರನ್ನು ಪ್ರತಿಷ್ಠಾನದ ಅಧ್ಯಕ್ಷಜಿ ವಿ. ಕೃಷ್ಣಮೂರ್ತಿರಾವ್ ಮತ್ತು ಸದಸ್ಯರಾದ ಜಿ.ಕೆ. ಸ್ವರೂಪ ಪುರಸ್ಕರಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಶಾಲೆಯ ಮುಖ್ಯ ಶಿಕ್ಷಕ ಜಯಶೀಲ ರೆಡ್ಡಿ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಗ್ರಾಮ ಪಂಚಾಯಿತಿ ಸದಸ್ಯ ಸತೀಶ್ ಕುಮಾರ್ ಮತ್ತು ದ್ಯಾಮಣ್ಣ ಆಗಮಿಸಿದ್ದರು.

ಸಮಾರಂಭದಲ್ಲಿ ಪ್ರತಿಷ್ಠಾನದ ಕಾರ್ಯದರ್ಶಿ ಹಾಗೂ ನ್ಯಾಯಾಂಗ ಇಲಾಖೆಯ ನಿವೃತ್ತ ಶಿರಸ್ತೇದಾರ್ ಜಿ. ಕೆ. ನಾಗರಾಜ್ ರಾವ್ ಹಾಜರಿದ್ದರು.

ಹೆಚ್.ಟಿ. ವೀರೇಶ್ ಸ್ವಾಗತಿಸಿದರು. ಎಸ್. ಎನ್. ತಿಪ್ಪೇಸ್ವಾಮಿ ವಂದಿಸಿದರು. ಪುರಸ್ಕಾರದ ಜೊತೆಗೆ 2000 ರೂ. ನಗದು, ನೆನಪಿನ ಕಾಣಿಕೆ ಪ್ರಶಸ್ತಿ ಪತ್ರವನ್ನು ಪ್ರತಿಷ್ಠಾನದ ಅಧ್ಯಕ್ಷ ಕೃಷ್ಣಮೂರ್ತಿ, ಕಾರ್ಯದರ್ಶಿ ನಾಗರಾಜ್ ರಾವ್ ಮತ್ತು ಸದಸ್ಯರು ವಿತರಿಸಿದರು.

## ಡಿಕೆಶಿಗೆ ದೂರು ನೀಡಿದ ಪುರಸಭಾ ಸದಸ್ಯರು



**ಹರಪನಹಳ್ಳಿ**

ಹರಪನಹಳ್ಳಿ, ಫೆ.3 - ಇಲ್ಲಿಯ ಪುರಸಭಾ ಸದಸ್ಯರು ತಾಲ್ಲೂಕು ಕಾಂಗ್ರೆಸ್ ಪಕ್ಷದಲ್ಲಿ ತಾಂಡವವಾಡುತ್ತಿರುವ ಗುಂಪುಗಾರಿಕೆ ಕುರಿತು ಇಲ್ಲಿನ ಪುರಸಭೆಯ ಕಾಂಗ್ರೆಸ್ ಸದಸ್ಯರು ಚಿತ್ರದುರ್ಗಕ್ಕೆ ಭೇಟಿ ನೀಡಿದ್ದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿಯಾಗಿ ದೂರು ನೀಡಿದ್ದಾರೆ.

ಚಿತ್ರದುರ್ಗಕ್ಕೆ ಆಗಮಿಸಿದ ಡಿ.ಕೆ. ಶಿವಕುಮಾರ್ ಅವರನ್ನು ಇಲ್ಲಿಯ ಪುರಸಭಾ ಸದಸ್ಯರುಗಳಾದ ಎಂ.ವಿ. ಅಂಜಿನಪ್ಪ, ಗೊಂಗಡಿ ನಾಗರಾಜ್, ಉದ್ದಾರ ಗಣೇಶ್, ಟಿ.ವೆಂಕಟೇಶ್ ಹಾಗೂ ಮುಖಂಡ ಚಿಕ್ಕೇರಿ ಬಸಪ್ಪ ಅವರುಗಳು ಪಕ್ಷದಲ್ಲಿನ ಅನೇಕ ಮಾಹಿತಿಗಳನ್ನು ಹಂಚಿಕೊಂಡಿದ್ದಾರೆ.

ಈ ಕುರಿತು ಪ್ರತಿಕ್ರಿಯೆ ನೀಡಿದ ಪುರಸಭಾ ಸದಸ್ಯ ಎಂ.ವಿ.ಅಂಜಿನಪ್ಪ ಅವರು ಹರಪನಹಳ್ಳಿ ಪ್ರಸ್ತುತ ರಾಜಕಾರಣದ ಬಗ್ಗೆ ಚರ್ಚೆ ಮಾಡಿದೆವು, ಇಲ್ಲಿ ಗುಂಪುಗಾರಿಕೆ ಇರುವ ವಿಚಾರವನ್ನು ಗಮನಕ್ಕೆ ತಂದೆವು, ಲೋಕಸಭಾ ಚುನಾವಣೆಯಲ್ಲಿ ಯಾರು ವಿರೋಧ ಮಾಡಿದ್ದಾರೆ, ಪಕ್ಷದಲ್ಲಿ ಯಾರು ಗುಂಪುಗಾರಿಕೆ ಸೃಷ್ಟಿ ಮಾಡಿದ್ದಾರೆ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಕಾರ್ಯವೈಖರಿ ಸೇರಿದಂತೆ ಇತರೆ ವಿಚಾರಗಳನ್ನು ಗಮನಕ್ಕೆ ತಂದಿದ್ದೇವೆ ಎಂದರು.

ನಮ್ಮ ಮಾತನ್ನು ಆಲಿಸಿದ ಡಿ. ಕೆ.ಶಿವಕುಮಾರ್ ಅವರು, ಆದಷ್ಟು ಬೇಗ ವ್ಯತ್ಯಾಸ ಸರಿಪಡಿಸುತ್ತೇನೆ, ಯಾವುದೇ ಗುಂಪುಗಾರಿಕೆಗೆ ಅವಕಾಶ ಕೊಡುವುದಿಲ್ಲ ಎಂದು ಅಂಜಿನಪ್ಪ ಮತ್ತಿತರರು ತಿಳಿಸಿದ್ದಾರೆ.

ವ್ಯಕ್ತಿಗಿಂತ ಪಕ್ಷ ಮುಖ್ಯ ನಮಗೆ, ಎಲ್ಲರನ್ನೂ ಸಮನಾಗಿ ಕಾಣುತ್ತೇವೆ. ಯಾರಿಗೂ ತಾರತಮ್ಯ ಮಾಡಲ್ಲ ಪಕ್ಷದಲ್ಲಿ ಸಣ್ಣ-ಪುಟ್ಟ ವ್ಯತ್ಯಾಸವಿದ್ದರೆ ಸರಿಪಡಿಸುತ್ತೇವೆ, ಎಲ್ಲರಿಗೂ ಗುರುತಿಸಲು ಅವಕಾಶ ಮಾಡಿಕೊಡುತ್ತೇವೆ ಮುಂದಿನ ದಿನಗಳಲ್ಲಿ ಹಿರಿಯ ಮುಖಂಡರ ಬಳಿ ಚರ್ಚೆ ಮಾಡಿ ಸರಿಪಡಿಸುತ್ತೇನೆ ಎಂದು ಹೇಳಿದರು ಎಂದು ಅಂಜಿನಪ್ಪ ವಿವರಿಸಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ಭೂಮಿಕಾ ನಗರ, ರೆಡ್ಡಿ ಬಿಲ್ಡಿಂಗ್, ಜಯನಗರ ಬಿ ಬ್ಲಾಕ್ ಸುತ್ತ ಮುತ್ತ ಹಾಗೂ ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ರವರೆಗೆ ವಿದ್ಯಾನಗರ ಕೊನೆ ಬಸ್ ಸ್ಟಾಪ್, ವಿದ್ಯಾನಗರ ತರಳಬಾಳು ಬಡಾವಣೆ 15 ರಿಂದ 19ನೇ ಕ್ರಾಸ್‌ವರೆಗೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

**ರೂಮ್‌ಗಳು ಬಾಡಿಗೆಗೆ ದೊರೆಯುತ್ತವೆ**

ದಾವಣಗೆರೆ ನಗರದ ಹರ್ಡೇಕರ್ ಮಂಜಪ್ಪ ರಸ್ತೆಯಲ್ಲಿರುವ ಎಸ್ ಎಸ್ ವಿ ಹಾಸ್ಟೆಲ್ (Old) ಕಟ್ಟಡದ ಮೊದಲನೇ ಮಹಡಿಯಲ್ಲಿ ಬ್ಯಾಂಕ್, ಕಛೇರಿ ಮತ್ತು ವಾಣಿಜ್ಯ ಉದ್ದೇಶಕ್ಕೆ ಅನುಕೂಲವಾಗಿರುವ ಒಟ್ಟು 14 (ಹದಿನಾಲ್ಕು) ಕೊಠಡಿಗಳು ಬಾಡಿಗೆಗೆ ದೊರೆಯುತ್ತವೆ. ಆಸಕ್ತರು ಕೆಳಕಂಡ ದೂರವಾಣಿ ಸಂಖ್ಯೆಗೆ ಸಂಪರ್ಕಿಸಬಹುದಾಗಿದೆ.

ಅಧ್ಯಕ್ಷರು: ಕಟ್ಟಡ ನಿರ್ವಹಣ ಸಮಿತಿ, ಎಸ್ ಎಸ್ ವಿ ಹಾಸ್ಟೆಲ್ ಟ್ರಸ್ಟ್

98441 58658

94483 64901, 90086 37379


## ರೈತರ ಪ್ರತಿಭಟನಾ ಸ್ಥಳದಲ್ಲಿ ಅಂತರ್ಜಾಲ ಮುಂದುವರಿಕೆ

ನವದೆಹಲಿ, ಫೆ. 3 – ದೆಹಲಿಯಲ್ಲಿ ರೈತರ ಪ್ರತಿಭಟನಾ ಸ್ಥಳದಲ್ಲಿ ಈಗ ಅಂತರ್ಜಾಲ ಕಡಿತ ಮುಂದುವರೆದಿಲ್ಲ ಎಂದು ಕೇಂದ್ರ ಗೃಹ ಸಚಿವಾಲಯ ತಿಳಿಸಿದೆ. ಫೆಬ್ರವರಿ 2ರವರೆಗೆ ಈ ಹಿಂದೆ ಅಂತರ್ಜಾಲ ಕಡಿತಕ್ಕೆ ಆದೇಶ ಹೊರಡಿಸಲಾಗಿತ್ತು.

ಪ್ರತಿಭಟನೆ ನಡೆಸುತ್ತಿರುವ ಸಿಂಘು, ಟಿಕ್ರಿ ಹಾಗೂ ಘಾಜಿಪುರ ಪ್ರದೇಶಗಳಲ್ಲಿ ಜನವರಿ 29ರಿಂದ ಜನವರಿ 31ರವರೆಗೆ ಅಂತರ್ಜಾಲ ಕಡಿತಕ್ಕೆ ಆದೇಶಿಸಲಾಗಿತ್ತು. ನಂತರ ಕಡಿತವನ್ನು ಫೆ. 2ರವರೆಗೆ ಮುಂದುವರೆಸಲಾಗಿತ್ತು.

ಅಂತರ್ಜಾಲ ಕಡಿತ ಮಾಡದೇ ಇದ್ದರೂ ಸಹ ಸ್ಥಳದಲ್ಲಿ ಸಮಸ್ಯೆ ಮುಂದುವರೆಯುವ ಕಳವಳವಿದೆ. ಸಾಕಷ್ಟು ಜನರು ಸೇರಿರುವ ಕಾರಣ ಇಂಟರ್‌ನೆಟ್ ವೇಗ ಕಡಿಮೆಯಾಗಿದೆ. ಇಲ್ಲಿ ಟವರ್‌ಗಳ ಲಭ್ಯತೆಯ ಸಮಸ್ಯೆ ಇದೆ ಎಂದು ಪ್ರತಿಭಟನಾಕಾರರು ಹೇಳಿದ್ದಾರೆ.

## ದುಗ್ಗಮ್ಮನ ದೇವಸ್ಥಾನ : ನಾಳೆ



ದಾವಣಗೆರೆ, ಫೆ. 3- ನಿಟುವಳ್ಳಿಯ ಶ್ರೀ ದುರ್ಗಾಂಬಿಕಾ ದೇವಿಯ ನೂತನ ದೇವಸ್ಥಾನ ಮತ್ತು ಮೂರ್ತಿ ಪ್ರತಿಷ್ಠಾಪನಾ ವಾರ್ಷಿಕೋತ್ಸವವು ನಾಡಿದ್ದು ದಿನಾಂಕ 5ರ ಶುಕ್ರವಾರ ನಡೆಯಲಿದೆ. ಅಂದು ಬೆಳಿಗ್ಗೆ 5 ಗಂಟೆಗೆ ವಿನಾಯಕ ಪೂಜೆ, ಪುಣ್ಯಾಹ ವಾಚನ, ಕಲಾ ಹೋಮ, ನವದುರ್ಗಾ ಹೋಮ, ಅಭಿಷೇಕ, ಅಲಂಕಾರ, ಮಹಾ ಮಂಗಳಾರತಿ ನಂತರ ಪ್ರಸಾದ ವಿನಿಯೋಗವಿದೆ.

# ನಿರಂತರ ಅಧ್ಯಯನ ಶೀಲತೆಯಿಂದ ಉತ್ತಮ ಕವಿತೆಗಳ ರಚನೆ ಸಾಧ್ಯ

## ಶ್ರೀರಾಮನ ಕುರಿತ ಕವನ ವಾಚನ ಸ್ಪರ್ಧೆ ಉದ್ಘಾಟನೆಯಲ್ಲಿ ಸಾಹಿತಿ ಬಾ.ಮ. ಬಸವರಾಜಯ್ಯ ಪ್ರತಿಪಾದನೆ

ದಾವಣಗೆರೆ, ಫೆ.3- ನಿರಂತರ ಅಧ್ಯಯನ ಶೀಲತೆಯಿಂದ ಉತ್ತಮ ಕವಿತೆಗಳ ರಚನೆ ಸಾಧ್ಯ ಎಂದು ಸಾಹಿತಿ, ಹಿರಿಯ ಪತ್ರಕರ್ತ ಬಾ.ಮ. ಬಸವರಾಜಯ್ಯ ಪ್ರತಿಪಾದಿಸಿದರು.

ನಗರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಬುಧವಾರ ಸಂಜೆ ಅಖಿಲ ಭಾರತೀಯ ಸಾಹಿತ್ಯ ಪರಿಷದ್ ವತಿಯಿಂದ ಶ್ರೀ ರಾಮ ಮಂದಿರ ನಿರ್ಮಾಣಕ್ಕೆ ನಿಧಿ ಸಮರ್ಪಣಾ ಅಭಿಯಾನದ ಅಂಗವಾಗಿ 'ಅಯೋಧ್ಯೆಯಲ್ಲಿ ರಾಮಮಂದಿರ-ಹೃದಯದಲ್ಲಿ ಶ್ರೀರಾಮ ಚಂದಿರ' ವಿಷಯವಾಗಿ ಹಮ್ಮಿಕೊಂಡಿದ್ದ ಸ್ವರಚಿತ ಕವನ ವಾಚನ ಸ್ಪರ್ಧೆ ಉದ್ಘಾಟಿಸಿ, ಅವರು ಅಧ್ಯಕ್ಷೀಯ ನುಡಿಗಳನ್ನಾಡಿದರು.

ಕನ್ನಡ ಪರಂಪರೆಯಲ್ಲಿ ಬರುವ ಹಳೆಗನ್ನಡ, ನಡುಗನ್ನಡ, ಹೊಸಗನ್ನಡ, ಪ್ರಗತಿಶೀಲ ಕನ್ನಡದ ಪ್ರಕಾರಗಳನ್ನು ಓದಬೇಕು. ಭಾಷಾ ಸಂಪತ್ತನ್ನು ಹೆಚ್ಚಿಸಿಕೊಳ್ಳಲು ಸಾಂಸ್ಕೃತಿಕ ಹಾಗೂ



ಜಾನಪದ ಅಧ್ಯಯನವೂ ಅತ್ಯಗತ್ಯ ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಯಾವುದೇ ವಿಷಯದ ಅಧ್ಯಯನದ ವೇಳೆ ಸಹಾಯಕ್ಕಾಗಿ 'ಗೂಗಲ್' ಮೊರೆ ಹೋಗಲಾಗುತ್ತದೆ. ಅಲ್ಲಿ ಸಿಗುವ ಚಿಕ್ಕ ಮಾಹಿತಿಗೆ ನಮ್ಮ ಜ್ಞಾನ ಸೀಮಿತವಾಗುತ್ತದೆ. ಆದರೆ ಪುಸ್ತಕ ಓದುವ ಮೂಲಕ ಸಂಪಾದಿಸುವ ಜ್ಞಾನ ಅಮೂಲ್ಯವಾದದ್ದು. ಪುಸ್ತಕ ಓದಿದಾಗ ಸಮಗ್ರತೆ ಬರಲು ಸಾಧ್ಯ. ಪುಸ್ತಕಗಳನ್ನು ಓದುವ ಅಭ್ಯಾಸ ಬೆಳೆಸಿಕೊಳ್ಳಬೇಕು. ಪುಸ್ತಕ ವಿದ್ಯೆ ಮಸ್ತಕದ ವಿದ್ಯೆಯಾಗಬೇಕು ಎಂದು ಯುವ ಕವಿಗಳಿಗೆ ಕಿವಿ ಮಾತು ಹೇಳಿದರು.

ಪ್ರಸ್ತುತ ಕವಿಗೋಷ್ಠಿಯಲ್ಲಿ ಶ್ರೀರಾಮನ ಕುರಿತು ಕವಿತೆ ರಚಿಸಲು ಹೇಳಿರುವುದರಿಂದ ರಾಮಾಯಣವನ್ನು ಎಷ್ಟು ಜನರು, ಯಾವ ಯಾವ ರೀತಿಯಲ್ಲಿ ಬರೆದಿದ್ದಾರೆ ಎಂಬುದನ್ನು ಅರಿಯಬೇಕು. ತುಳಸಿ ರಾಮಾಯಣ, ವಾಲ್ಮೀಕಿ ರಾಮಾಯಣ, ಹೆಳವನಕಟ್ಟೆ ಗಿರಿಯಮ್ಮ ರಚಿಸಿರುವ ಚಿತ್ರಪಟ ರಾಮಾಯಣ, ಕುವೆಂಪು ರಾಮಾಯಣ ದರ್ಶನಂ ಕುರಿತು ಓದಿದ್ದರೆ ಉತ್ತಮ ಕವಿತೆಗಳನ್ನು ರಚಿಸಲು ಸಾಧ್ಯವಿತ್ತು ಎಂದು ಅಭಿಪ್ರಾಯಿಸಿದರು.

> ರಾಮಾಯಣ, ಮಹಾಭಾರತದ ಕುರಿತು ಎಡಪಂಥೀಯರು, ಬುದ್ಧಿ ಜೀವಿಗಳು, ವಿಚಾರವಾದಿಗಳು ಅವಹೇಳನ ಮಾಡುವುದು ನೋವಿನ ವಿಚಾರ.
>
> - ರಘುನಂದನ್ ಭಟ್ ನರೂರ,

> ಮಹಾಕಾವ್ಯಗಳಲ್ಲಿರುವ ಸತ್ಯದ ಬಗ್ಗೆ ತಿಳಿ ಹೇಳಬೇಕು. ಎಡ ಪಂಥೀಯರನ್ನು ದೂರವಿಡದೆ, ವಸ್ತು ನಿಷ್ಠತೆಯನ್ನು ತಿಳಿಸಿಕೊಟ್ಟಲ್ಲಿ ಮತ್ತಷ್ಟು ರಾಷ್ಟ್ರೀಯ ಭಾವನೆ ಹೆಚ್ಚಲು ಸಾಧ್ಯ
>
> - ಬಾ.ಮ. ಬಸವರಾಜಯ್ಯ


ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಅಖಿಲ ಭಾರತೀಯ ಸಾಹಿತ್ಯ ಪರಿಷದ್ ರಾಜ್ಯ ಪ್ರಧಾನ ಕಾರ್ಯದರ್ಶಿ ರಘುನಂದನ್ ಭಟ್ ನರೂರ, ರಾಮಾಯಣ, ಮಹಾಭಾರತ, ವೇದಗಳನ್ನೊಳಗೊಂಡ ನಮ್ಮ ಸಾಹಿತ್ಯಕ್ಕೆ ಜಗತ್ತಿನ ಬೇರಾವ ದೇಶದ ಸಾಹಿತ್ಯವೂ ಸರಿಸಾಟಿಯಾಗಲಾರದು ಎಂದು ಹೇಳಿದರು.

ಕಳೆದ ಐನೂರು ವರ್ಷಗಳಿಂದ ಶ್ರೀರಾಮ ಮಂದಿರ ನಿರ್ಮಾಣಕ್ಕಾಗಿ ಹೋರಾಟ ನಡೆಯಿತು. 2 ಲಕ್ಷಕ್ಕೂ ಅಧಿಕ ಜನರು ಪ್ರಾಣಾರ್ಪಣೆ ಮಾಡಿದ್ದಾರೆ. ಮಂದಿರ ನಿರ್ಮಾಣದ ಕನಸು ಈಗ ಸಾಕಾರಗೊಂಡಿದೆ. ಇಂತಹ ಸಂದರ್ಭದಲ್ಲಿ ಸಾಹಿತ್ಯ ಕ್ಷೇತ್ರದ ಮೂಲಕ ಕೊಡುಗೆ ನೀಡಲು ಪರಿಷತ್ ಮುಂದಾಗಿದೆ. 13 ಜಿಲ್ಲೆಗಳಲ್ಲಿ ಕವಿಗೋಷ್ಠಿಗಳು ಯಶಸ್ವಿಯಾಗಿ ನಡೆದಿವೆ. ಶ್ರೀರಾಮನ ಹೆಸರಿನಲ್ಲಿ 1500ಕ್ಕೂ ಹೆಚ್ಚು ಕವಿತೆಗಳು ಸೃಷ್ಟಿಯಾಗಿವೆ ಎಂದರು.

ದಾವಣಗೆರೆ ವಿವಿ ಸಿಂಡಿಕೇಟ್ ಸದಸ್ಯರಾದ ಶ್ರೀಮತಿ ವಿಜಯಲಕ್ಷ್ಮಿ ಮಾತನಾಡಿ, ಶ್ರೀರಾಮ ಎಲ್ಲರಿಗೂ ಆದರ್ಶ ಪ್ರಾಯ. ಸ್ವತಃ ಭಗವಂತನಾದ ಶ್ರೀರಾಮ, ಮಾನವನ ಅವತಾರದಲ್ಲಿ ಭೂಮಿಗೆ ಬಂದು, ಆದರ್ಶ ಜೀವನವನ್ನು ಹೇಗೆ ನಡೆಸಬೇಕೆಂಬುದನ್ನು ಜಗತ್ತಿಗೇ ತೋರಿಸಿಕೊಟ್ಟಿದ್ದಾನೆ. ಹೀಗಾಗಿ ಅವನು ಮರ್ಯಾದ ಪುರುಷೋತ್ತಮ ಎಂದು ಹೇಳಿದರು.

ಶಿಕ್ಷಕ ಪಂಚಾಕ್ಷರಯ್ಯ ಸ್ವಾಗತಿಸಿದರು. ಪರಿಷತ್‌ನ ಜಿಲ್ಲಾ ಖಜಾಂಚಿ ಪ್ರಶಾಂತ್ ಕೋಲ್ಕುಂಟೆ ನಿರೂಪಿಸಿದರು. ಪ್ರಧಾನ ಕಾರ್ಯದರ್ಶಿ ಮಹಾಂತೇಶ್ ವಂದಿಸಿದರು.

# ರಂಭಾಪುರಿ ಶ್ರೀಗಳ 30ನೇ ವರ್ಧಂತಿ ಮಹೋತ್ಸವ



ರಂಭಾಪುರಿ ಪೀಠ (ಬಾಳೆಹೊನ್ನೂರು), ಫೆ.3- ಶ್ರೀಮದ್ ರಂಭಾಪುರಿ ಜಗದ್ಗುರು ಪ್ರಸನ್ನ ರೇಣುಕ ಡಾ. ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಶ್ರೀ ರಂಭಾಪುರಿ ಮಹಾ ಪೀಠವನ್ನು ಆರೋಹಣ ಮಾಡಿ 30ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಸಂದರ್ಭದಲ್ಲಿ ಹಾಗೂ ಶ್ರೀ ಜಗದ್ಗುರುಗಳವರು ತಮ್ಮ 65ನೇ ವರ್ಷಕ್ಕೆ ಪಾದಾರ್ಪಣೆ ಮಾಡುವ ಹಿನ್ನೆಲೆಯಲ್ಲಿ ರಂಭಾಪುರಿ ಧರ್ಮ ಪೀಠದಲ್ಲಿ ಇದೇ ದಿನಾಂಕ 10 ರಿಂದ 14ರ ವರೆಗೆ ಶತರುದ್ರಯಾಗ ಜರುಗಲಿದೆ.

ಈ ಕಾರ್ಯಕ್ರಮದ ಅಂಗವಾಗಿ ಪ್ರತಿನಿತ್ಯ ಪ್ರಾತಃಕಾಲ ಲಿಂಗೋದ್ಭವ ಶ್ರೀ ಜಗದ್ಗುರು ರೇಣುಕಾಚಾರ್ಯರ, ಕ್ಷೇತ್ರನಾಥ ಶ್ರೀ ವೀರಭದ್ರಸ್ವಾಮಿ, ಶ್ರೀ ಸೋಮೇಶ್ವರ ಮಹಾಲಿಂಗ, ಶ್ರೀ ಮಹಾಗಣಪತಿ, ಶ್ರೀ ಪಾರ್ವತಿ, ಶ್ರೀ ಚೌಡೇಶ್ವರಿ, ಶ್ರೀ ಭದ್ರಕಾಳಿ ಅಮ್ಮನವರ ಹಾಗೂ ವೀರಾಂಜನೇಯ ಮಹಾಮೂರ್ತಿಗಳಿಗೆ ಮತ್ತು ಲಿಂಗೈಕ್ಯ ಜಗದ್ಗುರುಗಳವರ ಗದ್ದುಗೆಗಳಿಗೆ ರುದ್ರಾಭಿಷೇಕ, ಅಷ್ಟೋತ್ತರ, ಸಹಸ್ರ ಬಿಲ್ವಾರ್ಚನೆ, ಮಹಾಮಂಗಲ ವಿಶೇಷ ಪೂಜೆ ಜರುಗುವುದು. ನಾಡಿನಲ್ಲಿ ಶಾಂತಿ ನೆಲೆಗೊಳ್ಳಬೇಕು. ಜನರ ಭಾವನೆಗಳು ತಿಳಿಗೊಳ್ಳಬೇಕು. ಧರ್ಮ ಸಂಸ್ಕೃತಿ ಪುನರುತ್ಥಾನಗೊಳ್ಳಬೇಕೆಂಬ ಸದುದ್ದೇಶ ದಿಂದ ಈ ಪೂಜಾ ಸಮಾರಂಭವನ್ನು ಸಾಂಕೇತಿಕವಾಗಿ ಹಮ್ಮಿಕೊಳ್ಳಲಾಗಿದೆ.

ದಿನಾಂಕ 14ರ ರವಿವಾರ ಶ್ರೀಮದ್ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳವರ 30ನೇ ವರ್ಷದ ಪೀಠಾರೋಹಣ ವರ್ಧಂತಿ ಮಹೋತ್ಸವ, ಧರ್ಮ ಸಮಾರಂಭ ನಡೆಯುವುದು. ಅಂದು ಪರಂಪರೆಯಿಂದ ಬಂದ ವೀರ ಸಿಂಹಾಸನವನ್ನು ಪೂಜಿಸಿ ಶ್ರೀ ಜಗದ್ಗುರು ಗಳವರು ಪೀಠಾರೋಹಣ ಮಾಡಿ ಶಾಂತಿ ಸಾಮರಸ್ಯದ ಸಂದೇಶ ನೀಡುವರು.

# ಬೀದರ್‌ನಲ್ಲಿ ರಾಜ್ಯದ ಮೊದಲ 'ಬೇಟಿ ಸರ್ಕಲ್'



ಬೀದರ್, ಫೆ.3- 'ಬೇಟಿ ಬಚಾವೋ, ಬೇಟಿ ಪಡಾವೋ' ಜಾಗೃತಿ ಕಾರ್ಯಕ್ರಮದ ಭಾಗವಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಕಾರದೊಂದಿಗೆ ನಗರಸಭೆಯು ಇಲ್ಲಿಯ ಶರಣ ಉದ್ಯಾನದ ಸಮೀಪ ಸಬ್ಬಲ್ ಬರೀದ್ ಶಾಹಿ ಮಾರ್ಗದಲ್ಲಿ ಹೆಣ್ಣು ಮಗು ವೃತ್ತ (ಬೇಟಿ ಸರ್ಕಲ್) ನಿರ್ಮಿಸಿದೆ.

ಹೆಣ್ಣು ಮಗುವಿನ ಬಗ್ಗೆ ಪ್ರತಿಯೊಬ್ಬರೂ ಅಭಿಮಾನ ಹೊಂದುವ ಸದಾಶಯದೊಂದಿಗೆ ತಾಯಿ ಹೆಣ್ಣು ಮಗುವನ್ನು ಎತ್ತಿಕೊಂಡಿರುವ ಪುತ್ಥಳಿಯನ್ನು ಪ್ರತಿಷ್ಠಾಪಿಸಲಾಗಿದೆ. ನಗರ ಸಭೆಯು 10 ಲಕ್ಷ ರೂ. ವೆಚ್ಚದಲ್ಲಿ ಇದನ್ನು ನಿರ್ಮಿಸಿದೆ.

2018ರಲ್ಲಿ ಜಿಲ್ಲಾಧಿಕಾರಿಯಾಗಿದ್ದ ಹೆಚ್.ಆರ್. ಮಹಾದೇವ ಅವರು ಮಕ್ಕಳ ಹಕ್ಕು ಸಂರಕ್ಷಣಾ ಸಮಿತಿ ಸಭೆ ನಡೆಸುತ್ತಿದ್ದ ಸಂದರ್ಭದಲ್ಲಿ 'ಹೆಣ್ಣು ಮಗು ವೃತ್ತ' ನಿರ್ಮಿಸಲು ತೀರ್ಮಾನಿಸಿದ್ದರು. ನಂತರ ನಗರಸಭೆ ಅಧಿಕಾರಿಗಳಿಗೆ ನಿರ್ದೇಶನ ನೀಡಿ, ವೃತ್ತ ನಿರ್ಮಾಣ ಮಾಡಿಸಿದ್ದರು. ವೃತ್ತದ ಸುತ್ತಲೂ 'ಹೆಣ್ಣು ಮಗುವನ್ನು ಉಳಿಸಿ, ಹೆಣ್ಣು ಮಗುವನ್ನು ಓದಿಸಿ' ಎಂದು ಕನ್ನಡ, ಹಿಂದಿ ಭಾಷೆಯಲ್ಲಿ ಬರೆಸಲಾಗಿದೆ.

'ಸಮಾಜದಲ್ಲಿ ಹೆಣ್ಣಿಗೂ ಗೌರವ ಇದೆ ಎನ್ನುವುದನ್ನು ಮನವರಿಕೆ ಮಾಡಲು ಈ ವೃತ್ತ ನಿರ್ಮಿಸಲಾಗಿದೆ' ಎಂದು ಜಿಲ್ಲಾಧಿಕಾರಿ ಆರ್. ರಾಮಚಂದ್ರನ್ ತಿಳಿಸಿದ್ದಾರೆ. ಗಣರಾಜ್ಯೋತ್ಸವ ದಿನ ಇದನ್ನು ಸಚಿವ ಪ್ರಭು ಚವಾಣ್ ಉದ್ಘಾಟಿಸಿದರು.



## ಪಾಲಿಕೆ ಪೌರಕಾರ್ಮಿಕರ ನೌಕರರ ಸಂಘದ ಕಾರ್ಯಾಧ್ಯಕ್ಷರಾಗಿ ಬಿ.ಹೆಚ್. ವೀರಭದ್ರಪ್ಪ

ದಾವಣಗೆರೆ, ಫೆ.3 - ಮಹಾನಗರ ಪಾಲಿಕೆ ಪೌರಕಾರ್ಮಿಕರ ಮತ್ತು 'ಡಿ' ಗ್ರೂಪ್ ನೌಕರರ ಸಂಘದ ಕಾರ್ಯಾಧ್ಯಕ್ಷರಾಗಿ ಬಿ.ಹೆಚ್. ವೀರಭದ್ರಪ್ಪ ನೇಮಕಗೊಂಡಿದ್ದಾರೆ.

## 40 ನರ್ಸಿಂಗ್ ವಿದ್ಯಾರ್ಥಿಗಳಿಗೆ ಕೊರೊನಾ ಸೋಂಕು

**ದಕ್ಷಿಣ ಕನ್ನಡದ ಕಾಲೇಜು ಬಂದ್**

ಮಂಗಳೂರು, ಫೆ. 3 – ಕೇರಳದಿಂದ ಬಂದಿದ್ದ ನಲವತ್ತು ನರ್ಸಿಂಗ್ ವಿದ್ಯಾರ್ಥಿಗಳಿಗೆ ಕೊರೊನಾ ಸೋಂಕಿರುವುದು ಕಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಅಧಿಕಾರಿಗಳು ಇಲ್ಲಿನ ಕಾಲೇಜನ್ನು ಮುಚ್ಚಿದ್ದಾರೆ. ದಕ್ಷಿಣ ಕನ್ನಡದ ಉಲ್ಲಾಳದ ಆಲಿಯಾ ನರ್ಸಿಂಗ್ ಸಂಸ್ಥೆಯನ್ನು ಮುಚ್ಚಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೇರಳದಿಂದ ಬಂದು ಈ ಕಾಲೇಜಿನಲ್ಲಿದ್ದ 40 ವಿದ್ಯಾರ್ಥಿಗಳಲ್ಲಿ ಕೊರೊನಾ ಸೋಂಕು ಕಂಡು ಬಂದಿದೆ. ಆನಂತರ ಜಿಲ್ಲಾ ಆರೋಗ್ಯಾಧಿಕಾರಿಗಳು ಕಾಲೇಜಿಗೆ ಭೇಟಿ ನೀಡಿದ್ದು, ನೋಟಿಸ್ ಕಳಿಸಿದ್ದಾರೆ ಎಂದು ನಗರಪಾಲಿಕೆ ಆಯುಕ್ತ ರಾಯಪ್ಪ ತಿಳಿಸಿದ್ದಾರೆ.

## ಶಾಲೆಯಿಂದ ಹೊರಗುಳಿದ ಮಕ್ಕಳ ಸಮೀಕ್ಷೆ: ದಾಖಲೆ ನೀಡಲು ಸೂಚನೆ

ದಾವಣಗೆರೆ, ಫೆ.3- ಶಾಲೆಯಿಂದ ಹೊರಗುಳಿದ ಮಕ್ಕಳ ಸಮೀಕ್ಷೆಯನ್ನು ಮಹಾನಗರಪಾಲಿಕೆಯಿಂದ ಮಾಡಲಾಗುತ್ತಿದೆ.

ಸಮೀಕ್ಷೆಗಾಗಿ ಮಹಾನಗರ ಪಾಲಿಕೆಯ ಸಿಬ್ಬಂದಿ ತಮ್ಮ ಮನೆಗಳಿಗೆ ಭೇಟಿ ನೀಡುತ್ತಿದ್ದು, ಪಾಲಿಕೆ ಸಿಬ್ಬಂದಿ ಕರ್ನಾಟಕ ಹೆಚ್‌ಟುಹೆಚ್ ಚಿಲ್ಡ್ರನ್ ಸರ್ವೇ ಮೊಬೈಲ್ ಆ್ಯಪ್ ಸ್ಕ್ಯಾನ್ ಮಾಡಲು ನಿಮ್ಮ ಕುಟುಂಬದ ಎಲ್ಲ ಸದಸ್ಯರ ಆಧಾರ್ ಕಾರ್ಡ್, ರೇಷನ್ ಕಾರ್ಡನ್ನು ಮತ್ತು 6 ರಿಂದ 14 ವರ್ಷದ ಮಕ್ಕಳಿದ್ದಲ್ಲಿ ಮಕ್ಕಳ ಫೋಟೋ ನೀಡಿ ಸಹಕರಿಸಬೇಕೆಂದು ಮಹಾನಗರಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ ತಿಳಿಸಿದ್ದಾರೆ.

## ಸಾರಿಗೆ ಇಲಾಖೆಗೆ ಆರ್ಥಿಕ ಸಂಕಷ್ಟ

ಬೆಂಗಳೂರು, ಫೆ. 3- ಕೋವಿಡ್ ಸಾಂಕ್ರಾಮಿಕದಿಂದ ಸಾರಿಗೆ ಇಲಾಖೆ ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದು, ನೌಕರರಿಗೆ ವೇತನ ನೀಡಲೂ ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಸಾರಿಗೆ ಇಲಾಖೆ ಹೊಂದಿರುವ ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ ವಿಧಾನಸಭೆಯಲ್ಲಿಂದು ತಿಳಿಸಿದರು.

ಪ್ರಶ್ನೋತ್ತರ ಅವಧಿಯಲ್ಲಿ ಎಚ್.ಡಿ.ರೇವಣ್ಣ ಪರವಾಗಿ ಎ.ಟಿ. ರಾಮಸ್ವಾಮಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಸಾರಿಗೆ ಸಂಸ್ಥೆಯ ನಾಲ್ಕೂ ನಿಗಮಗಳು ನಷ್ಟದಲ್ಲಿವೆ. ಸದ್ಯಕ್ಕೆ ಬರುತ್ತಿರುವ ಆದಾಯದಲ್ಲಿ ವಾಹನಗಳಿಗೆ ಇಂಧನ ಭರ್ತಿ ಮಾಡಿಕೊಳ್ಳಬಹುದೇ ಹೊರತು ನೌಕರರಿಗೆ ಸಂಬಳ ನೀಡಲು ಸಾಧ್ಯವಿಲ್ಲ ಎಂದು ಇಲಾಖೆಯ ದುಸ್ಥಿತಿಯನ್ನು ಬಿಚ್ಚಿಟ್ಟರು. ಕೋವಿಡ್ ಕಾರಣದಿಂದ ಬಸ್ ಸಂಚಾರ ಸ್ಥಗಿತಗೊಂಡಿತ್ತು. ನಿಗಮಗಳಿಂದಲೂ ವೇತನ ನೀಡಲು ಸಾಧ್ಯವಾಗಲಿಲ್ಲ. ಸರ್ಕಾರವೇ 1,760 ಕೋಟಿ ರೂ. ಬಿಡುಗಡೆ ಮಾಡಿತು. ಡಿಸೆಂಬರ್‌ನಲ್ಲಿ ಅರ್ಧ ವೇತನ ನೀಡಲಾಗಿದೆ, ಜನವರಿ ವೇತನ ಇನ್ನೂ ಕೊಟ್ಟಿಲ್ಲ ಎಂದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಭೂಮಿಕಾ ನಗರ, ರೆಡ್ಡಿ ಬಿಲ್ಡಿಂಗ್, ಜಯನಗರ 'ಬಿ' ಬ್ಲಾಕ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ಹಾಗೂ ವಿದ್ಯಾನಗರ ಕೊನೆ ಬಸ್ ಸ್ಟಾಪ್, ವಿದ್ಯಾನಗರ ತರಳಬಾಳು ಬಡಾವಣೆ 15 ರಿಂದ 19ನೇ ಕ್ರಾಸ್‌ವರೆಗೆ ಹಾಗೂ ಸುತ್ತಮುತ್ತ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.




## ಮೀಸಲಾತಿ ನಿಗದಿ ವರದಿ ನೀಡುವಂತೆ ಆಯೋಗ ಸೂಚನೆ

ದಾವಣಗೆರೆ, ಫೆ.3 - ದಾವಣಗೆರೆ ತಾಲ್ಲೂಕಿಗೆ ಸಂಬಂಧಿಸಿ ದಂತೆ ಗ್ರಾಮ ಪಂಚಾಯ್ತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗೆ ಮೀಸಲಾತಿ ನಿಗದಿ ಪಡಿಸಲು ಕೈಗೊಂಡಿರುವ ಕ್ರಮದ ಕುರಿತು ವಿವರವಾದ ವರದಿ ನೀಡುವಂತೆ ಜಿಲ್ಲಾಧಿಕಾರಿಗೆ ರಾಜ್ಯ ಚುನಾವಣಾ ಆಯೋಗ ಸೂಚಿಸಿದೆ. ತಾಲ್ಲೂಕಿನ ವ್ಯಾಪ್ತಿಯ ಗ್ರಾ.ಪಂ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗೆ ಸಾಫ್ಟ್‌ವೇರ್ ಸಹಾಯದಿಂದ ಮೀಸಲಾತಿ ನಿಗದಿ ಪಡಿಸಲಾಗಿದ್ದು, ಅದನ್ನು ರದ್ದುಪಡಿಸುವಂತೆ ಕೋರಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಚಿನ್ನಸಮುದ್ರ ಶೇಖರನಾಯ್ಕ್ ಅವರು ಮನವಿ ಸಲ್ಲಿಸಿದ ಹಿನ್ನೆಲೆಯಲ್ಲಿ ಆಯೋಗದ ಅಧೀನ ಕಾರ್ಯದರ್ಶಿಗಳು ಈ ನಿರ್ದೇಶನ ನೀಡಿದ್ದಾರೆ.



**ಭಾವಪೂರ್ಣ ಶ್ರದ್ಧಾಂಜಲಿ**

ದಿನಾಂಕ 03.02.2021ರ ಬುಧವಾರ
ಸಾಯಂಕಾಲ ನಿಧನರಾದ ನಮ್ಮೆಲ್ಲರ
ಆತ್ಮೀಯ ಸ್ನೇಹಿತರು, ಎಲ್ಲರ ಪ್ರೀತಿಗೆ ಪಾತ್ರರಾಗಿದ್ದ
**ಶ್ರೀ ಜಿ.ವಿ. ರವಿ** (ಆಟೋ ಕನ್ಸಲ್ಟೆಂಟ್)
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತಾ,
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ
ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ
ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

- ✦ ದಾವಣಗೆರೆ ಜಿಲ್ಲಾ ಆಟೋ ಕನ್ಸಲ್ಟೆಂಟ್ ಅಸೋಸಿಯೇಷನ್ (ರಿ.) ದಾವಣಗೆರೆ.
- ✦ ಕೃಷ್ಣಮೂರ್ತಿ ಪವಾರ್, ಅಧ್ಯಕ್ಷರು, ದಾವಣಗೆರೆ ಜಿಲ್ಲಾ ಆಟೋ ಕನ್ಸಲ್ಟೆಂಟ್ ಅಸೋಸಿಯೇಷನ್ (ರಿ.) ದಾವಣಗೆರೆ.
- ✦ ರಾಮಜಿ, ರಾಮಜಿ ಆಟೋ ಕನ್ಸಲ್ಟೆಂಟ್
- ✦ ಸುರೇಶ್, ಎಸ್.ಟಿ.ಪಿ. ಆಟೋ ಕನ್ಸಲ್ಟೆಂಟ್
- ✦ ತಿಪ್ಪೇಶ್, ಎಸ್.ಟಿ.ಪಿ. ಆಟೋ ಕನ್ಸಲ್ಟೆಂಟ್
- ✦ ಸಿದ್ದೇಶ್, ಎಸ್.ಎಸ್. ಆಟೋಲಿಂಕ್ಸ್
- ✦ ಹನುಮಂತರಾಜು, ಎಸ್.ಎಸ್. ಆಟೋಲಿಂಕ್ಸ್
- ✦ ಹರೀಶ್ ಧರ್ಮದಾಸ್, ಬಾಲಾಜಿ ಮೋಟಾರ್ಸ್
- ✦ ಚಳ್ಳಕೆರೆ ಪ್ರಕಾಶ್
- ✦ ಕೆ.ಎಂ. ನಾಗರಾಜ ಕುಂಕುದ
- ✦ ಕೆ.ಎಂ. ಮನೋಜ್ ಕುಂಕುದ
- ✦ ಕೆ.ಎಂ. ಪ್ರಸನ್ನ ಕುಂಕುದ
- ✦ ಕೆ. ರಮೇಶ್

# ಗಡಿಗುಡಾಳ್ ಪಂಚಾಕ್ಷರಗೌಡ್ರು ನಿಧನ



ದಾವಣಗೆರೆ ನಗರದ ವಿದ್ಯಾನಗರ ವಿನಾಯಕ ಬಡಾವಣೆ 3ನೇ ಮೇನ್, 3ನೇ ಕ್ರಾಸ್‌ನಲ್ಲಿರುವ ಮಾರ್ಡನ್ ಸ್ಕೂಲ್ ಹತ್ತಿರದ ವಾಸಿ, ಹರಪನಹಳ್ಳಿ ತಾಲ್ಲೂಕು ಗಡಿಗುಡಾಳ್ ಗ್ರಾಮದ

**ಶ್ರೀ ಜಿ.ಎಂ. ಪಂಚಾಕ್ಷರಗೌಡ್ರು** (83 ವರ್ಷ)

ಅವರು ದಿನಾಂಕ 03.02.2021 ರಂದು ಬುಧವಾರ ಸಂಜೆ 7.15ಕ್ಕೆ ನಿಧನರಾದರು.
ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 04.02.2021 ರ ಗುರುವಾರ ಮಧ್ಯಾಹ್ನ 2 ಗಂಟೆಗೆ ಗಡಿಗುಡಾಳ್ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಲಿದೆ.

ವಿ. ಸೂ. : ಮೃತರ ಪಾರ್ಥಿವ ಶರೀರವನ್ನು ಗುರುವಾರ ಬೆಳಿಗ್ಗೆ 10.30ರವರೆಗೆ ದಾವಣಗೆರೆ ನಗರದ ವಿದ್ಯಾನಗರ ವಿನಾಯಕ ಬಡಾವಣೆಯಲ್ಲಿರುವ ಅವರ ನಿವಾಸದಲ್ಲಿ ಸಾರ್ವಜನಿಕರ ಅಂತಿಮ ದರ್ಶನಕ್ಕೆ ಇಡಲಾಗುವುದು.

**ಇಂತಿ ದುಃಖತಪ್ತ ಕುಟುಂಬ ವರ್ಗದವರು**
**ಮೊ. : 94483 38579, 94486 97855**

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte